
ಸಂಚಿಕೆ
೭೩

ಸಂಚಯ

ಕನ್ನಡ ಸಾಹಿತ್ಯ, ಸಾಂಸ್ಕೃತಿಕ ಪತ್ರಿಕೆ





ಸಂಚಯ ಗ್ಯಾಲರಿ







ಸಂಚಯ

ಕನ್ನಡ ಸಾಹಿತ್ಯ, ಸಾಂಸ್ಕೃತಿಕ ಪತ್ರಿಕೆ

ತ್ರೈಮಾಸಿಕ

ಸಂಪುಟ : ೧೫

ಸಂಚಿಕೆ : ೪(೭೩)

ಮಾರ್ಚ್ ೨೦೦೭

ಸಂಪಾದಕ :

ಡಿ.ವಿ. ಪ್ರಹ್ಲಾದ್

ಚಂದಾವಿವರ

ವಾರ್ಷಿಕ ಚಂದಾ : ರೂ. ೧೫೦/-

ಎರಡು ವರ್ಷಕ್ಕೆ : ರೂ. ೩೦೦/-

ಐದು ವರ್ಷಕ್ಕೆ : ರೂ. ೬೫೦/-

ಸಂಪರ್ಕ ವಿಳಾಸ

ನಂ. ೧೦೦, ೨ನೇ ಮುಖ್ಯರಸ್ತೆ,
೬ನೇ ಬ್ಲಾಕ್, ೩ನೇ ಹಂತ,
೩ನೇ ಘಟ್ಟ, ಬನಶಂಕರಿ
ಬೆಂಗಳೂರು - ೫೬೦ ೦೮೫
ಫೋನ್ ನಂ. ೦೮೦-೨೬೭೯೧೯೨೫
ಮೊಬೈಲ್: ೯೮೪೪೦ ೬೩೫೧೪

email:
prahlad118@yahoo.com

ಮುಖಪುಟ ಹಾಗೂ ಒಳಪುಟಗಳ
ಚಿತ್ರಗಳು : ಕೆ.ಪಿ.ತೇಜಸ್ವಿ
'ಮಾಯಾಲೋಕ'ದಿಂದ

ಈ ಸಂಚಿಕೆ

ಪೂರ್ಣಚಂದ್ರ ತೇಜಸ್ವಿ ಅವರ

ನೆನಪುಗಳಿಗೆ

ಈ ಸಂಚಿಕೆಯಲ್ಲಿ...



ಲೇಖನಗಳು...

✦ 'ಅಪರೂಪದ ಹಕ್ಕಿ'ಯ ಬೆನ್ನು ಹತ್ತಿ...
ಡಿ.ಸಿ. ಗೀತಾ ೫

✦ ತೀನಂಶ್ರೀ ದಿನಚರಿಯಿಂದ ೧೧

✦ ಸಂಸ್ಕಾರ ಸಂದರ್ಭ ಕೆ.ವಿ. ತಿರುಮಲೇಶ್ ೧೭

ಕಾವ್ಯ ಸಂಚಯ 31

ವಾಸುದೇವ ನಾಡಿಗ್
ಚಿದಾನಂದ ಸಾಲಿ
ಎಂ. ವ್ಯಾಸ
ಬಾಲಸುಬ್ರಹ್ಮಣ್ಯ ಕಂಜರ್ಪಣೆ
ಲಲಿತಾ ಸಿದ್ದಬಸವಯ್ಯ
ವೆಂಕಟ್ರಮಣಗೌಡ
ಕ.ವೆಂ. ರಾಜಗೋಪಾಲ

ಸಂಕಿರಣ - ೯ 41

ಸವಿತಾ ನಾಗಭೂಷಣ ಕಾವ್ಯದ ಕುರಿತು
ಸಿರಾಜ್ ಅಹ್ಮದ್
ಡಾ. ಕವಿತಾ ರೈ ಬಿ.ಆರ್.
ಪ್ರತಿಭಾ ನಂದಕುಮಾರ್
ಸವಿತಾ ನಾಗಭೂಷಣ

ಪುಸ್ತಕ ಪರಿಚಯ
ಆನಂದ ಝುಂಜರವಾಡ 71
ಡಾ. ಎಲ್.ಜಿ. ಮೀರಾ



ಹೊಳೆದದ್ದು ತಾರೆ ಉಳಿದದ್ದು ಆಕಾಶ

ಪ್ರಿಯ ಓದುಗರೆ,

ಇವತ್ತು ರಜೆಯ ದಿನ. ಬೇಸಿಗೆಯ ರಣಹಗಲಾದ್ದರಿಂದ ಕಾವೇರಿ ತೀರದ ಗೋಸಾಯಿ ಘಟ್ಟದಲ್ಲಿ ಜನ ಬೆಲ್ಲಕ್ಕೆ ಮುತ್ತಿದ ನೊಣಗಳ ಹಾಗೆ ಹೆಣ್ಣು-ಗಂಡು ಮುದುಕರು ಮಕ್ಕಳೆನ್ನದೆ ತಂತಮ್ಮ ಆದಿಮ ರೂಪು-ವಿನ್ಯಾಸಗಳಲ್ಲಿ ನೀರಿಗಿಳಿದಿದ್ದಾರೆ. ಮೊಣಕಾಲುದ್ದ ಹರಿಯುತ್ತಿರುವ ಕಾವೇರಿಯ ನೀರೂ ಬೆಚ್ಚಗಿದೆ. ಅದು ಹರಿದುಹೋಗುವ ದಿಕ್ಕಾಗಲೀ ಅದರ ಪಾಲಾಗಲೀ ಗೊತ್ತಾದರೂ ನೆನಪಾಗದ ಗಳಿಗೆ ಇದು. ಮಂಡ್ಯದಲ್ಲಿ ವಾಹನಗಳನ್ನು ಸಾಲುಗಟ್ಟಿಸಿ ಕಾಯಿಸಿದ ರೈತರ ಆಕ್ರೋಶಕ್ಕೆ ಒಳಗೊಳಗೇ ಹಿಡಿ ಶಾಪ ಹಾಕಿ, ಈ ಥರ ರಸ್ತೆ ತಡೆ ನಡೆಸುವುದರಿಂದ ಸಾಧಿಸುವುದೇನು ಅನ್ನುವ ದೊಡ್ಡ ತಾತ್ವಿಕ ಮಾತುಗಳನ್ನಾಡಿ ರಜೆಯ ಮೋಜಿನಲ್ಲಿ ಮೈಮರೆತ ಸಮೂಹ ನಮ್ಮದು. ನಮ್ಮ ಸಮೂಹದ ಹಾಗೇ ಸರ್ಕಾರ. ಅದು ಕಾವೇರಿಯ ನಮ್ಮ ಪಾಲಿನ ಬಗ್ಗೆ ಮಾತಾಡಲೇಬೇಕಾದಾಗ, ದನಿ ಎತ್ತಿ ಪ್ರತಿಭಟಿಸಬೇಕಾದಾಗ ಬಾಯಿ ಹೊಲಿದುಕೊಂಡು ತೆಪ್ಪಗಿತ್ತು. ಕಾವೇರಿ ಚಳವಳಿಗೆ ಸಮರ್ಥವಾದ ನಾಯಕತ್ವವೂ ದೊರಕಲಿಲ್ಲ, ಇತಿಹಾಸ ಮರುಕಳಿಸುತ್ತಿದೆ. ಮೌನವಾಗಿ ನಮ್ಮ ನಾಯಕರು ಪ್ರತಿಭಟನೆಯ ಸ್ವರ ಹೊಸಕಿ ಬರೀ ನಾಟಕ ಮಾಡಿದರು. ಕನ್ನಡಿಗರದೇ ಒಂದು ಪ್ರಬಲವಾದ ರಾಜಕೀಯ ಪಕ್ಷ ಇದ್ದಿದ್ದರೆ?

★

ಅವತ್ತು ಗೆಳೆಯರೊಬ್ಬರ ಎಸ್ಸೆಮ್ಮೆಸ್. ತೇಜಸ್ವಿ ಇನ್ನಿಲ್ಲ ಅಂತ. ಇದು ಸುಳ್ಳಿರಬೇಕು ಅನ್ನಿಸ್ತು. ಮನಸ್ಸು ದೇವರೇ ಇದು ಸುಳ್ಳಾಗಿರಲಿ ಅಂತ ಬಯಸುತ್ತಿತ್ತು. ಆ ಸಾವು ಹುಟ್ಟಿಸುವ ಖಾಲಿತನ ಜೀರ್ಣಿಸಿಕೊಳ್ಳಲು ಬಹಳ ಕಾಲ ಬೇಕು.

ಅವತ್ತು 'ಪ್ರಗತಿರಂಗದ' ರ್‍ಯಾಲಿ. ಕಬ್ಬನ್ ಪಾರ್ಕಿನಿಂದ ನ್ಯಾಷನಲ್ ಕಾಲೇಜು ಮೈದಾನದ ತನಕ ಮೆರವಣಿಗೆ, ಅದಕ್ಕೆ ಸೇರಿಕೊಳ್ಳದ ನಾವು ಕೆಲವರು ರ್‍ಯಾಲಿಗಿಂತ ಮುಂದೆ ಹೆಜ್ಜೆ ಹಾಕಿದ್ದೆವು. ಅಲ್ಲೊಂದು ಕಾಂಪೌಂಡಿಗೊರಗಿಕೊಂಡು ನಿಂತಿದ್ದವರೊಬ್ಬರನ್ನು ಗೆಳೆಯನೊಬ್ಬ ಅವರೇ ತೇಜಸ್ವಿ ಅಂತ ತೋರಿಸಿದ್ದ, ಹಾಗಿದ್ದರೆ ಮಾತಾಡಿಸಲೇಬೇಕು. ಹತ್ತಿರ ಹೋಗಿ ನೀವೇನಾ ಸಾರ್ ತೇಜಸ್ವಿ? ಅಂದದ್ದಕ್ಕೆ ಹೌದು ಅಂತ ಸಂಕೋಚದಿಂದ ನಕ್ಕರು. ನಮಗೂ ಹೆಚ್ಚು ಮಾತು ಹೊರಡಲಿಲ್ಲ, ಏನೋ ಒಂದೆರಡು ಮಾತಾಡಿ ಜಾಗ ಖಾಲಿ ಮಾಡಿದೆವು. ಅವತ್ತಿನ 'ಪ್ರಗತಿ ರಂಗ'ದ ಬಹಿರಂಗ ಸಭೆಯಲ್ಲಿ ತೇಜಸ್ವಿಯವರ ಮಾತು ತುಂಬಾ ಭಿನ್ನವಾಗಿತ್ತು. ವಾಸ್ತವಕ್ಕೆ ಹತ್ತಿರವಾಗಿತ್ತು.

ತೇಜಸ್ವಿ ನಮಗೆ ಗೊತ್ತಿರುವುದು ಅವರ ಪ್ರಯೋಗಶೀಲ ಲವಲವಿಕೆಯ ಬರವಣಿಗೆಗಳ ಮೂಲಕ. ನಮ್ಮ ಇತರ ಬುದ್ಧಿಜೀವಿ ಪಂಡಿತ ಲೇಖಕರು ಬದುಕಿದ್ದಕ್ಕಿಂತ, ಬರೆದುದ್ದಕ್ಕಿಂತ ಭಿನ್ನವಾದ ದಾರಿ ತುಳಿದು ಮಾದರಿ ರೂಪಿಸಿದ ಲೇಖಕ. ಭೌತಿಕವಾಗಿ ಅವರು ಬದುಕಿಲ್ಲ ಎನ್ನುವುದು ತುಂಬಾ ನೋವಿನ, ವಿಷಾದದ ವಿಚಾರ. ತೇಜಸ್ವಿ ಹೀಗೆ, ಹಾಗೆ ಅಂತೆಲ್ಲಾ ಗೆಳೆಯರು, ಗೊತ್ತಿರುವವರ ಮೂಲಕ ಕೇಳಿಸಿಕೊಂಡು, ಅಪರೂಪಕ್ಕೆ ಯಾವುದೋ ಸಭೆ, ಸಮಾರಂಭಗಳಲ್ಲಿ ಅವರ ನಿಜಕ್ಕೆ ಹತ್ತಿರದ ಮಾತು ಕೇಳಿ, ಅವರ ಅನೇಕ ಉಡಾಫೆ ನಿಲುವುಗಳನ್ನು ಒಪ್ಪಿಕೊಂಡೂ ಒಂದು ಆರಾಧನಾ ಭಾವ, ಮೆಚ್ಚುಗೆ ಅವರ ಬಗ್ಗೆ ನಮ್ಮೆಲ್ಲರಲ್ಲೂ ಇತ್ತು.

ಬಹಳ ಹಿಂದೆ ಸಂಚಯದಲ್ಲಿ ಪ್ರಕಟಿಸಿದ್ದ ಅವರ ಸಂದರ್ಶನ 'ಬಗೆ ತೆರೆದ ಬಾನು' ಪುಸ್ತಕಕ್ಕೆ ಬಳಸಿಕೊಳ್ಳಲು ಅನುಮತಿ ಕೋರಿ ಬರೆದಾಗ, ಅದು ನನ್ನ ಕಾಪಿರೈಟ್ ಉಳ್ಳ ಬರಹವಲ್ಲ, ನಿಮಗೆ ಬೇಕಾದ್ದು ಮಾಡಿಕೊಳ್ಳಿ ಅಂತ ಬರೆದರು. ೨೦೦೨ರಲ್ಲಿ ಅವರ ಸಾಹಿತ್ಯದ ಬಗ್ಗೆಯೇ ಒಂದು ವಿಶೇಷ ಸಂಚಿಕೆ ಮಾಡಿದ್ದಾಗಲೂ ಉಹುಂ, ನಾವೂ ಅವರನ್ನು ಕೇಳಲಿಲ್ಲ, ಅವರೂ ಒಂದು ಮಾತೂ ಹೇಳಲಿಲ್ಲ. ಆದರೆ ಓದುಗರು ಮೆಚ್ಚಿಕೊಂಡರು. ಒಂದು ಕಾಪಿಯೂ ಉಳಿಯದ ಹಾಗೆ ಬಾಚಿಕೊಂಡರು. ತನ್ನ ಬಗ್ಗೆ ಇಷ್ಟೆಲ್ಲಾ ನಡೆದರೂ ಒಂದೂ ಮಾತಾಡದ ಸಂಯಮ ಹಾಗೂ ವಿಮುಖತೆ, ತಮ್ಮ ಪ್ರತಿ ಮಾತೂ ಅಮೂಲ್ಯ, ಚಾರಿತ್ರಿಕ ದಾಖಲೆ ಅಂದುಕೊಂಡು ವರ್ತಿಸುವ ಅನೇಕ ಲೇಖಕರ ಮಧ್ಯೆ ತೇಜಸ್ವಿ ವಿಸ್ಮಯ ಹಾಗೂ ವೈರುಧ್ಯ. ಅದೇ ಅವರ ವೈಶಿಷ್ಟ್ಯವೂ ಹೌದು. ಈ ಮಾತು ಎಷ್ಟೇ ಕ್ಲೀಷೆ ಅನ್ನಿಸಿದರೂ ತೇಜಸ್ವಿ ಸಾವು ಕನ್ನಡ ಸಾಹಿತ್ಯ ಜಗತ್ತಿಗಾದ ಬಹು ದೊಡ್ಡ ನಷ್ಟ

ಮತ್ತೆ ಮುಂದಿನ ಸಂಚಿಕೆಗೆ,



ನಿಮ್ಮ
ಸಂಪಾದಕ

‘ಅಪರೂಪದ ಹಕ್ಕಿ’ಯ ಬೆನ್ನು ಹತ್ತಿ....



◆ ಡಿ.ಸಿ.ಗೀತಾ

ಅದೊಂದು ಕನಸೋ, ನನಸೋ! ದಿನಾಂಕ ೨೩-೧೨-೦೩ರ ಭಾನುವಾರ ಸಂಜೆ ಬೆಂಗಳೂರಿನ ಚಿತ್ರಕಲಾ ಪರಿಷತ್ತಿಗೆ ಹೋಗುವಾಗ್ಗೆ ಅಪರೂಪದ ಹಕ್ಕಿ ತೇಜಸ್ವಿಯವರೊಂದಿಗೆ ಸಂವಾದ ಆರಂಭವಾಗುತ್ತಿತ್ತು. ಆ ದಿನ ಎಷ್ಟೊಂದು ಕಣ್ಣುಗಳಲ್ಲಿ ಸೆರೆಯಾಗಿದ್ದ ಆ ಹಾಡುಹಕ್ಕಿಯನ್ನು ನನ್ನ ಕಣ್ಣು, ಕಿವಿಗಳಿಗೆ ತುಂಬಿಕೊಳ್ಳುವ ಭರದಲ್ಲಿ ಅಂದು ಉದ್ಘಾಟಿಸಿದ್ದ ‘ಹಾರಾಡುವ ಹಾಡುಗಳ’ನ್ನು ನೋಡಲಾಗಲಿಲ್ಲ. ಇನ್ನೂ ಮೂರು ದಿನ ಇರುತ್ತದಲ್ಲ ಆತುರಾತುರದಲ್ಲಿ ನೋಡದೆ, ನಿಧಾನವಾಗಿ ನೋಡಿದರಾಯಿತೆಂದುಕೊಂಡು ಸಂವಾದದ ಮಾತುಗಳನ್ನು, ಕುವೆಂಪು ಗೀತೆಗಳನ್ನು ಹಾಗೇ ತಬರನನ್ನೂ ಮೆಲುಕು ಹಾಕುತ್ತಾ ಹಿಂದಿರುಗಿದೆ.

ಮಾರನೆಯ ದಿನವೂ ಕಾಡುತ್ತಲೇ ಇದ್ದ ಹಕ್ಕಿಗಳನ್ನು ನೋಡಲಾಗಲೇ ಇಲ್ಲ. ಮಂಗಳವಾರ ಸಂಜೆ ಕಾಲೇಜು ಮುಗಿಸಿ ಏನಾದರಾಗಲೀ ನೋಡಲೇಬೇಕೆಂದು ಪ್ರತಿಜ್ಞೆಯನ್ನೂ ಮಾಡಿಕೊಂಡೆ. ಈ ಮೊದಲೇ ನನ್ನೊಳಗೇ ಆವರಿಸಿದ್ದ ಎಷ್ಟೊಂದು ಹಕ್ಕಿಗಳು! ಬೆಳಗ್ಗೆ ಕಾಲೇಜಿನಲ್ಲಿ ಮೊದಲೆರಡು ಗಂಟೆಯ ತರಗತಿಗಳನ್ನು ಮುಗಿಸಿ, ಮತ್ತೆ ಮಧ್ಯಾಹ್ನದ ಹೊತ್ತಿಗೆ ಹಿಂದಿರುಗಲೇಬೇಕಾಗಿತ್ತು. ನನ್ನ ಖಾಸಗಿ ಕೆಲದ ಒತ್ತಡದಲ್ಲಿ ಎರಡು ದಿನಗಳಿಂದ ಬೆಳಗಿನವರೆಗೂ ಕಾಡುತ್ತಿದ್ದ ಮನದೊಳಗಿದ್ದ ಹಕ್ಕಿಗಳು ಇದ್ದಕ್ಕಿದ್ದಂತೆ ಎಲ್ಲಿಯೋ ಮಾಯವಾಗಿಬಿಟ್ಟಿದ್ದವು! ಆ ಕೆಲಸ ಮುಗಿಸಿ ಚಿತ್ರಕಲಾ ಪರಿಷತ್ತಿನ ಮುಂದೆಯೇ ಹಾದುಹೋಗುತ್ತೇನೆಂದು ಕ್ಷಣ ಮನಸ್ಸಿಗೆ ಹೊಳೆದದ್ದೇ ಮಾಯವಾಗಿದ್ದ ಹಕ್ಕಿಗಳು ಮತ್ತೆ ನನ್ನೊಳಗೆ ಹಾರಾಡತೊಡಗಿದವು. ಈಗಲೇ ಈ ಕ್ಷಣವೇ ಒಳ ಹೊಕ್ಕರೆ ಹೇಗೆ?

ಎಂದು ಅನಿಸಿದ್ದೇ ಇಳಿಯಲು ಎದ್ದುನಿಂತಾಗ, ಹತ್ತಿರದ ಬಸ್ ನಿಲ್ದಾಣವನ್ನು ಬಿಟ್ಟು ಬಸ್ಸು ಮುಂದೆ ಸಾಗಿತ್ತು. ಮತ್ತೆ ಮನಸ್ಸು 'ಆತುರ ಸಲ್ಲ ಸಂಜೆ ಬಂದು ನಿಧಾನ ನೋಡಿದರಾಯ್ತೆ'ಂದು ತಿಳಿಹೇಳಿತು. ಸಹಜವಾಗೇ ಚಿತ್ರಕಲಾ ಪರಿಷತ್ತಿನ ಕಡೆಗೇ ನೆಟ್ಟಿದ್ದ ಕಣ್ಣುಗಳಿಗೆ ಅದರೊಳಗೆ ಹೋಗುತ್ತಿದ್ದ ಗೆಳತಿ ಬೀಳಬೇಕೆ? ಇನ್ನು ಮನಸ್ಸು ತಡೆಯಲಾರದೆ ಇಳಿದುಬಿಡೋಣವೆಂದು ಮತ್ತೆ ಎದ್ದೆ. ೨-೩ ಸಲ ಎದ್ದು ಕೂತಿದ್ದನ್ನು ಗಮನಿಸಿದ ಕಂಡಕ್ಟರ್ 'ಎಲ್ಲಿ ಇಳೀಬೇಕು?' ಎಂದು ಪ್ರಶ್ನಿಸಿದ್ದಕ್ಕೆ ಉತ್ತರಿಸುವ ವ್ಯವಧಾನವೂ ಇರಲಿಲ್ಲ. ಆ ವೇಳೆಗಾಗಲೇ ಬಸ್ಸು ಮುಂದಿನ ನಿಲ್ದಾಣ ತಲುಪಿತ್ತು.

ದಡದಡನೆ ಇಳಿದವಳೇ ರಸ್ತೆ ದಾಟಿ ಆ ಕ್ಷಣವೇ ಬಂದ ಮತ್ತೊಂದು ಬಸ್ ಹತ್ತಿ ಚಿತ್ರಕಲಾ ಪರಿಷತ್ತಿನ ಮುಂದೆ ಇಳಿದಿದ್ದೆ! ಅಕಸ್ಮಾತ್ತಾಗಿ 'ಅಪರೂಪದ ಹಕ್ಕಿ' ಸಿಕ್ಕರೆ ತನ್ನ ಕ್ಯಾಮೆರಾದಲ್ಲಿ ಹೇಗಾದರೂ ಸೆರೆಹಿಡಿಯಲೆಂದೇ ಕ್ಯಾಮರಾ ಸಮೇತ ಬಂದಿದ್ದ ಗೆಳತಿ ಆಗಷ್ಟೇ ನನ್ನನ್ನು ನೆನಪಿಸಿಕೊಂಡು 'ಇವಳೂ ಇದ್ದಿದ್ರೇ' ಅಂತ ಅಂದುಕೊಳ್ಳುವಾಗ್ಗೆ ನಾನೇ ಪ್ರತ್ಯಕ್ಷ! ತಕ್ಷಣ ತಬ್ಬಿಬ್ಬಾಗಿದ್ದಳವಳು. ಅಕಸ್ಮಾತ್ತಾಗಿ ಗೆಳತಿಯನ್ನು ಕಂಡಂತೆ ತೇಜಸ್ವಿಯವರೂ ಮಾತನಾಡಲು ಸಿಕ್ಕರೆ ಎಂದುಕೊಂಡೇ ನಾನು ಒಳ ಹೊಕ್ಕಿದ್ದೆ. ಅರೆ 'ಅಪರೂಪದ ಹಕ್ಕಿ' ತೇಜಸ್ವಿ.

ಯಾರ್ಯಾರೊಂದಿಗೋ ಹರಟುತ್ತಾ ನಿಂತಿದ್ದಾರೆ! ಇದು ಕನಸಲ್ಲವಷ್ಟೆ? ಸಿಕ್ಕಾಗ ಏನೆಲ್ಲಾ ಮಾತನಾಡಬೇಕೆಂದು ಕನಸು ಕಟ್ಟಿದ್ದವಳಿಗೆ, ಕ್ಷಣ ಎಲ್ಲವೂ ಮರೆತುಹೋಗಿ ಏನೂ ಏನೂ ಹೊಳೆಯುತ್ತಿಲ್ಲ! ಮಾತನಾಡಿಸಲೇಬೇಕೆಂಬ ತೀವ್ರತೆ. ನಾಲಿಗೆಗೆ ಒಂದು ಪದವೂ ಬಾರದು. ಗೆಳತಿಯ ಒತ್ತಾಯ ಬೇರೆ: 'ಏನಾದರೂ ಮಾತಿಗೆ ಆರಂಭಿಸಿಬಿಡು.' ಏನಾದರೂ ಹೇಗೆ ಆರಂಭಿಸುವುದು? ಹರಟೆ ಹೊಡೆಯಲು ಸಮಯವಾದರೂ ಎಲ್ಲಿದೆ? ಇನ್ನೇನು ಮಾತನಾಡಿಸಿಯೇ ಬಿಡಬೇಕು, ಇನ್ನಾರೊಂದಿಗೋ ಅವರ ಮಾತು. ಉಹುಂ, ಆಗಲೇ ಇಲ್ಲ. ಹಿಂದಿರುಗಿ ನೋಡುತ್ತೇನೆ. ಆ ಮಹರಾಯ್ತಿ ನನ್ನನ್ನು ಮುಂದೆ ಬಿಟ್ಟು ತಾನು ಮಾತ್ರ ಅಲ್ಲೆಲ್ಲೋ ನಿಂತೇಬಿಟ್ಟಿದ್ದಾಳೆ! ಮತ್ತೆ ಅವಳನ್ನೆಳೆದು ತರುವಾಗ್ಗೆ ಈ 'ಅಪರೂಪದ ಹಕ್ಕಿ'ಯೇ ಮಾಯ! ಇವಳಿಗೆ ಹಿಡಿಹಿಡಿ ಬೈಯುತ್ತ (ಬೇರೆಯವರನ್ನು ಹಳ್ಳಕ್ಕೆ ದಬ್ಬಿ ಆಳ ನೋಡುವವಳು... ಇತ್ಯಾದಿ) ಕಣ್ಣುಗಳು ಹುಡುಕಾಡಿದಾಗ ಅದಾಗಲೇ ಚಿತ್ರಕಲಾ ಪರಿಷತ್ತಿನ ವರ್ಣಚಿತ್ರಗಳನ್ನು ನೋಡುವುದರಲ್ಲಿ ತಲ್ಲೀನವಾಗಿಬಿಟ್ಟಿತ್ತು. ಮತ್ತೆ ಆ ಹಕ್ಕಿ ಹಿಂದಿರುಗುವವರೆಗೆ ಕಾಯಲೇಬೇಕು... ಅಗೋ ಬಂದೇ ಬಂತು. ಇನ್ನು ಬಿಟ್ಟರೆ ಹಾರೇ ಬಿಡಬಹುದು. (ಆಚೆ ಮುತ್ತುವ ರಾಶಿ ರಾಶಿ ಜನ ಬೇರೆ).

'ಸರ್ ನಮಸ್ಕಾರ.'

'ನಮಸ್ಕಾರ.'

'ಹೇಗಿದ್ದೀರಿ?'

'ಚೆನ್ನಾಗಿದ್ದೀನಿ' – ನಗುಮೊಗದ ಪ್ರತ್ಯುತ್ತರ.

ಮುಂದಕ್ಕೆ ಮಾತುಗಳೇ ಬರುತ್ತಿಲ್ಲ, ಪಕ್ಕದಲ್ಲಿದ್ದವಳಾದರೂ ಏನಾದರೂ ಮಾತನಾಡಿಸಲಿ ಎಂದು ಪಕ್ಕಕ್ಕೆ ತಿರುಗಿದರೆ ಅವಳಿಲ್ಲವೇ ಇಲ್ಲ! ಏನೂ ಹೊಳೆಯದೆ, 'ನಿಮ್ಮ ಸಂವಾದ

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೆ' ಪೆದ್ದುಪೆದ್ದಾಗಿ ಹೇಳಿದ್ದೆ. ಮತ್ತದೇ ನಗು... ಇಷ್ಟು ಮಾತಾಡುವಾಗ್ಗೆ ಮೇಲೆ ಕೆಲವು ವರ್ಣಚಿತ್ರಗಳನ್ನು ನೋಡಲು ಹೊರಟಿದ್ದರು.

'ಸರ್, ಮೇಲೆ ಚಿತ್ರಗಳನ್ನು ನೋಡುವುದಿದೆಯಾ?'

'ಅದಕ್ಕಾಗೇ ಹೋಗ್ತಾ ಇರೋದು!' ನನ್ನದು ಪೆದ್ದು ನಗು.

'ಸರಿ ಹೋಗಿ ಬನ್ನಿ. ಇಲ್ಲೇ ಇರ್ತೀನಿ.' ವಾಪಸ್ಸಾದವಳು ಗೆಳತಿಗೆ ಮತ್ತೆ ಹಿಡಿಶಾಪ ಹಾಕಿದೆ. ಅವಳು, 'ನಂಗೇನು ಗೊತ್ತು ನೀನು ಅವರೊಟ್ಟಿಗೆ ಟಿಕೆಟ್ ಕೊಳ್ಳದೆ ನುಗ್ಗೀಯ ಅಂತ. ಮೇಲೆ ಹೋಗಬೇಕಾದ್ರೆ ಟಿಕೆಟ್ ಕೊಳ್ಳಬೇಕು. ಜೊತೆಗೆ ನಮ್ಮನ್ನು ತಡೆದರು' ಅಂದಳು. ಅದು ಗೊತ್ತಿದ್ದರೂ ಆ ಕ್ಷಣ ನನ್ನ ತಲೆಗೆ ಹೋಗಿರಲಿಲ್ಲ, ಮೇಲೆ ಹೋಗುವ ಉದ್ದೇಶವೂ ನನ್ನದಾಗಿರಲಿಲ್ಲ, ಇನ್ನು ಅರ್ಧ-ಮುಕ್ಕಾಲು ಗಂಟೆ ಕೆಳಗಿಳಿಯೋಲ್ಲ ಅನ್ನಿಸ್ತು. ಕೈಗೆ ಸಿಕ್ಕಿದ್ದು ಬಾಯಿಗೆ ಬಂದಿರಲಿಲ್ಲ. ಅಯ್ಯೋ ಸಿಕ್ಕಿದ್ದ ಹಕ್ಕಿ ಮತ್ತೆ ತಪ್ಪಿಸಿಕೊಂಡಿತಲ್ಲಾ ಅಂದುಕೊಳ್ಳುತ್ತಲೇ ಹಿಂದಿರುಗಿದರೆ, ಹಕ್ಕಿಗಳೋ ಹಕ್ಕಿಗಳು! ಎದ್ದೇ ಬರುವಂತಿದ್ದ ಆ ಛಾಯಾಚಿತ್ರಗಳಲ್ಲೂ ಎಷ್ಟೊಂದು ಜೀವಂತಿಕೆ! ಎಲ್ಲವನ್ನೂ ಕಣ್ಣಲ್ಲಿ ಕಣ್ಣಿಟ್ಟು ನೋಡಿದ್ದಾಯ್ತು. (ನೋಡನೋಡುತ್ತಾ ತೇಜಸ್ವಿಯವರು ಬರೆದ ಪರಿಸರದ ಕತೆಗಳ, ಸುಸ್ಮಿತಾ ಮತ್ತು ಹಕ್ಕಿ ಮರಿಯ ನೆನಪು. ಸುಸ್ಮಿತಾ ನಾನೇ ಎಂಬ ಭ್ರಾಂತಿ ಬೇರೆ!) ಇನ್ನೂ ಮೇಲೆ ಹಾರಿದ್ದ ಹಕ್ಕಿ ವಾಪಸ್ಸಾಗಿರಲಿಲ್ಲ, ಮನಸ್ಸು ತುಡಿಯುತ್ತಿತ್ತು. ಹಿಂದಿರುಗಿ ಕಾಲೇಜಿಗೆ ಬೇರೆ ಹೋಗಲೇಬೇಕಾಗಿತ್ತು. ಇಂದು ಹೋಗದಿದ್ದರೂ ಸರಿ, ಈ ಹಕ್ಕಿಯೊಂದಿಗೆ ಹರಟಿ, ಕ್ಯಾಮೆರಾದಲ್ಲಿ ಸೆರೆಹಿಡಿಯಲೇಬೇಕು. ಎಷ್ಟು ಹೊತ್ತಾದರೂ ಸರಿ ಅಂತಲೂ ಮನಸ್ಸು ಹಠಕ್ಕೆ ಬಿದ್ದಿತ್ತು.

ಅಷ್ಟು ಹೊತ್ತಿಗೆ ಅಲ್ಲಿದ್ದ ಶುಭಾಶಯದ ಕಾರ್ಡುಗಳನ್ನಾದರೂ ಕೊಳ್ಳೋಣವೆಂದು ಹೋದಾಗ ಕಂಡಿದ್ದು ಶಿವಾರೆಡ್ಡಿ. ಕೊಂಚ ನಿರಾಸೆ ತುಂಬಿದ್ದ ಮನಸ್ಸಿಗೆ ಮತ್ತೆ ಜೀವ ಬಂತು. ಮಾತನಾಡುತ್ತ, 'ಹೇಗಾದ್ರೂ ಮಾಡಿ ಆ 'ಅಪರೂಪದ ಹಕ್ಕೀ'ನ ನಮ್ಮ ಕ್ಯಾಮೆರಾದೊಳಗೆ ಬೀಳಿಸ್ರೀ' ಅಂತ ಕೇಳಿದ ಕೂಡಲೇ 'ಅಯ್ಯೋ ನೀವೇ ಕೇಳಬಹುದು. ಅವರು ಇಲ್ಲ ಅನ್ನೋಲ್ಲ ಸ್ವಲ್ಪ ಸಂಕೋಚದವರು' ಅಂದ್ರು. 'ನಮಗೂ ಸಂಕೋಚ ಕಣ್ರೀ. ಹರಟೋಕಾಗುತ್ತೋ ಇಲ್ವೋ. ಕ್ಯಾಮರಾದಲ್ಲಾದ್ರೂ ಸೆರೆಹಿಡಿಬೇಕು ಅನ್ನೋ ಆಸೆ.'

'ಆಯ್ತು ಬಿಡಿ. ನಾನು ಸೆರೆ ಹಿಡಿದು ಕೊಡ್ತೀನಿ' ಅಂದಾಗ ನಿರಾಳ. ಅದೂ, ಇದೂ ಓದು, ಬರವಣಿಗೆ ಅಂತ ಮಾತಾದ್ರೂ ಇನ್ನೂ ಪತ್ತೆ ಇಲ್ಲ! ಇವತ್ತೇನು ಇಳಿತಾರೋ ಅಲ್ಲೇ ಉಳಿದುಬಿಡ್ತಾರೋ ಅನ್ನೋ ಮನಸ್ಸು, ಕೊನೆಗೆ ಶಿವಾರೆಡ್ಡಿಯವರೇ ಮೇಲೆ ಹೋಗಿ, 'ನೋಡಿದ್ದು ಸಾಕು ಬನ್ನಿ' ಅಂತ ಎಳಕೊಂಡು ಬಂದಂತೆ ಅವರೊಂದಿಗೆ ಇಳಿದುಬಂದಾಗ, ನಮ್ಮೆಡೆಗೆ ಎಷ್ಟೋ ವರ್ಷಗಳ ಪರಿಚಯವೆಂಬಂತೆ (ನಮಗಂತೂ ಪರಿಚಿತರೇ, ಆದರೆ ಅವರಿಗೆ?) ಬೀರಿದ ಆತ್ಮೀಯ ನಗು 'ಯಾವ ಜನ್ಮದ ಮೈತ್ರಿ...'ಯನ್ನು ನೆನಪಿಸುವಂತಿತ್ತು. ಒಂದೆರಡೇ ಮಾತು. ನಗುವಲ್ಲೇ ಎಲ್ಲವೂ. ಶಿವಾರೆಡ್ಡಿಯವರು ಪರಿಚಯಿಸುತ್ತಾ 'ನಿಮ್ಮೊಂದಿಗೆ ಫೋಟೋ ಬೇಕಾಗಿದ್ಯಂತೆ...' ಅಂದವರೇ ತೇಜಸ್ವಿಯವರು ಏನನ್ನೂ ಹೇಳುವ ಮೊದಲೇ ನಮ್ಮ ಕೈಯಿಂದ ಕ್ಯಾಮೆರಾ ಕಸಿದು, 'ನಿಂತುಕೊಳ್ಳಿ' ಎಂದು ಇನ್ನೇನು ಕ್ಲಿಕ್ಕಿಸೇ ಬಿಡುತ್ತಾರೆನ್ನುವಾಗ್ಗೇ ತೇಜಸ್ವಿಯವರ ಪತ್ನಿ ಹಿಂದಕ್ಕೆ ಜೋತು ಬಿದ್ದಿದ್ದ ತೇಜಸ್ವಿಯವರ ಶರ್ಟನ್ನು, ಹೆಗಲ ಮೇಲೆ ನೇತಾಡುತ್ತಿದ್ದ ಬ್ಯಾಗನ್ನು ಸರಿ

ಮಾಡಿ ಹಿಂದೆ ಸರಿದರು. ಅವರನ್ನೂ ಎಳೆದು ನಮ್ಮೊಂದಿಗೆ ನಿಲ್ಲಿಸಿಕೊಂಡ ಮೇಲೆ ಶಿವಾರೆಡ್ಡಿ ಕ್ಲಿಕ್ಕಿಸಿದರು. 'ಅಯ್ಯೋ ತೆಗೆಯೋನು ತೆಗಿತೀಯ ಒಳ್ಳೇ ಬ್ಯಾಕ್‌ಗ್ರೌಂಡ್ ಇರಲಿ' ಎಂದು ಪ್ರದರ್ಶನಕ್ಕಿಟ್ಟಿದ್ದ ಹಕ್ಕಿಗಳ ಚಿತ್ರಗಳ ಮುಂದೆ ನಿಂತು ಮತ್ತೊಂದು ಫೋಟೋ!

'ಏನು ಕೆಲಸ ಮಾಡ್ತಾ ಇದೀರಿ..?' ಇತ್ಯಾದಿ ಒಂದೆರಡು ಮಾತುಗಳ ನಡುವೆ ಮತ್ತದೇ ನಗು! *(ಹಿಂದೊಮ್ಮೆ ತೇಜಸ್ವಿಯವರ ಸಂವಾದವೊಂದರ ಮಾತುಗಳನ್ನು ಎಡಿಟ್ ಮಾಡದೆ 'ಸಂಚಯ'ದಲ್ಲಿ ಪ್ರಕಟಿಸಿದ್ದಕ್ಕೆ ಅವರಿಗೆ ಸಿಟ್ಟು, ಬೇಸರವಾಗಿತ್ತಂತೆ. 'ಸಂವಾದದಲ್ಲಿ ಯಾರದೋ ಮುಖ ನೋಡಿ ಮಾತನಾಡುವಾಗ ಏನೋ ನೆನಪಿಗೆ ಮತ್ತೇನೋ ಮಾತಾಡಿರ್ತೀವಿ. ಅದನ್ನೇ ಪ್ರಕಟಿಸಿಬಿಟ್ಟರೆ ಹೇಗೆ? ಕೇಳಿದ್ದೊಂದು, ಹೇಳಿದ್ದೊಂದು ಅನ್ನಿಸೋಲ್ವೇನ್ರೀ?' ಅಂದಿದ್ರಂತೆ. ಅದನ್ನು ರೆಕಾರ್ಡಿನಿಂದ ಬರವಣಿಗೆಗೆ ಇಳಿಸಿದವಳು ಇದೇ ಗೆಳತಿ! 'ಸಂಚಯ'ದ ಸಂಪಾದಕರು ಎಡಿಟ್ ಮಾಡ್ತಾರೆ ಅಂತ ಕಳಿಸಿದ್ಲು, ಅವರು ಹಾಗೇ ಪ್ರಕಟಿಸಿಬಿಟ್ಟಿದ್ರು! 'ಹಾಗೆ ಮಾಡಿದವರು ಇವರೇ' ಅಂತ ನೆನಪಿಸಿದಾಗಲೂ ಅದೇ ನಗು. ಸದ್ಯ ಈಗೇನೂ ರೇಗಲಿಲ್ಲ, ಗೆಳತಿ ಬಚಾವ್!)* 'ಹಾಗೆಲ್ಲ ಸಾಧಿಸೋ ವ್ಯಕ್ತಿಯಲ್ಲ' ಎಂದಿದ್ದ ಮತ್ತು 'ಕರ್ನಾಟಕದಲ್ಲಿ ನನಗೆ ಗೊತ್ತಿರೋರೇ ಸ್ವಲ್ಪ ಜನ. ಅವರನ್ನೂ ಎದುರು ಹಾಕಿಕೊಂಡು ನಾನು ಹೇಗಯ್ಯಾ ಬದುಕಲಿ' ಅಂತಿರ್‍ತಾರೆ ಅನ್ನೋ ಶಿವಾರೆಡ್ಡಿಯವರ ಮಾತು ನಿಜವಾಗಿತ್ತು. ಒಟ್ಟಾರೆ ನಮ್ಮ ಅದೃಷ್ಟಕ್ಕೆ ಅವತ್ತಿನ ಅವರ ಮೂಡು ಚೆನ್ನಾಗಿತ್ತು!

ಆ ಕೂಡಲೇ ಅದ್ಯಾರೋ ಮಾಧ್ಯಮದವರ ಪ್ರವೇಶವಾಗಿ ಅವರು ಅತ್ತ ಸರಿಯುತ್ತಲೇ, ಅಷ್ಟೇ. ಇನ್ನು ನಮ್ಮ ಹರಟೆಗೆ ಸಿಗುವುದಿಲ್ಲವೆಂದು ಖಾತ್ರಿಯಾದ ಮೇಲೆ (ಅದು ಅಸಾಧ್ಯವೆಂಬ ಅರಿವೂ ನಮಗಿತ್ತು.) ಮತ್ತೆ ನೆನಪಾಗಿದ್ದು ಕಾಲೇಜು! ಹೋಗಲು ಮನಸ್ಸೇ ಇಲ್ಲ, ಏನೂ ಮಾತನಾಡಲಾಗಲೇ ಇಲ್ಲ, ನಾನು ಹೋಗಲೇಬೇಕಾಗಿತ್ತು. ತೇಜಸ್ವಿಯವರು ಸಿಗುವವರೆಗೆ ನಿಧಾನವಾಗಿ ನಡೆಯುತ್ತಿದ್ದ ದರಿದ್ರದ ಕಾಲ, ಅವರು ಸಿಕ್ಕ ಕ್ಷಣದಿಂದಲೇ ಓಡತೊಡಗಿತ್ತು! ವರ್ಷಗಟ್ಟಲೆ ಈ 'ಅಪರೂಪದ ಹಕ್ಕಿ'ಗಾಗಿ ಕಾದು ಕುಳಿತು, ಈಗ ಏನೊಂದನ್ನೂ ಮಾತನಾಡಲಾಗದ ಅನಿರೀಕ್ಷಿತ ಭೇಟಿಯಾಗಿತ್ತು!

ನಾನು ಸುಮ್ಮನೆ ಬಸ್ಸಿನಲ್ಲಿ ಎಂದಿನಂತೆ ಕೈಲೊಂದು ಪುಸ್ತಕ ಹಿಡಿದು ಕೂತು ಚಿತ್ರಕಲಾ ಪರಿಷತ್ತಿನ ಕಡೆ ಕಣ್ಣು ಹಾಯಿಸದಿದ್ದರೆ, ನಾನು ಈ ಕ್ಷಣಗಳನ್ನು ಕಳೆದುಕೊಂಡು ಬಿಡುತ್ತಿದ್ದೆ ಅನಿಸುತ್ತಿದೆ.

★

ಇಷ್ಟೆಲ್ಲ ವಿವರವಾಗಿ ಹೇಳಲು ಕಾರಣವಿದೆ. ಯಾರಿಗೂ ನಡು ಬಗ್ಗಿಸದೆ, ಸಲಾಮು ಹೊಡೆಯದೆ ಬದುಕಲು ಸಾಧ್ಯವಾಗುವುದು ಬೇಸಾಯಗಾರನಿಗೆ ಮಾತ್ರ. ಚಿಕ್ಕವಳಿದ್ದಾಗ ಕಂಡಿದ್ದ ಬರೀ ಮುಕ್ಕಾಲು ಎಕರೆ ಜಾಗದಲ್ಲಿ ಬೆಳೆಯುತ್ತಿದ್ದ ಕಾಫಿ, ಅಡಿಕೆ, ತೆಂಗು, ಬಾಳೆ, ಮೆಣಸು, ಶುಂಠಿ, ವೀಳ್ಯದೆಲೆ, ನಿಂಬೆ, ಕಿತ್ತಳೆ, ಚಕ್ಕೋತ, ಮಾವು, ಹಲವು, ನೇರಳೆ, ಬಿದಿರು, ಬೆಟ್ಟದ ನೆಲ್ಲಿ ಎಷ್ಟೊಂದು ತರಹದ ಹೂಗಿಡಗಳು... ಏನೆಲ್ಲಾ ಇತ್ತು! ಹಾಳಾದ ಆ ತೋಟವನ್ನು ಮತ್ತೆ ಚಿಗುರಿಸುವ ಕನಸು. ಆಗೆಲ್ಲ ನನ್ನ ಕಣ್ಣು ತುಂಬುತ್ತಿದ್ದುದು ತೇಜಸ್ವಿಯವರ ಬೇಸಾಯದ ಬದುಕು. ಮೂಡಿಗೆರೆಯಲ್ಲೇನು ಬಯಲು ಸೀಮೆಯಲ್ಲೂ ಕಾಫಿ ಬೆಳೆದುಬಿಡಬಹುದೆಂಬ ಅಹಂ– ಹಿಂದು ಮುಂದು ಗೊತ್ತಿಲ್ಲದಿದ್ದರೂ! ಆಗ ನಮ್ಮ ತೋಟದಲ್ಲಿದ್ದ ಐದಾರು ಕಾಫಿ ಗಿಡಗಳಲ್ಲೇ ಜೋತು

ಬೀಳುತ್ತಿದ್ದ ಎಷ್ಟೊಂದು ಹಣ್ಣುಗಳು! ಶನಿವಾರ-ಭಾನುವಾರಗಳು ಯಾಕಾದರೂ ಬರುತ್ತವೋ ಎಂದು ಗೊಣಗುತ್ತಲೇ ಹಿರಿಯರ ಆಜ್ಞೆಯನ್ನು ಮೀರಲಾರದೆ ಅಳಿಲು ತಿಂದು ಉದುರಿಸಿದ ಕಾಫಿ ಬೀಜಗಳನ್ನೆಲ್ಲ ಆಯುತ್ತಿದ್ದೆವು. ನೋಡಲು ಹಣ್ಣಿನಂತೆಯೇ ಇರುತ್ತಿದ್ದ ಸಿಪ್ಪೆಗಳು ನಮ್ಮನ್ನು ಬೇಸ್ತು ಬೀಳಿಸುತ್ತಿದ್ದವು. 'ನುಂಗೋವು ನುಂಗ್ತವೆ ಹಾಳಾದೋವು ಇಡಿಯಾಗಿ ನುಂಗಬಾರದಾ?' ಅಂತ ಆ ಅಳಿಲುಗಳ ಮೇಲೆ ನಮ್ಮ ಶಾಪ ತಪ್ಪಿರಲಿಲ್ಲ.

ಬೇಸಾಯದ ಬಗ್ಗೆ ನನಗೋ ಈಗಲೂ ನೂರಾರು ಕನಸುಗಳು. ಹಾಗೇ ಶಿಕಾರಿ, ಫೋಟೋಗ್ರಫಿಯ ಬಗ್ಗೆಯೂ ಬದುಕಿನ ತಿರುವುಗಳು ಯಾವಾಗ ಹೇಗೆ ತಿರುಗುತ್ತವೋ? ಬೇಸಾಯಕ್ಕೆ ಪ್ರೀತಿಯಿಂದ ಬೆಂಬಲಿಸುವ ಜನ, ನಮ್ಮೆಲ್ಲ ಪರಿಶ್ರಮ, ಅಪಾರ ತಾಳ್ಮೆ ಬೇಕು. ಅದೇನು ಬಾಯಲ್ಲಿ ಹೇಳಿದಷ್ಟು ಸುಲಭವಲ್ಲ. ಅದರಲ್ಲಿ ತೊಡಗಿಸಿಕೊಂಡವರಿಗೆ ಮಾತ್ರ ಅದರ ಕಷ್ಟ ಗೊತ್ತಾಗೋದು. ಕೃಷಿಯಲ್ಲೂ ಯಾವುದೇ ವ್ಯಾಪಾರದ ಹಾಗೆ ಏಳು-ಬೀಳುಗಳುಂಟು. ಕೆಲವೊಮ್ಮೆ ನಮ್ಮೆಲ್ಲ ಪರಿಶ್ರಮವೂ ನೀರಿನಲ್ಲಿ ಹೋಮಮಾಡಿದಂತಾಗಬಹುದು; ಕೆಲವೊಮ್ಮೆ ನಮ್ಮ ನಿರೀಕ್ಷೆಗೂ ಮೀರಿ ಲಾಭವೂ ಆಗಬಹುದು. ಪ್ರಕೃತಿ ಚಿತ್ತವನ್ನು ನಾವು ಸಮಚಿತ್ತದಿಂದಲೇ ಸ್ವೀಕರಿಸಬೇಕಾಗುತ್ತದೆ. ಬೇಸಾಯದ ಮಾತು ಬಂದಾಗಲೆಲ್ಲ ತೇಜಸ್ವಿಯವರೇ ಕಣ್ಣಮುಂದೆ. ಅವರ ಕೃತಿಗಳನ್ನು ಓದುವಾಗ – ಕಾಡಿನ, ಪರಿಸರದ ವಿಜ್ಞಾನದ , ಸಾಹಿತ್ಯದ ... ಎಲ್ಲ ಎಲ್ಲ ತರದ ಕೃತಿಗಳು– ಮತ್ತು ಕೆಲವೊಮ್ಮೆ ಬೇಸರವಾದಾಗ ಮೂಡಿಗೆರೆ ಬಸ್ಸು ಹತ್ತಿಬಿಡಬೇಕೆಂದು ಅಂದುಕೊಂಡಿದ್ದು ಅದೆಷ್ಟು ಸಲವೋ. ಅಂಥಾ ಸಾಧಿಸುವಂಥಾ ಘನ ಕಾರ್ಯ ಏನೇನೂ ಇಲ್ಲದಿದ್ದರೂ ಏನೋ ಕೆಲಸಕ್ಕೆ ಬಾರದ ಕೆಲಸಗಳ ಒತ್ತಡ! ಇನ್ನೇನು ಬೇಸಾಯವನ್ನು ಆರಂಭಿಸುವ ಮೊದಲು ಎಲ್ಲ ಬಿಟ್ಟು ಒಂದಷ್ಟು ದಿನ ಸುಮ್ಮನೆ ತೇಜಸ್ವಿಯವರೊಂದಿಗೆ ತಿರುಗಿ ಬರಬೇಕೆಂದು ಅಂದುಕೊಂಡಿದ್ದಕ್ಕೆ ಲೆಕ್ಕವೇ ಇಲ್ಲ.

ಬೇಸಾಯವನ್ನೂ ಆರಂಭಿಸಲಿಲ್ಲ; ಮೂಡಿಗೆರೆ ಬಸ್ಸೂ ಹತ್ತಲಿಲ್ಲ. (ಹೊಟ್ಟೆ ಪಾಡು ಎಲ್ಲಿಂದೆಲ್ಲಿಗೋ ಕರೆ ತಂದು ನಿಲ್ಲಿಸುತ್ತದೆ. ಮನುಷ್ಯನಿಗೆ ಹೊಟ್ಟೆಯೊಂದಿಲ್ಲದಿದ್ದರೆ!) ಕಾಗದ ವನ್ನಾದರೂ ಬರೆಯಬೇಕೆಂದುಕೊಂಡು ಕೂತು ಏನೂ ತೋಚದೆ ಬರೆಯಲೂ ಇಲ್ಲ. ಮೂಡಿ ಮನುಷ್ಯ. 'ಸಿಕ್ಕಸಿಕ್ಕವೆಲ್ಲ ಏನೇನೋ ಗೀಚ್ತವೆ. ನಮ್ಮ ಸಮಯ ಹಾಳು ಮಾಡಕ್ಕೆ' ಅಂದುಬಿಟ್ರೆ? ಅನ್ನೋ ಭಯ ಬೇರೆ. ಒಮ್ಮೆಯಾದರೂ ನೋಡಿ, ಮಾತನಾಡಿಸಿ, ಅವರೊಂದಿಗೆ ಮೌನದಿಂದಿದ್ದು (ಸುಮ್ಮನೆ ಗಮನಿಸುವುದೂ ಕಲಿಕೆಯೇ) ಬರಬೇಕೆಂದುಕೊಳ್ಳುತ್ತಲೇ ಇದ್ದವಳಿಗೆ ಹೀಗೆ ಅನಿರೀಕ್ಷಿತ ವಾಗಿ ಸಿಕ್ಕಾರೆಂದು ಎಣಿಸಿರಲಿಲ್ಲ. ಕೂತು ಒಂದಷ್ಟು ಹರಟೆ ಹೊಡೆಯುವ ಹಂಬಲವಿದ್ದರೂ ಆಗಲಿಲ್ಲ. ಸಿಕ್ಕಷ್ಟು ಸೀರುಂಡೆ!

★

ಬಸ್ಸಿನಲ್ಲಿ ಕಾಲೇಜಿಗೆ ಹಿಂದಿರುಗುವಾಗ 'ಅಪರೂಪದ ಹಕ್ಕಿ'ಯ ಕುರಿತು ಏನೆಲ್ಲಾ ತಲೆಯಲ್ಲಿ! ಎಷ್ಟೊಂದು ಸರಳ, ಸ್ವಚ್ಛಂದ ಥೇಟ್ ಹಕ್ಕಿಗಳ ಹಾಗೇ.ಒಳಗೊಂದು-ಹೊರಗೊಂದು ಇಲ್ಲದ, ಅನ್ನಿಸಿದ್ದನ್ನು ನೇರವಾಗಿ ಅಂದುಬಿಡುವ ಸಹಜತೆ ಎಷ್ಟೊಂದು ಸಹಜ! ಇದು ಹೊಗಳಿಕೆಯಲ್ಲ. ಹೊಗಳುವುದು ನನಗಿಷ್ಟವೂ ಇಲ್ಲ. 'ಯಾರಾದ್ರೂ ಹಾಳಾಗ್ತಾರೆ ಅಂದ್ರೆ, ಅವರು ಅವರ

ಹೊಗಳುಭಟ್ಟರ ಮಾತು ಕೇಳಿ ಕಣ್ರೀ' ಎನ್ನುವ ತೇಜಸ್ವಿಯವರಿಗೆ ಹೊಗಳಿಕೆ ಮೈಯುರಿಸುತ್ತದೆಂದು ಗೊತ್ತು. ಇದು ಎಚ್ಚರದಲ್ಲಿ ಹೇಳುತ್ತಿರುವ ಮೆಚ್ಚಿಗೆಯ ಮಾತು.

ಇಂದು ಜಡ್ಡುಗಟ್ಟಿದಂತಿರುವ ಸಮಾಜಕ್ಕೆ ತೇಜಸ್ವಿ ಮತ್ತು ಅಂಥವರ ಚಿಂತನೆಯ ಚಿಕಿತ್ಸೆ ಬೇಕಾಗಿದೆ. 'ತಾಳ್ಮೆ ಮತ್ತು ಪರಿಶ್ರಮವಿಲ್ಲದೆ ಯಾವ ಕಲಾತ್ಮಕತೆಯ ಸೃಷ್ಟಿಯೂ ಸಾಧ್ಯವಿಲ್ಲ' ಎನ್ನುವ ತೇಜಸ್ವಿಯವರ ಅನುಭವದ ಮಾತು ನೂರಕ್ಕೆ ನೂರು ಸತ್ಯ. ಇದನ್ನು ಇಂದಿನ ಯುವ ಪೀಳಿಗೆ ಅಗತ್ಯವಾಗಿ ಚಿಂತಿಸಲೇಬೇಕಾಗಿದೆ; ಸಮಕಾಲೀನ ಸಮಸ್ಯೆಗಳಿಗೆ ಆ ಮೂಲಕ ಸ್ಪಂದಿಸಬೇಕಾಗಿದೆ. ಮೆಚ್ಚಿಸುವವರ ಮಾತುಗಳಿಂದ ದೂರ ಉಳಿದಿರುವ ತೇಜಸ್ವಿಯವರು ತಮ್ಮ ಪಾಡಿಗೆ ತಾವಿರುವ ಹಕ್ಕಿಯೇ ಸರಿ.

ಯಾರಿಗೂ ಸಲಾಮು ಹೊಡೆಯದ ತೇಜಸ್ವಿಯವರು ಏನಾದರೊಂದು ಮಾಡುತ್ತಲೇ ಹೊಸತನ್ನು ಸೃಷ್ಟಿಸುತ್ತಲೇ ಬಂದಿದ್ದಾರೆ; ಕನ್ನಡಿಗರಿಗೆ ಉಣಿಸುತ್ತಲೇ ಇದ್ದಾರೆ. ಇದ್ದಕ್ಕಿದ್ದಂತೆ ಮಾಯವಾಗಿ, ಇದ್ದಕ್ಕಿದ್ದಂತೆ ಹೊಸತೊಂದರ ಜೊತೆಯಲ್ಲಿ ಎದ್ದು ಬರುವ ಫೀನಿಕ್ಸ್ ಹಕ್ಕಿ ಈ ತೇಜಸ್ವಿ! ಅವರು ಮೌನವಾಗಿದ್ದಾರೆನಿಸಿದರೆ, ಆಗೆಲ್ಲಾ ಏನೋ ನಡೆಯುತ್ತಿದೆಯೆಂದೇ ಅರ್ಥ. ಆಗಲೂ ಜನರ ಹಾಳು ನಾಲಗೆ, 'ಕಂಪ್ಯೂಟರ್ ಮುಂದೆ ಕೂತು ಎಲ್ಲೆಂಲ್ಲಿಂದಲೋ ಕದ್ದು ಕನ್ನಡದಲ್ಲಿ ಪುಸ್ತಕ ಮಾಡುತ್ತಿದ್ದಾರೆಂಬ ಆಪಾದನೆ! ಅದಕ್ಕೆ ನೊಂದು ಹೇಳುವ ಮಾತು! 'ಕನ್ನಡದ ಜನಕ್ಕೆ ಮೋಸ ಮಾಡಿ ನಾನು ಅನ್ನ ತಿನ್ನಬೇಕೇನ್ರಿ?' ಮತ್ತೆ ಶಿವಾರೆಡ್ಡಿಯವರು ಹೇಳಿದ ಮಾತಿನ ನೆನಪು.

ಅನಿರೀಕ್ಷಿತವಾಗಿ, ಅಕಸ್ಮಾತ್ತಾಗಿ ಸಿಕ್ಕೇಬಿಟ್ಟಿತೆಂದು ಆಸೆ ತೋರಿಸಿ ಆ 'ಅಪರೂಪದ ಹಕ್ಕಿ' ನಮ್ಮೆದುರು ಅಂದು ಮಿಂಚಿ ಮತ್ತೆ ಮಾಯವಾಗೇಬಿಟ್ಟಿತ್ತು ಹಾರುವ ಓತಿಯಂತೆ!

ಕನ್ನಡ ಉಪನ್ಯಾಸಕರು, ಶೇಷಾದ್ರಿಪುರಂ ಕಾಲೇಜು
ಯಲಹಂಕ, ಬೆಂಗಳೂರು



ತೀನಂಶ್ರೀ ದಿನಚರಿಯಿಂದ

2-2-1948

ಜನವರಿ 30ರ ಮಹಾದುರಂತವನ್ನು ನೆನೆದು

ನಂಬಲಾಗದ್ದು ನಡೆದುಹೋಯಿತು!

ಆ ಸಂಜೆ ಕಾಲೇಜಿನ ಕೆಲಸದ ಹೊರೆಯನ್ನು ತೀರಿಸಿಕೊಂಡು ಪಬ್ಲಿಕ್ ಲೈಬ್ರರಿಗೆ ಹೋಗಿ ಅಲ್ಲಿಂದ ಮನೆಯ ಕಡೆ ಬರುವ ವೇಳೆಗೆ ಹತ್ತಿರ ಹತ್ತಿರ ಆರೂವರೆ ಘಂಟೆಯಾಗಿತ್ತು. ತಾಯಿನಾಡು ಕಚೇರಿಯ ಮುಂದೆ ವಿಶೇಷವಾಗಿ ಜನಸಂದಣಿ! ಬೈಸಿಕಲ್ಲಿನಿಂದ ಇಳಿಯಬೇಕಾಯಿತು. ಅಲ್ಲಿಯ ಪ್ರಕಟನೆಯಲ್ಲಿ "ಮಹಾತ್ಮಾಗಾಂಧಿ'... 'ಮೃತಿ'(?)..." ಎಂಬ ಕೆಲವು ಅಕ್ಷರಗಳು ದೂರಕ್ಕೆ ಸ್ವಲ್ಪ ಸ್ವಲ್ಪ ಕಾಣಸುತ್ತಿದ್ದವು. "ಮಹಾತ್ಮಾ ಗಾಂಧಿ ಮರಣದಿಂದ ಪಾರಾದರು" ಎಂದಿರಬಹುದು ಎಂದು ಮನಸ್ಸು ಭಾವಿಸಿತು. ಅವರು ಮೃತರಾದರೆಂದು ಊಹಿಸಲು ಕೂಡ ಆಗಲಿಲ್ಲ. ಆಗ ನಾನು ಬಲ್ಲ ನಮ್ಮ ಕಾಲೇಜಿನ ವಿದ್ಯಾರ್ಥಿಯೊಬ್ಬನು 'ಗಾಂಧಿಗೆ ನೊಬೆಲ್ ಪ್ರೈಸ್ ಕೊಟ್ಟುಬಿಟ್ಟರು!' ಎಂದು ಹೇಳಿದನು. ಆಗಲೂ ನನಗೆ ಪೂರ್ತಿಯಾಗಿ ಅರ್ಥವಾಗಲಿಲ್ಲ. "ಗಾಂಧಿಯನ್ನು ಕೊಂದರಂತೆ – ಹಿಂದೂ ಕೊಂದನಂತೆ!" ನಂಬಬಾರದ್ದು ನಡೆದೇಹೋಗಿತ್ತು!

ಆ ಅಹಿಂಸೆಯ ಮೂರ್ತಿ ಹೀಗೆ ಹಿಂಸೆಗೆ ಬಲಿಯಾಗಿ ಪ್ರಾಣ ಬಿಡಬೇಕೆ? ಹಿಂದೂ ಧರ್ಮದ ಏಕಮಾತ್ರ ರಕ್ಷಾಮಣಿ 'ಹಿಂದು'ವೊಬ್ಬನ ಗುಂಡಿನೇಟಿಗೆ ಆಹುತಿಯಾಗಬೇಕೆ? ಏನು ದುರಂತ ವಿಧಿ ಇದು!

ಬದುಕಿದ್ದಾಗಲೇ ಸೋಕ್ರಟೀಸ್, ಯೇಸುಕ್ರಿಸ್ತರ ಮಾಲೆಗೆ ಸೇರಿದ್ದ ಮಹಾತ್ಮನು ಸಾವಿನಲ್ಲೂ ಅದೇ ದಾರಿಯನ್ನೇ ಹಿಡಿದನು; ತನ್ನವರ ಕೈಯಿಂದಲೇ ಕೊಲೆಯಾದನು.

ಎಂಥ ಮರಣ! ಪ್ರಾರ್ಥನೆಗೆ ಹೋಗುತ್ತಿರುವ ವೇಳೆಯಲ್ಲಿ, ಎಂದೆಂದೂ ಪರಿಶುದ್ಧವಾಗಿರುವ ಹೃದಯ ಪರಿಶುದ್ಧತಮವಾಗಿರುವ ವೇಳೆಯಲ್ಲಿ! ಕೊಲೆಪಾತಕನು 'ನೀವು ಬಂದದ್ದು ಹೊತ್ತಾಯಿತು!' ಎಂದನಂತೆ; (ಆ ಐದು ನಿಮಿಷ ಕಾಯುವುದಕ್ಕೆ ಅವನಿಗೆ ಎಷ್ಟು ಕಷ್ಟವಾಗಿತ್ತೋ!) ಅದಕ್ಕೆ "ಹೌದು ತಡವಾಯಿತು" ಎಂದು

ನಸುನಗೆಯೊಡನೆ ಉತ್ತರ ಕೊಟ್ಟರಂತೆ;* ಇವನು ನಮಸ್ಕರಿಸುವವನಂತೆ ಬಗ್ಗಿದನು. ಉತ್ತರಕ್ಷಣದಲ್ಲೇ ಢಂ, ಢಂ, ಢಂ! ಎಂದು ರಿವಾಲ್ವರಿನ ಗುಂಡುಗಳು!

ಏನಾಯಿತೆಂದು ಅರಿಯುವ ಮೊದಲೇ ಬಾಪೂಜಿ ಪ್ರಾರ್ಥನಾಸಭೆಯ ಕಡೆಗೆ ಕೈ ಜೋಡಿಸಿಕೊಂಡಿದ್ದರು. ಅದು ದೇವರಿಗೆ ಪ್ರಾರ್ಥನೆಯೋ, ಕೊಲೆಪಾತಕನ ಪರವಾಗಿ ಕ್ಷಮೆಯ ಯಾಚನೆಯೋ? – ಎರಡೂ ಇರಬಹುದು. ಸತ್ತ ಮುಖದಲ್ಲಿ ಶಾಂತಿ ಕ್ಷಮೆಗಳಿದ್ದುವೆಂದು ಸರ್ದಾರ ಪಟೇಲರು ಹೇಳಿದ್ದನ್ನು ನೋಡಿದರೆ – ಎರಡೂ ಇರಬಹುದು. ನುಡಿದಂತೆ ನಡೆದು ಮರಣವನ್ನು ಸ್ವಾಗತಿಸಿದ ಮಹಾತ್ಮ ಧನ್ಯ. 'ಶರಣರ ಗುಟ್ಟನ್ನು ಮರಣದಲ್ಲಿ ನೋಡು..'

ಮಹಾತ್ಮನ ಚರಿತೆ ಇಲ್ಲಿಗೆ ಪರಿಪೂರ್ಣವಾಯಿತು. ನಿರೀಕ್ಷೆಗೆ ಮೀರಿ ಸರ್ವಾಂಗಪೂರ್ಣವಾದ ಕಲಾಕೃತಿಯಾಯಿತು – ಮಹಾದುರಂತವಾಯಿತು. ಉಪವಾಸ ಮಾಡಿದಾಗ ದೇಹ ತೊರೆದಿದ್ದರೇ ಚೆನ್ನಾಗಿತ್ತೆಂದು ಒಬ್ಬಿಬ್ಬರು ಹಿರಿಯರು ಹೇಳಿದ್ದಾರೆ. ಆದರೆ, ಮಾನವ ಸ್ವಭಾವವನ್ನು ಪರಿಭಾವಿಸಿದರೆ, ಆ ಬಾಳ್ವೆಗೆ ಈ ಕೊನೆಯೇ ಭೀಕರವಾದರೂ ಸಹಜ ಶಿಖರವೆಂದು ನನಗೆ ಈಗ ತೋರುತ್ತಿದೆ. ಕಲಾಕೃತಿಯಲ್ಲಿ ಅನಿರೀಕ್ಷಿತವಾದ ಅನಿವಾರ್ಯತೆ ಇರುವುದಷ್ಟೆ. ಅದೇ ಇಲ್ಲಿ ಮಹಾಪರಿಮಾಣದಲ್ಲಿ ಗೋಚರವಾಗಿದೆ...

ಬೇರೆ ಯಾರಾದರೊಬ್ಬರ ಮರಣವನ್ನು ಕುರಿತು ಮಾತನಾಡುವಾಗ ಅವರ ಸಾವಿನಿಂದಾದ ನಷ್ಟವನ್ನು ಪೂರೈಸುವುದು ಅಶಕ್ಯ ಎನ್ನುತ್ತೇವೆ. (His loss is irreparable). ಆದರೆ ಇಲ್ಲಿಯ ನಷ್ಟ ಅಪೂರ್ವವಲ್ಲ, ಅಚಿಂತ್ಯ (inconceivable). ಮಿಕ್ಕ ಮಹನೀಯರೆಲ್ಲರೂ ಬುದ್ಧಿಯ ದಾರಿಯಲ್ಲಿ ನಡೆಯತಕ್ಕವರು. ಗಾಂಧೀಜಿ ಪ್ರತಿಭಾನದ ಬೆಳಕನ್ನು ಲೋಕಕ್ಕೆ ಬೀರುತ್ತಿದ್ದವರು. ತಿಳಿವಿಗೆ ಮೀರಿದ ಸತ್ಯ ಅವರ ಪ್ರತಿಭಾದೃಷ್ಟಿಗೆ ಹೊಳೆಯುತ್ತಿತ್ತು. ಇಂಥ ನಾಯಕ, ಇಂಥ ತಂದೆ ಯಾವ ಜನಕ್ಕೆ ಯಾವ ರಾಷ್ಟ್ರಕ್ಕೆ ದೊರೆತಾನು! ನಮ್ಮ ನಷ್ಟ ಏನೆಂಬುದನ್ನು ಊಹಿಸಲು ಕೂಡ ನಮಗೆ ಶಕ್ಯವಿಲ್ಲ. ನಮ್ಮ ಉತ್ಕರ್ಷದ ಸೂರ್ಯ ಮುಳುಗಿಹೋದನು. ಇನ್ನು ಮುಂದೆ ನಮ್ಮ ಹಿರಿಯರು– ಸುದೈವದಿಂದ ಹಲವರಿದ್ದಾರೆ, ಉದಾತ್ತರಿದ್ದಾರೆ– ತಮ್ಮ ತಮ್ಮ ಬುದ್ಧಿಯ ಹಣತೆಗಳನ್ನು ಬೆಳಗಿ ಉಜ್ವಲಗೊಳಿಸಿಕೊಂಡು ಹೃದಯದ ಸ್ನೇಹವನ್ನು ವರ್ಧಿಸಿಕೊಂಡು ನಾಡಿಗೆ ದಾರಿ ತೋರಿಸಬೇಕು...

ಮಹಾತ್ಮನು ಸ್ವಾತಂತ್ರ್ಯವನ್ನು ಗೆದ್ದುಕೊಟ್ಟನು. ಆದರೆ ಜನರೆಲ್ಲರ ಹೃದಯವನ್ನು ಗೆಲ್ಲಲು ಅವನ ಪ್ರೇಮಕ್ಕೂ ಆಗದೆ ಹೋಯಿತು. ದ್ವೇಷ-ಪ್ರೇಮಗಳ ನಿರಂತರವಾದ ಹೋರಾಟದಲ್ಲಿ ದ್ವೇಷದ ಕೈಯೇ ಸದ್ಯಕ್ಕೆ ಮೇಲಾಯಿತು! ಇನ್ನೂ ಎಷ್ಟು ಕಾಲ ಬೇಕೋ ಈ ವಿಷವೃಕ್ಷ ಸಮೂಲವಾಗಿ ವಿಚ್ಛೇದಗೊಳ್ಳುವುದಕ್ಕೆ!

ಭಗವಾನ್ ಬುದ್ಧನಾದ ಮೇಲೆ ನಮ್ಮ ನಾಡು ಮಹಾತ್ಮಾ ಗಾಂಧಿಯನ್ನು ಪಡೆಯಲು ಎರಡೂವರೆ ಸಾವಿರ ವರ್ಷ ಬೇಕಾಯಿತು – ಇನ್ನೆಷ್ಟು ಶತಮಾನ ಸಹಸ್ರಮಾನ ಬೇಕೋ 'ಮೈವೆತ್ತ ಪ್ರೇಮ' ಇನ್ನೊಮ್ಮೆ ಅವತರಿಸಿ ಜಗತ್ತನ್ನು ಉದ್ಧರಿಸುವುದಕ್ಕೆ!

★ ಈ ಸಂವಾದ ನಡೆಯಿತೆಂಬ ವಿಷಯ ಹಿಂದೂ ಪತ್ರಿಕೆಯ ಬಾತ್ಮೀದಾರನ ಹೇಳಿಕೆಯಲ್ಲಿ ಮಾತ್ರ ಇದೆ. ಮಿಕ್ಕವರು ಯಾರೂ ಇದನ್ನು ಸೂಚಿಸಿಲ್ಲ, ಗಾಂಧೀಜಿಯ ಮೊಮ್ಮಗಳೂ ಇದನ್ನು ಕೇಳಿದಂತೆ ತೋರಲಿಲ್ಲ. ಗುಂಡಿನೇಟು ಬಿದ್ದ ಮೇಲೆ ಗಾಂಧೀಜಿ 'ಹಾ ರಾಮ್ ಹಾ ರಾಮ್' ಎಂದರೆಂದು ಆಕೆ ತಿಳಿಸಿದ್ದಾಳೆ. ಮುಂದಿನ ವಿಚಾರಣೆಯಲ್ಲಿ ಸತ್ಯಾಂಶ ಹೊರಬೀಳಬೇಕು.

ಚರಿತ್ರೆಯ ತಿಳಿವಿನಿಂದ ಜನದ ಹೃದಯ ತಿದ್ದುವುದು ಎಂದಿಗೆ, ಎಂದಿಗೆ!

* * *

ಮೊನ್ನೆಯ ದಿನ ಮುಸ್ಲಿಂ ತರುಣ ಅಧ್ಯಾಪಕರೊಬ್ಬರು ಕಾಲೇಜಿಗೆ ಬಂದರು; ಸಂತಾಪ ಸೂಚಕ ಸಭೆ ಆದೀತೇನೋ, ಎಂದು ನಿರೀಕ್ಷಿಸಿ ಹತ್ತೂವರೆ ಘಂಟೆಗೆ ಬಂದಿದ್ದರಂತೆ. ಆದರೆ ಅದು ಮೌನದ ಅಳಲಿನ ದಿನ – ಶ್ಮಶಾನಯಾತ್ರೆಯ ದಿನ; ಸಭೆ ಹೇಗೆ ಸೇರೀತು!... ಆತನೂ ಗಾಂಧೀಜಿಯವರನ್ನು ನೆನೆದು ತುಂಬ ವ್ಯಥೆಪಟ್ಟಿದ್ದನು. ಆ ಮಾತು ಈ ಮಾತು ಆಡುತ್ತಾ, ನವಖಾಲಿಯಲ್ಲಿ ಕೂಡ ಗಾಂಧೀಜಿ ಸುರಕ್ಷಿತವಾಗಿ ಇದ್ದದ್ದನ್ನು ಆತ ಜ್ಞಾಪಿಸಿದನು; ಉದ್ದೇಶಪೂರ್ವಕವಾಗಿ ಆತ ಹೇಳಲಿಲ್ಲವಾದರೂ ಅದರಿಂದ ನನಗೆ ತಲೆತಗ್ಗಿಸುವಂತಾಯಿತು. ಮುಸ್ಲಿಮರು ಅನೇಕ ಘೋರ ಪಾತಕಗಳನ್ನಾಚರಿಸಿದ್ದಾರೆ. ಆದರೆ ಮಹಾತ್ಮನ ರಕ್ತವನ್ನು ಸುರಿಸಿ ಅವರು ಕೈಯನ್ನು ಹೊಲಸು ಮಾಡಿಕೊಳ್ಳಲಿಲ್ಲ. ಆ ಅಪೂರ್ವಯೋಗ ಒಬ್ಬ "ಹಿಂದೂ ವೀರ"ನಿಗೇ ಮೀಸಲಾಗಿತ್ತು!

* * *

೩-೨-೪೮

ಓ ಭರತ ಭೂಮಿ, ನಿನ್ನ ಸ್ವಾತಂತ್ರ್ಯದ ಹೆಸರಿನಲ್ಲಿ ಇದುವರೆಗೆ ಸುರಿದ ರಕ್ತಬಲಿ ಸಾಲಲಿಲ್ಲವೆ? ಈ ಮಹಾತ್ಮನ ಸಿರಿನೆತ್ತರ ತರ್ಪಣವಿಲ್ಲದೆ ನಿನ್ನ ದಾಹ ತೀರುತ್ತಿರಲಿಲ್ಲವೆ?

* * *

ಗಾಂಧೀಜಿಯನ್ನು ಯಾರು ನಿಜವಾಗಿ ಕೊಂದವರು?

ಗೋಡ್ಸೆ ಒಂದು ನಿಮಿತ್ತ ಮಾತ್ರ. ನಿಜವಾದ ಕೊಲೆಗಾರ ಜಿನ್ನಾನೇ ಸರಿ. ಅವನು ಬೆಳೆಸಿ ಪೋಷಿಸಿದ ವಿಷವೃಕ್ಷದ ಪರಮಫಲವೇ ಇದು – ಸಂಶಯವಿಲ್ಲದೆ. ದ್ವೇಷದ ಉದ್ಗಾರಗಳನ್ನು ಕೂಗಿ ಕೂಗಿ, ಅಣ್ಣತಮ್ಮಂದಿರ ಮನಸ್ಸುಗಳನ್ನು ಕೆಡಿಸಿ ಇಂಡಿಯಾವನ್ನು ಇಬ್ಭಾಗ ಮಾಡಿ ಕೋಟ್ಯಂತರ ಹೃದಯಗಳಲ್ಲಿ ಪೈಶಾಚಿಕ ಭಾವಗಳನ್ನು ಯಾರು ಕೆರಳಿಸಿದನೋ ಆತನೇ ನಿಜವಾದ ಕೊಲೆಗಾರ.

'ಕರ್ಮಮೀ ಪರಿ ಮಱೆಗೆ ಮಱೆ ಇಕ್ಕುತಿರ್ಕುಂ!'

ಅಪರಾಧಿಗಳಲ್ಲದವರ ರಕ್ತವನ್ನು ಸಂತತವಾಗಿ ಇತ್ತ ಕಡೆಯೂ ಅತ್ತ ಕಡೆಯೂ ಸುರಿಸುತ್ತಿರುವುದೇ ಇಲ್ಲಿಯ ವಿಶೇಷ! ಈ ಕೊನೆಯ ಮಹಾತರ್ಪಣ ನಡೆದುಹೋದ ಮೇಲಾದರೂ, ಇದರ ಘೋರ ಭೀಷಣತೆಯನ್ನು ಕಂಡು ಬೆಚ್ಚಿ ಜನರ ಬುದ್ಧಿ ದಾರಿಗೆ ಬಂದೀತೆ, ಹೃದಯದಲ್ಲಿ ಮಾನವತೆ ಮತ್ತೆ ತಲೆಯೆತ್ತೀತೆ? –

'ಕರ್ಮಮೀಪರಿ ಮಱೆಗೆ ಮಱೆ ಇಕ್ಕುತಿರ್ಕುಂ
ಕ್ಷಮೆಯಿಂದೆ ಸಮೆಯದಿರೆ ಮಱುಕೊಳಿಸುತಿರ್ಕುಂ....
ಸಾಲದೇ ರಕ್ತದೊಳ್ ಸ್ನಾನಂ
ಸಾಲದೇ ಈ ರಕ್ತಪಾನಂ!'
'ಸಾಕ್ಷರಾ ವಿಪರೀತಾಶ್ಚೇತ್ ರಾಕ್ಷಸಾ ಏವ ಕೇವಲಂ!'

* * *

9-2-1948

.... 'A glance at the observations on Gandhiji reveals the range of criteria allowed in summing up of career. He is compared to Buddha, Jesus Christ, Socrates, but none of them as world-teachers and disturbers of orthodox life had such a lengthy and so many-sided mission as Mahatma Gandhi-60 years of stormy life in diverse roles. Buddha took the vow of renunciation; devotion brought illumination to him; and he preached the message that spread. It is a life contained within a symmetrical outline. The ministry of Jesus lasted only three years; in period of time it was as short as one of the detentions of Gandhiji in jail, and Jesus was crucified the moments his contemporaries suspected in him traits of the political agitator and the subveresionist. .... Socrates talked and talked in the market-place of Athens, "Corrupting youth" but he did not undergo a fraction of the miscellaneons turmoil of the Mahatma's mission. Gandhiji's prolonged ministry on earth has broken the record. What happend came into the world-circuit of news in his own life-time, without the aid of long voyages by apostles and the testimony of gospel-writers to spread the story down the centuries.

From 'Art of writing obituary' (Tributes to Gandhiji analysed)
by Pothan Joseph, - The Indian Express, Feb 4, 1948.

* * *

'I have heard it exclaimed how much better it would have been if the Mahatma had gone off in one of his fasts. I don't agree; Destiny is a better artist than poor mortals, and the fact of the present termination will grow more and more obvious with the passing of time.'....

From 'What expiation can we make?' by 'Chitragupta' - Swatantra, Feb 7, 1948

(Good criticism badly expressed! TNS)

* * *

"ನಂದಾದೀವಿಗೆ ನಂದಿಹೋಯಿತು!..." ಎಂದು ಸಿ.ಆರ್. (ತಮಿಳುನಾಡಿನವರಿಗೆ ಕಳಿಸಿದ ಮೊದಲ ಸಂದೇಶದಲ್ಲಿ)

* * *

ನಂದಾದೀವಿಗೆಯನ್ನು ನಂದಿಸಿಬಿಟ್ಟೆವು. ನಾವು ಹಿಂದುಗಳು ನಂದಿಸಿಬಿಟ್ಟೆವು! – ಅದಾಗಿ ಆರಿಹೋಗಲಿಲ್ಲ! ಅದರ ಬೆಳಕು ನಮಗೆ ಬೇಡವೆಂದು, ಅದರ ರಕ್ಷೆ ನಮಗೆ ಬೇಡವೆಂದು ನಮ್ಮವರು ಆ ಸೊಡರ ಕುಡಿಯನ್ನು ಆರಿಸಿಬಿಟ್ಟರು!

ನಮ್ಮ ಅಂತರಾತ್ಮದ ವಾಣಿಯನ್ನು ನಾವು ಉಡುಗಿಸಿಬಿಟ್ಟೆವು. ನೀವು ಮಾಡುತ್ತಿರುವುದು ಅಧರ್ಮ ಎಂದು ಅದು ಕೂಗಿ ಹೇಳಿದ್ದನ್ನು ಕೇಳಲೊಲ್ಲದೆ ಆ ಉಸಿರನ್ನು ಕಟ್ಟಿಬಿಟ್ಟೆವು – ಆ ಸಾಕ್ಷಿಯ ಭಯವಿಲ್ಲದೆ ನಿರಾತಂಕವಾಗಿ ಹಿಂಸಾಮಾರ್ಗದಲ್ಲಿ ಮುಂದವರಿಯಲೆಂದು!

* * *

೧೦-೨-೪೮

ಗಾಂಧೀಜಿಯ ದೇಹವನ್ನು ಧೃತಿದ್ರಾವಕಗಳ ಸಹಾಯದಿಂದ ಭದ್ರವಾಗಿಡದೆ ಅಗ್ನಿಗೆ ಅರ್ಪಿಸಿದ್ದು ಪೂರ್ಣವಾಗಿ ಸರಿ. ದೇಹಕ್ಕೆ ಬೆಲೆ ಜೀವದಿಂದ, ಆತ್ಮದಿಂದ. ಜೀವವಿಲ್ಲದ ದೇಹ ಬರಿಯ ಕಟ್ಟಿಗೆ. ಜೀವ ಹೊರಟುಹೋದ ಮೇಲೆ, ಪಂಚಭೂತಗಳ ಸಾಲವನ್ನು ಪಂಚಭೂತಗಳಿಗೆ ಸಲ್ಲಿಸಿಬಿಡುವುದೊಂದೇ ಶ್ರೇಷ್ಠ ಮಾರ್ಗ. ಭಸ್ಮವನ್ನು ಹರಿಯುವ ನೀರಿನಲ್ಲಿ ಕದಡಿಬಿಡಬೇಕು. ಅರ್ಚನೆಗಾಗಿ, ಸ್ಮಾರಕಕ್ಕಾಗಿ, ಎಲ್ಲೂ ಉಳಿಸಿಕೊಳ್ಳಬಾರದು. ಅವರು ಬಿದ್ದ ಸ್ಥಳದ ಮೃತ್ತಿಕೆಯನ್ನು ತಂದು ಅದರ ಮೇಲೆ ಗುಡಿ ಗೋಪುರಗಳನ್ನು ಕಟ್ಟಬಾರದು. ಸ್ಫೂರ್ತಿ ಕೊಡಲು ಈ ಜಡವಸ್ತು ಬೇಕೆ? ಅವರ ಉಕ್ತಿ ಉಪದೇಶ ಮಾರ್ಗದರ್ಶನ ಜೀವನದ ಮೇಲ್ಪಂಕ್ತಿ ಇವಿಲ್ಲವೆ? ಇವು ಸಾಲವೆ?

ಚಿತಾಭಸ್ಮವನ್ನು ಪೂಜಿಸುವುದು ವಾಮಾಚಾರಕ್ಕೆ ಸೇರಿದ್ದಲ್ಲವೆ?

* * *

೧೦-೨-೪೮

ಗಾಂಧೀಜಿ ಬದುಕಿದ್ದಾಗ ಮೇಲ್ಪಂಕ್ತಿಯಿಂದ ಉಪದೇಶದಿಂದ ಸತ್ಪ್ರೇರಣೆಯಿಂದ ನಮ್ಮ ಜನತೆಗೆ ನಿರ್ಭಯವನ್ನು ಕಲಿಸಿ, ಬಾಗಿದ್ದ ಬೆನ್ನನ್ನು ಮೇಲಕ್ಕೆತ್ತಿ ವಜ್ರಸ್ತಂಭವಾಗಿ ನಿಲ್ಲಿಸಿದರು; ಅವರು ಕೊಲೆಯಾದ ಮೇಲೆ ಕಂಬನಿ ಹರಿದು ಹೃದಯದ ಶಿಲೆ ಕರಗಿ ಮೃದುವಾಗಬೇಕಾಗಿದೆ!– ಆಗುತ್ತಿರುವಂತೆ ತೋರುತ್ತಿದೆ!

ಅಯ್ಯೋ, ಆದಹಾಗೆ ಕಾಣುವುದಿಲ್ಲ!(೧೦-೧೦-೧೯೫೦)

* * *

17-2-48

....'What was his great power over the mind and heart of man due to? Ages to come will judge and we are too near him to assess the many facets of his extraordinarily rich personality. But even we realise that his dominating passion was truth. That truth led him to proclaim without ceasing that good ends can naver be attiained by evil methods, that the end itself is distorted if the method pursued is bad. That truth led him confess publicly whenever he thought he had made a mistake-Himalayan errors he called some of his own mistakes. That truth led him to fight evil and untruth whenever he found them, regardless of the consequences. That truth made the service of the poor and the dispossessed the passion of his life, for where there is inequality and discrimination and suppression, there is injustice and evil and untruth. And thus he became the beloved of all those who

have suffered from social and political evils, and the great representative of humanity as it should be. Because of that truth in him, Wherever he sat became a temple and wherever he trod was hallowed ground...

from Jawaharalal Nehru's
broadcast speech. Feb. 14


* * *

(ತೀನಂಶ್ರೀಯವರು ಮೊದಲ ಬಾರಿಗೆ ದೆಹಲಿಗೆ ಹೋದಾಗ ೬-೧೧-೪೯ರಂದು ಪು.ತಿ.ನ. ಅವರಿಗೆ ಬರೆದಿರುವ ಪತ್ರದಲ್ಲಿ ಹೀಗಿದೆ:)

...(ಇಲ್ಲಿಯ ಕೆಲಸದಿಂದ ಎರಡು ಮೂರು ದಿನ) ಏನನ್ನೂ ನೋಡಲು ಆಗಿರಲಿಲ್ಲ. ಅನಂತರ ಎರಡು ದಿನ ಸುತ್ತಾಡಿದೆನು. ಮೊದಲು ನೋಡಿದ ಸ್ಥಳವೆಂದರೆ – ನಿಮಗೆ ಗೊತ್ತಷ್ಟೆ ರಾಜಘಾಟ್: ಗಾಂಧೀಜಿಯ ಸಂಸ್ಕಾರ ವೇದಿಕೆಯ ಮೇಲೆ ಹೂವನ್ನು ಅರ್ಪಿಸುವಾಗ ನನ್ನ ಕಣ್ಣು ನೀರು ತುಂಬಿತು...

ವರ್ಣಿಸತಕ್ಕದ್ದು ಎಷ್ಟೋ ಇದೆ — ಆದರೆ ಈಗ ಅವಕಾಶವಿಲ್ಲ. ಎಲ್ಲ ಮುಖತಃ...

ಕೃಪೆ: ತೀ.ನಂ.ಶ್ರೀ. ಪಥ ಪರಿಸರ
ಸಂ. ಟಿ.ಎಸ್. ನಾಗಭೂಷಣ
ಪ್ರ: ತೀ.ನಂ.ಶ್ರೀ. ಸಂಸಾರ ವರ್ಗ, ಬೆಂಗಳೂರು



'ಸಂಸ್ಕಾರ' ಸಂದರ್ಭ

◆ ಕೆ.ವಿ. ತಿರುಮಲೇಶ್

ಯು.ಆರ್. ಅನಂತಮೂರ್ತಿಯವರು ಸಂಸ್ಕಾರ ಕಾದಂಬರಿಯನ್ನು- (ಅವರ ಈವರೆಗಿನ ಐದು ಕಾದಂಬರಿಗಳಲ್ಲಿ ಅದೇ ಮೊದಲನೆಯದು)— ಇಂಗ್ಲೆಂಡಿನ ಬರ್ಮಿಂಗಾಮಿನಲ್ಲಿ ಇಂಗ್ಲಿಷ್ ಸಾಹಿತ್ಯದಲ್ಲಿ ಪಿಎಚ್. ಡಿ. ಮಾಡುತ್ತಿರುವಾಗ ಬರೆದರು. ಕಾಲ ೧೯೬೫, ಲೇಖಕರ ವಯಸ್ಸು ೩೩. ಮುಂದಿನ ವರ್ಷ ಕಾದಂಬರಿ ಭಾರತದಲ್ಲಿ ಪ್ರಕಟವಾದದ್ದೇ ಅದೊಂದು ಸಂಭ್ರಮಕ್ಕೆ ಕಾರಣವೂ ಆಯಿತು. ಖ್ಯಾತ ಕವಿ- ಭಾಷಾಂತರಕಾರರಾದ ಎ.ಕೆ. ರಾಮಾನುಜನ್ ಅದನ್ನು ೧೯೭೬ರಲ್ಲಿ ಇಂಗ್ಲಿಷ್‌ಗೆ ಭಾಷಾಂತರಿಸಿ ಪ್ರಕಟಿಸಿದಾಗ (೧೯೭೮ರಲ್ಲಿ ದ್ವಿತೀಯ ಮುದ್ರಣ), ಅದರ ಪ್ರಸಿದ್ಧಿ ಭಾಷಾ ಗಡಿಯನ್ನು ದಾಟಿತು ಎನ್ನಬಹುದು. ತದನಂತರ 'ಸಂಸ್ಕಾರ' ಜಗತ್ತಿನ ಇತರ ಅನೇಕ ಭಾಷೆಗಳಿಗೆ ಭಾಷಾಂತರಗೊಂಡಿದೆ, ಹಾಗೂ ಈ ಕಾದಂಬರಿಯಲ್ಲಿನ ಆಸಕ್ತಿ ನಿರಂತರವಾಗಿ ಬೆಳೆಯುತ್ತಲೇ ಹೋಗಿದೆ. ಯಾಕೆಂದರೆ ಭಾರತದ ಪ್ರಾದೇಶಿಕ ಭಾಷೆಯ ಕಾದಂಬರಿಯೊಂದು ಈ ರೀತಿ ಜಗದಗಲ ಆಸಕ್ತಿಯೆಬ್ಬಿಸಿ-ದುದು ಅಪರೂಪದ ಸಂಗತಿಯೇ ಸರಿ. ಪೌರ್ವಾತ್ಯ ಜಗತ್ತಿನ ವಿಷಯಗಳಲ್ಲಿ ಪಾಶ್ಚಾತ್ಯ ಜಗತ್ತಿಗಿರುವ ಮಾನವ ಶಾಸ್ತ್ರೀಯ ಆಸಕ್ತಿ ಇದಕ್ಕೆ ಕಾರಣವೆಂದು ನಾವಿದನ್ನು ತಳ್ಳಿಹಾಕುವುದು ಸುಲಭ. ಆದರೆ ಸತ್ಯವೆಂದರೆ ಸಂಸ್ಕಾರ ತಾನು ಜನ್ಮ ಪಡೆದ ಭಾಷೆಯಲ್ಲೇ ಮಹತ್ವದ ಕೃತಿಯೆ ಎನ್ನುವುದು, ಹಾಗೂ ಅದು ಜಾಗತಿಕ ಪ್ರಸಿದ್ಧಿಯನ್ನು ಪಡೆದಿದ್ದರೆ ಇದು ಸಾಧಿಸಿತೋರುವುದು ಈ ಕಾದಂಬರಿಯ ಉತ್ತಮಿಕೆಯನ್ನೇ. ಆದ್ದರಿಂದ ಸಂಸ್ಕಾರದ ಪ್ರಾಮುಖ್ಯವನ್ನು ಅರಿಯಬೇಕಾದರೆ, ನಾವು ಅದರ ಹುಟ್ಟಿನ ದೇಶ ಕಾಲ ಎರಡನ್ನೂ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ.

ಇಂಗ್ಲಿಷ್‌ಗೆ ಹೋಲಿಸಿದರೆ ಕನ್ನಡದಲ್ಲಿ ಕಾದಂಬರಿ ಪ್ರಕಾರದ ವಯಸ್ಸು

ಕಿರಿದು--ಸುಮಾರು ಒಂದು ನೂರು ವರ್ಷ ಅಷ್ಟೆ ಕನ್ನಡ ಕಾದಂಬರಿ ಪ್ರಕಾರದ ಹುಟ್ಟು ಮತ್ತು ಬೆಳವಣಿಗೆಯನ್ನು ಬೇರೆ ಬೇರೆ ಕಾಲಘಟ್ಟಗಳಲ್ಲಿ ಗುರುತಿಸಬಹುದಾಗಿದೆ. ಹತ್ತೊಂಬತ್ತನೆ ಶತಮಾನದ ಆರಂಭದ ಘಟ್ಟ ಮುಖ್ಯವಾಗಿ ಮರಾಠಿಯಿಂದ ಮಾಡಿಕೊಂಡಂಥ ಅನುವಾದಗಳು. ೧೮೯೯ರಲ್ಲಿ ಪ್ರಕಟವಾದ ಗುಲ್ವಾಡಿ ವೆಂಕಟರಾಯರ 'ಇಂದಿರಾಬಾಯಿ' ಕನ್ನಡದ ಮೊದಲ ಸ್ವತಂತ್ರ ಕಾದಂಬರಿ ಎನ್ನಲಾಗುತ್ತದೆ. ಅದರ ಜತೆಜತೆಗೇ ಕೆರೂರು ವಾಸುದೇವಾಚಾರ್ಯರ 'ಇಂದಿರಾ' (೧೯೦೮), ಮತ್ತು ಎಂ.ಎಸ್. ಪುಟ್ಟಣ್ಣನವರ 'ಮಾಡಿದ್ದುಣ್ಣೋ ಮಹಾರಾಯ' (೧೯೧೫) ಈ ಘಟ್ಟದ ಇತರ ಪ್ರಸಿದ್ಧ ಸ್ವತಂತ್ರ ಕಾದಂಬರಿಗಳಾಗಿರುತ್ತವೆ. ಮರಾಠಿ ಮತ್ತು ಬಂಗಾಳಿಯಿಂದ— ಮುಖ್ಯವಾಗಿ ಚಾರಿತ್ರಿಕ ಕಾದಂಬರಿಗಳ—ಭಾಷಾಂತರಗಳು ಈ ಕಾಲಘಟ್ಟದಲ್ಲಿ ವಿಪುಲವಾಗಿ ನಡೆದುವು. ಆದರೆ ಚಾರಿತ್ರಿಕ ದೃಷ್ಟಿಯಿಂದ ಈ ಕಾಲದ ಮಹತ್ವದ ಸಂಗತಿಯೆಂದರೆ, ಆಗ ಬಂದ ಹೆಚ್ಚಿನ ಕನ್ನಡದ ಸ್ವತಂತ್ರ ಕಾದಂಬರಿಗಳು ವಾಸ್ತವತೆಯ ಮೇಲೆ ನೆಲೆನಿಂತಿದ್ದು ಕನ್ನಡ ಕಾದಂಬರಿಯ ಮುಂದಿನ ಬೆಳವಣಿಗೆಗೆ ಇವು ಒಂದು ದಿಗ್ದರ್ಶನ ನೀಡಿದುವು ಎನ್ನುವುದು. ಆದರೆ 'ವಾಸ್ತವತೆ' ಎನ್ನುವುದು ಲಘುವಾಗಿ ಉಪಯೋಗವಾಗುವ ಕಲ್ಪನೆ; ಕನ್ನಡದ ಸಂದರ್ಭದಲ್ಲಿ ಅದರ ಜತೆ ಸಾಕಷ್ಟು ಪ್ರಮಾಣದಲ್ಲಿ ಆದರ್ಶವಾದದ ರಂಗೂ ಸೇರಿಕೊಂಡಿತ್ತು ಹಾಗೂ ಹಲವು ಬಾರಿ ಸಾಮಾಜಿಕ ವಾಸ್ತವವಾದ ಮತ್ತು ರಮ್ಯ ಆದರ್ಶವಾದ ಎರಡೂ ಒಂದೇ ಸಾಮಾಜಿಕ ಬದಲಾವಣೆಗೋಸ್ಕರ ಕೆಲಸ ಮಾಡುತ್ತಿದ್ದುವು. ಈ ದೃಷ್ಟಿಯಿಂದ ಕನ್ನಡದ ಮೊದಲನೇ ಕಾದಂಬರಿಯನ್ನೇ ಬೇಕಾದರೆ ನೋಡಬಹುದು: ಇದರ ವಸ್ತು 'ವಿಧವಾವಿವಾಹ'. ಪೂರ್ತಿ ಕಥನ, ಕಡು ವಾಸ್ತವ ತಂತ್ರದಲ್ಲಿ ಹೆಣೆದಿದ್ದು ಕತೆ ಕಥಾನಾಯಕಿಯಾದ ಯುವ ವಿಧವೆ ಇಂದಿರಾ ಮತ್ತು ಕಥಾನಾಯಕನಾದ ಒಬ್ಬ ವಿದ್ಯಾವಂತನೂ ಸುಲಕ್ಷಣನೂ ಆದ ತರುಣನ ನಡುವಿನ ವಿವಾಹದಲ್ಲಿ ಕೊನೆಗೊಳ್ಳುತ್ತದೆ. ವಿಧವಾ ವಿವಾಹ ಮತ್ತು ಸ್ತ್ರೀವಿದ್ಯಾಭ್ಯಾಸ, ಜತೆಗೆ ಕೆಲವೊಮ್ಮೆ (ಹಿಂದೂ ಧರ್ಮದಿಂದ ಕ್ರಿಶ್ಚಿಯನ್ ಧರ್ಮಕ್ಕೆ) ಮತಾಂತರ ಸಹ, ಈ ಕಾಲಘಟ್ಟದ ಕನ್ನಡ ಕಾದಂಬರಿಗಳಲ್ಲಿ ಪ್ರಾತಿನಿಧ್ಯ ಪಡೆದಂಥ ಕೆಲವೊಂದು ಸಾಮಾಜಿಕ ಸಮಸ್ಯೆಗಳು.

ವಾಸ್ತವತಾವಾದ ಎರಡನೇ ಘಟ್ಟದಲ್ಲಿ ಖಚಿತ ನೆಲೆಯನ್ನು ಕಂಡುಕೊಳ್ಳುತ್ತದೆ. ಇಪ್ಪತ್ತನೇ ಶತಮಾನದ ಎರಡನೇ ದಶಕದಲ್ಲಿ ಆರಂಭವಾಗಿ, ಶುದ್ಧ ವಾಸ್ತವತೆ ಮತ್ತು ರಮ್ಯ ವಾಸ್ತವತೆಯ ನಡುವೆ ಆಚೀಚೆ ಅಲ್ಲಾಡುತ್ತ, ಅದು ಅರವತ್ತರ ಮಧ್ಯಭಾಗದ ತನಕ ಹೋಗುತ್ತದೆ. ಜಿ. ಎಸ್. ಆಮೂರರು ಸರಿಯಾಗಿಯೆ ಗಮನಿಸಿರುವಂತೆ, ಇಂಗ್ಲಿಷ್ ಸಾಹಿತ್ಯಕ್ಕೆ ಆಧುನಿಕತೆ ಬಂದುದು ಇಪ್ಪತ್ತರ ದಶಕದಲ್ಲಿ, ಆದರೆ ೧೯ನೇ ಶತಮಾನದ ಇಂಗ್ಲಿಷ್ ಸಾಹಿತ್ಯಕ್ಕಿಂತ ಮುಂದೆ ಓದಿರದ ಆ ಕಾಲದ ಕನ್ನಡ ಬರಹಗಾರರಿಗೆ ಅಂಥ ಬೆಳವಣಿಗೆ ಕುರಿತು ಹೆಚ್ಚಿನ ಅರಿವಿರಲಿಲ್ಲ. ಅವರ ಈ ಓದಿನ ಮಿತಿ ವಸಾಹತುಶಾಹಿಯ ಶೈಕ್ಷಣಿಕ ನೀತಿಗೆ ಹಿಡಿದಿದ್ದ ಕನ್ನಡಿ ಎನ್ನಬಹುದು. ಅವರಿಗೆ ಜಾರ್ಜ್ ಎಲಿಯಟ್ ಮತ್ತು ಚಾರ್ಲ್ಸ್ ಡಿಕನ್ಸ್‌ನ ಕೃತಿಗಳ ಚೆನ್ನಾದ ಪರಿಚಯವಿದ್ದಿತು, ಆದರೆ ಜೇಮ್ಸ್ ಜಾಯ್ಸ್‌ನ ಯೂಲಿಸಿಸ್‌ನ್ನ ಅವರು ಕೇಳಿಯೇ ಇರಲಿಲ್ಲ. ಅಮೆರಿಕನ್ ಕಥನ ಸಾಹಿತ್ಯದಲ್ಲಿ ಕೂಡ ವಾಸ್ತವತಾವಾದ ಹೇಗೆ ಇಪ್ಪತ್ತನೇ ದಶಕದಲ್ಲೇ ಶುರುವಾಗುತ್ತದೆ ಎನ್ನುವುದನ್ನೂ ಆಮೂರರು ಉಲ್ಲೇಖಿಸುತ್ತಾರೆ (ಆಮೂರ ೧೯೮೩). ಕನ್ನಡ ಕಾದಂಬರಿಯ ಎರಡನೇ ಘಟ್ಟ ಸುಮಾರು ಅರ್ಧಶತಮಾನ ಕಾಲ ಹರಡಿಕೊಂಡದ್ದು ಕಥನಸಾಹಿತ್ಯದಲ್ಲಿ ಸೃಜನಶೀಲತೆಯ-ದೊಂದು ಭೋರ್ಗರೆತವನ್ನೇ ಕಂಡಿತು. ಕೆಲವು ಉದಾಹರಣೆಗಳನ್ನು ಕೊಡುವುದಾದರೆ, ಕುವೆಂಪು ಅವರ ಕಾನೂರು ಸುಬ್ಬಮ್ಮ ಹೆಗ್ಗಡಿತಿ (೧೯೩೬), ಶಿವರಾಮ ಕಾರಂತರ ಮರಳಿ ಮಣ್ಣಿಗೆ (೧೯೪೬), ವಿ.ಕೃ.ಗೋಕಾಕರ ಸಮರಸವೇ ಜೀವನ (೧೯೩೧-೫೩) ಇದೇ ಕಾಲದಲ್ಲಿ

ಹೊರಬಂದುವು—ಇವು ಒಂದೊಂದೂ ತಮ್ಮದೇ ರೀತಿಯಲ್ಲಿ ಪ್ರಖ್ಯಾತ ಕೃತಿಗಳು ಮಾತ್ರವೇ ಅಲ್ಲ ಕೃತಿಜನಕಗಳೂ ಹೌದು. ಕುವೆಂಪು ಮತ್ತು ಗೋಕಾಕರು ವಿಶಿಷ್ಟವಾದ ಕಾವ್ಯಕೃತಿಗಳನ್ನೂ ಬರೆದರೆ, ಕಾರಂತರು ತಮ್ಮ ಸೃಜನಶೀಲತೆಯನ್ನು ಪ್ರಧಾನವಾಗಿ ಕಾದಂಬರಿಗೇ ಮೀಸಲಿರಿಸಿ ಎಲ್ಲಾ ಕಾಲದ ಅಗ್ರಗಣ್ಯ ಕಾದಂಬರಿಕಾರ ಎನಿಸಿದ್ದಾರೆ. ಇದು ಬೇರೆ ಬೇರೆ ವಸ್ತುವಿಷಯಗಳೊಡನೆ ಹಾಗೂ ಕಥನ ಪ್ರಯೋಗಗಳೊಡನೆ, ಹೆಚ್ಚಾಗಿ ವಾಸ್ತವವಾದದ ಸೀಮೆಯೊಳಗೇ ಇದ್ದುಕೊಂಡು, ಕಾದಂಬರಿ ತನ್ನ ಸ್ವರೂಪವನ್ನು ರೂಪಿಸುವ ಕಾಲವೂ ಆಗಿದ್ದಿತು. ಆದರೆ ಈ ಹಸಿ ಹಸೀ ವಾಸ್ತವತೆಯನ್ನು ಮೀರಿದಂಥ ಎರಡು ಕೃತಿಗಳನ್ನು ಇಲ್ಲಿ ಹೆಸರಿಸಬೇಕಾಗಿದೆ: ಶ್ರೀರಂಗರ ವಿಶ್ವಾಮಿತ್ರನ ಸೃಷ್ಟಿ (೧೯೩೪) ಮತ್ತು ಶಿವರಾಮ ಕಾರಂತರ ಸರಸಮ್ಮನ ಸಮಾಧಿ (೧೯೩೭). ಶ್ರೀರಂಗರು ತಮ್ಮ ಕೃತಿಯಲ್ಲಿ ತಂತ್ರವಾಗಿ ಅದ್ಭುತ ರಮ್ಯತೆಯನ್ನೂ, ಕಾರಂತರು ತಮ್ಮದರಲ್ಲಿ ಒಂದು ತರದ ಮಾಯಾ ವಾಸ್ತವತೆಯನ್ನೂ (ಮ್ಯಾಜಿಕ್ ರಿಯಲಿಸಂ) ಉಪಯೋಗಿಸುತ್ತಾರೆ—ಮಾಯಾ ವಾಸ್ತವತೆಯೆನ್ನುವುದು ಕಾರಂತರ ಸಂದರ್ಭದಲ್ಲಿ ಅಕಾಲಿಕವೆಂದು ಅನಿಸಿದರೂ. ಮುಖ್ಯ ಸಂಗತಿಯೆಂದರೆ, ಈ ಲೇಖಕರು ತಮ್ಮ ಕಾಯಕಕ್ಕೆ ಸಂಬಂಧಿಸಿದಂತೆ ಹಿಂದಿನ ದಶಕಗಳ ಲೇಖಕರಿಗಿಂತ ಹೆಚ್ಚು ಸ್ವಪ್ರಜ್ಞೆಯುಳ್ಳವರೂ ಕಡಿಮೆ ಮುಗ್ಧರೂ ಆಗಿದ್ದರು ಎನ್ನುವುದು. ಕಾದಂಬರಿಯನ್ನು 'ಜನಪ್ರಿಯ'ಗೊಳಿಸುವುದರ ಮೂಲಕ ಓದುವ ಒಂದು ಜನವರ್ಗವನ್ನು ಸೃಷ್ಟಿಸಿದ್ದೂ ಇದೇ ಕಾಲಾವಧಿ. ವಿವರಣೆಗಿಂತ ಸಂಭಾಷಣೆಗೆ ಒತ್ತುಕೊಡುತ್ತಲೂ, 'ಪಾಂಡಿತ್ಯಪೂರ್ಣ' ಹಾಗೂ ಅನಗತ್ಯದ ಉಲ್ಲೇಖನಗಳನ್ನು (ಮುಖ್ಯವಾಗಿ ಪುರಾಣಕತೆಗಳತ್ತ ಬೊಟ್ಟುಮಾಡುವಂಥದನ್ನು) ಬಿಟ್ಟುಕೊಡುತ್ತಲೂ ಈ ಕಾಲಾವಧಿ ಕಾದಂಬರಿಗಳನ್ನು ಓದುಗ-ಪ್ರಿಯವಾಗಿಯೂ ಮನೋರಂಜಕವೂ ಆಗಿ ಮಾಡಿತು. ಈ ಕಾಲದ ಕಾದಂಬರಿ ಸಾರ್ವಭೌಮರಾದ ಅ.ನ.ಕೃಷ್ಣರಾಯರನ್ನು ಮಹಾ ಫ್ರೆಂಚ್ ಕಾದಂಬರಿಕಾರ ಬಾಲ್ಸಾಕ್‌ಗೆ ಕೂಡ ಹೋಲಿಸಬಹುದು. ತ.ರಾ.ಸುಬ್ಬರಾಯರು, ಅ.ನ.ಕೃ.ರವರ ಒಡನಾಡಿ ಮತ್ತು ಶಿಷ್ಯರಾಗಿದ್ದವರು, ತಮ್ಮ ಅನನುಕರಣ ಶೈಲಿಯಿಂದಾಗಿ ಚಾರಿತ್ರಿಕ ಕಾದಂಬರಿಗೆ ಹೊಸ ಜನ್ಮ ನೀಡಿದರು. ಅದೂ ಅಲ್ಲದೆ, ಪ್ರಗತಿಶೀಲ ಪಂಥ ಅಸ್ತಿತ್ವಕ್ಕೆ ಬಂತು—ನಿಜಕ್ಕೂ ಇದು ಎಡಪಂಥೀಯ ತತ್ವಪ್ರೇರಿತ ಜಾಗತಿಕ ಎನ್ನಬಹುದಾದ ಪ್ರಗತಿಶೀಲ ಚಳುವಳಿಯ ಪ್ರಾದೇಶಿಕ ಅವತಾರವಾಗಿತ್ತು. ಸ್ವಲ್ಪ ಕಾಲ ಅ.ನ.ಕೃ. ಇದರ ಜತೆ ನೋಂದಾಯಿಸಿಕೊಂಡಿದ್ದರು; ಆದರೆ ಅದರ ಮುಖ್ಯ ವಕ್ತಾರರು ಎಂದೆನಿಸಿಕೊಂಡಿದ್ದವರು ನಿರಂಜನ ಮತ್ತು ಬಸವರಾಜ ಕಟ್ಟೀಮನಿ. ಕಟ್ಟಾ ವಾಸ್ತವತೆಯ ಮೇಲೆ ನಿಂತಿದ್ದ ಈ ವರ್ಗದ ಕಾದಂಬರಿಗಳು ತುಳಿತಕ್ಕೆ ಒಳಗಾಗಿದ್ದವರನ್ನು ಮೇಲೆತ್ತುವ ತಮ್ಮ ಸಾಮಾಜಿಕ- ಆರ್ಥಿಕ ಧೋರಣೆಯನ್ನು ಮರೆಮಾಚಲಿಲ್ಲ. ಈ ಎರಡನೆ ಕಾಲಘಟ್ಟವು ಭಾರತದ ದೀರ್ಘಕಾಲದ ಸ್ವಾತಂತ್ರ್ಯ ಚಳುವಳಿಗೆ ಸಮಾನಾಂತರವಾಗಿರುವುದರಿಂದ, ಹಲವಾರು ಕಾದಂಬರಿ ಕೃತಿಗಳು ಸ್ವಾತಂತ್ರ್ಯ ಸಂಗ್ರಾಮದ ರಾಷ್ಟ್ರೀಯತಾವಾದದಿಂದಲೂ ಪ್ರೇರಿತವಾಗಿರುವುದು ಕಂಡುಬರುತ್ತದೆ. ಕನ್ನಡ ಕಾದಂಬರಿಯ ಈ ಕಾಲದ ಇನ್ನೊಂದು ಗುಣವೆಂದರೆ, ಲೇಖಕಿಯರ ಪ್ರವೇಶ— ಲೇಖಕಿಯರಾದ ತ್ರಿವೇಣಿ, ಎಂ.ಕೆ. ಇಂದಿರಾ ಮತ್ತು ಅನುಪಮಾ ನಿರಂಜನ ತಂತಮ್ಮ ವಿಶಿಷ್ಟ ಧ್ವನಿಗಳನ್ನು ಕಾದಂಬರಿ ಪ್ರಕಾರಕ್ಕೆ ನೀಡಿದರು.

ಮೂರನೆಯದಾದ ಆಧುನಿಕ ಕಾಲಘಟ್ಟವು ಅರವತ್ತರ ದಶಕದಲ್ಲಿ ಶುರುವಾಗುತ್ತದೆ. ಕನ್ನಡ ಸಾಹಿತ್ಯಿಕ ಪರಿಭಾಷೆಯಲ್ಲಿ ಈ ಮೂರು ಕಾಲಘಟ್ಟಗಳನ್ನು ಕಥನ ಸಾಹಿತ್ಯದಲ್ಲಿ ಮಾತ್ರವೇ ಅಲ್ಲ ಕಾವ್ಯಪ್ರಕಾರದಲ್ಲಿ ಸಹ, ಕ್ರಮವಾಗಿ, ಅರುಣೋದಯ, ನವೋದಯ, ಮತ್ತು ನವ್ಯ ಎಂದು ಗುರುತಿಸಲಾಗುತ್ತಿದೆ. ನವ್ಯ ಕಾಲಘಟ್ಟದ ಲೇಖಕರು ಸ್ವಾತಂತ್ರ್ಯಾನಂತರದ ಭಾರತದಲ್ಲಿ ಶಿಕ್ಷಣ ಪಡೆದ ತಲೆಮಾರಿನವರು, ಹಾಗೂ ಅವರು ಇಂಗ್ಲಿಷ್ ಚೆನ್ನಾಗಿ ಓದಿಕೊಂಡವರೂ ಕೂಡ (ಅನಂತಮೂರ್ತಿಯಂಥ ಕೆಲವರಾದರೂ ಉನ್ನತ ಶಿಕ್ಷಣವನ್ನು ವಿದೇಶದಲ್ಲಿ ಗಳಿಸಿಕೊಂಡವರು).

ಪಾಠಪಟ್ಟಿಯಲ್ಲಿ ಆದ ಸುಧಾರಣೆ ಹಾಗೂ ಸಂಪರ್ಕಕ್ಷೇತ್ರದಲ್ಲಿ ನಡೆದ ಕ್ರಾಂತಿಗಳಿಂದಾಗಿ ಜಾಗತಿಕ ಸಾಹಿತ್ಯದಲ್ಲಿ ಏನು ನಡೆಯುತ್ತಿದೆ ಎನ್ನುವ ಕುರಿತು ಅವರು ತಮ್ಮ ಹಿಂದಣವರಿಗಿಂತ ಹೆಚ್ಚು ಬಲ್ಲವರಾಗಿದ್ದರು. ಹೀಗೆ ಅವರ ಲೋಕದೃಷ್ಟಿಯನ್ನು ರೂಪಿಸಿದವರಲ್ಲಿ ಜಾಯ್ಸ್, ಪೌಂಡ್, ಯೇಟ್ಸ್ ಮತ್ತು ಎಲಿಯಟ್ ಮಾತ್ರವೇ ಅಲ್ಲ, ಸಾರ್ತ್ರೆ, ಕಮೂ, ಕಾಫ್ಕಾ ಮತ್ತು ಬೆಕೆಟ್ ಕೂಡ ಇದ್ದರು. ಆದರೆ ನವ್ಯ ಎಂದರೆ ನಿಖರವಾಗಿ ಏನು? ಈಗ 'ನವ್ಯ' (ಅಥವಾ ಆಧುನಿಕತೆ, ಮಾಡರ್ನಿಸಂ) ಎನ್ನುವುದು ಎಲ್ಲವನ್ನೂ ಒಳಗೊಳ್ಳುವ ಒಂದು ಗುಡಾಣದಂಥ ಪದವಾಗಿಬಿಟ್ಟಿದೆ. ಇದಕ್ಕೆ ಕಾರಣ ಅದರ ಉಪಯೋಗದಲ್ಲೇ ಇರುವ ಮೂಲಭೂತವಾದ ದ್ವಿವಿಧ, ಯಾಕೆಂದರೆ ಅದನ್ನು ಕೆಲವು ಸಲ ಒಂದು ಕಾಲಘಟ್ಟಕ್ಕೆ, ಕೆಲವು ಸಲ ಒಂದು ಪ್ರಕಾರಕ್ಕೆ ಸಂಬಂಧಿಸಿ ಬಳಸಲಾಗುತ್ತಿದೆ. ಚಾರಿತ್ರಿಕ ಸಮಯವು ಪ್ರಕಾರದೊಂದಿಗೆ ಸಂಗತವಾಗುವುದಾದರೆ, ನವ್ಯವು ಪ್ರಥಮ ಮಹಾಯುದ್ಧಾನಂತರದ ಯೂರೋಪಿನಲ್ಲಿ ಹಾಗೂ ಭಾರತದಂಥ ಶೋಷಿತ ದೇಶಗಳಲ್ಲಿ ವಸಾಹತೋತ್ತರ ಕಾಲದಲ್ಲಿ ಕಾಣಿಸಿಕೊಂಡಂಥ ಒಂದು ರೀತಿಯ ವಿಶಿಷ್ಟ ಪ್ರಾಯೋಗಿಕ ಬರಹ ಎನ್ನಬಹುದು. ಎಂದರೆ ಕಾಲಕ್ಕೆ ಸಂಬಂಧಿಸಿದಂತೆ, ಯುದ್ಧಾನಂತರದ ಯೂರೋಪು ಮತ್ತು ಒಂದು ತಲೆಮಾರಿನ ನಂತರದ ವಸಾಹತೋತ್ತರ ಭಾರತ ಮೊದಲಾದ ರಾಷ್ಟ್ರಗಳು ನವ್ಯಕ್ಕೆ ತಕ್ಕುದಾದ ಕ್ಷೇತ್ರಗಳನ್ನು ಒದಗಿಸಿದುವು ಎನ್ನಬಹುದು. ಇದರ ಹೊರತಾಗಿ, ವ್ಯಂಗ್ಯ, ಬಿರುಕು, ವಿಕ್ಷಿಪ್ತತೆ, ಸಂಪ್ರದಾಯವಿರೋಧ, ದೈವವಿರೋಧ, ಅನೈಕ್ಯತೆ, ಅಸಂಗತ್ವ, ನಶ್ವರತೆ, ಏಕಾಕಿತನ, ನಿರಾಶಾವಾದ, ಶೂನ್ಯವಾದ, ಹಾಸ್ಯ, ಗೇಲಿ, ಕಾಯುವಿಕೆ, ಅಸ್ತಿತ್ವದ ಲಘುತನ (ಗುರುತ್ವಾಕರ್ಷಣೆ ಕಳೆದುಕೊಂಡಿರುವಿಕೆ), ಅಪಮೌಲ್ಯ, ವಿಕೇಂದ್ರತ್ವ, ಅನೈಸರ್ಗಿಕ ಅಭಿವ್ಯಕ್ತಿ (ಎಕ್ಸ್‌ಪ್ರೆಶನಿಸಂ), ಪ್ರಾಯೋಗಿಕತೆ, ಅಪಜ್ಞೆ, ದೇಶಭ್ರಷ್ಟತೆ, ಬೇರಿಲ್ಲದಿರುವಿಕೆ, ಜೀರ್ಣಾವಸ್ಥೆ ವ್ಯಕ್ತಿವಿಶಿಷ್ಟತೆ, ಅಲ್ಲಿ ಇಲ್ಲಿಂದ ಕೂಡಿಹಾಕುವಿಕೆ (ಬ್ರಿಕೊಲಾಜ್), ನಶ್ವರವಾದ, ಭಿನ್ನತೆ, ವಿದೇಶೀಯತೆ ಇತ್ಯಾದಿಗಳು ಇದರ ಗುಣಗಳಾಗಿದ್ದುವು. ಹೀಗೆ ನವ್ಯತೆಯೆನ್ನುವುದು ಒಂದು ಸುಸ್ತಿನ ಸ್ಥಿತಿಯನ್ನು ವರ್ಣಿಸುವ ಎಂದೂ ಸುಸ್ತಾಗದ ಒಂದು ಪದಪರಿವಾರದಂತೆ ತೋರುವುದು! ಕನ್ನಡಕ್ಕೆ ನವ್ಯತೆ ಬಂದಾಗ, ಅದಕ್ಕೊಂದು ಸಮರ್ಥನೆಯಿದ್ದಿತ್ತೆ? ಸಮಾಜದಲ್ಲಿದ್ದ ಯಾವುದರಿಂದಾದರೂ ಅದಕ್ಕೆ ಕರೆ ಹೋಗಿತ್ತೆ? ಅಥವಾ ಅದೊಂದು ಸಾಮಯಿಕ ಶೋಕಿಗೆಂದು ವಿದೇಶದಿಂದ ಆಮದುಗೊಳಿಸಲ್ಪಟ್ಟ ಉಡುಗೆಯಾಗಿತ್ತೆ? ನವ್ಯದ ಪ್ರೇಮಿಗಳನ್ನೂ ಟೀಕಾಕಾರನ್ನೂ ಸಮನಾಗಿ ಕಾಡಿದಂಥ ಪ್ರಶ್ನೆಗಳು ಇವು. ಇದಕ್ಕೆ ನವ್ಯದ ಒಂದು ರಕ್ಷಣಾಮಾರ್ಗವೆಂದರೆ, ಸ್ವಾತಂತ್ರ್ಯೋತ್ತರ ಭಾರತದ ಬಗ್ಗೆ ಮುಖ್ಯವಾಗಿ ನೆಹರೂ ಅರ್ಥವ್ಯವಸ್ಥೆಯ ಕುರಿತಾಗಿ, ಹೊಸ ತಲೆಮಾರು ಹೊಂದಿದ ಭ್ರಮನಿರಸನದತ್ತ ಬೊಟ್ಟುಮಾಡುವುದು. ಇನ್ನೊಂದು ಮಾರ್ಗವೆಂದರೆ, ಪ್ರಜಾಪ್ರಭುತ್ವ ಅಪೇಕ್ಷಿಸಿದಂಥ ಕ್ಷಿಪ್ರ ಮೌಲಿಕ ಬದಲಾವಣೆ ಹಾಗೂ ಪರಿಣಾಮವಾಗಿ ಸಾಂಪ್ರದಾಯಿಕ ಪಾಳೇಗಾರೀ ಸಮಾಜದಲ್ಲಿ ಉಂಟಾದ ಬುಡಮೇಲಾಟಗಳನ್ನು ಕಾರಣವಾಗಿ ನೀಡುವುದು. ಕೆಲವರು ಆಧುನಿಕತೆ ಮತ್ತು ಆಧುನಿಕತ್ವಗಳ (ನವ್ಯತೆ) ನಡುವೆ ವ್ಯತ್ಯಾಸ ಮಾಡುತ್ತಾರೆ– ಆಧುನಿಕತೆಯೆನ್ನುವುದು, ಪ್ರಧಾನವಾಗಿ ತಂತ್ರಜ್ಞಾನ ಕ್ರಾಂತಿಯಿಂದಾಗಿ ಉಂಟಾದ ಬದುಕಿನ ಒಂದು ಅವಸ್ಥೆಯಾದರೆ, ಆಧುನಿಕತ್ವವೆನ್ನುವುದು ಕಲೆ ಮತ್ತು ಸಾಹಿತ್ಯದ ಕುರಿತಾದ ಒಂದು ಜ್ಞೇಯವಾದ. ಆದ್ದರಿಂದ ನಾವು ಆಧುನಿಕ ಮತ್ತು 'ಆಧುನಿಕ' (ನವ್ಯ) ಎಂಬ ವ್ಯತ್ಯಾಸವನ್ನು ಮಾಡಿಕೊಳ್ಳಬಹುದು. ಆಧುನಿಕವೆನ್ನುವುದು ತಂತ್ರಜ್ಞಾನಸಮಾಜದಲ್ಲಿ ಕಂಡುಬರುವಂಥದಾದರೆ, 'ಆಧುನಿಕ' (ನವ್ಯ) ಎನ್ನುವುದು ಆಧುನಿಕವೂ (ಕಾಲಕ್ಕೆ ಸಂಬಂಧಿಸಿದ ಅರ್ಥದಲ್ಲಿ) ಪ್ರಾಯೋಗಿಕವೂ (ಜ್ಞೇಯಾರ್ಥದಲ್ಲಿ) ಎರಡೂ ಆಗಿರುತ್ತದೆ. ಆದರೆ ಕಲಾಕೃತಿಯೊಂದು ಈ ಕಡಿಮೆ ಕಾಠಿಣ್ಯದ ಅರ್ಥದಲ್ಲಿ ಕೇವಲ ಆಧುನಿಕವಾದ

ಕಾರಣಕ್ಕೆ ನವ್ಯವೂ (ಅರ್ಥಾತ್ 'ಆಧುನಿಕ'ವೂ) ಆಗಿರತಕ್ಕದ್ದೇ? ಆಧುನಿಕ ಕಾಲದಲ್ಲಿ ನಿರ್ಮಿತವಾದ ಕಾರಣಕ್ಕೆ ಕೃತಿ ಪ್ರಾಯೋಗಿಕವಾಗಿ 'ಆಧುನಿಕ' (ನವ್ಯ) ಎನಿಸಬೇಕೆಂದೇನೂ ಇಲ್ಲ; ಬರೇ ಹೆಸರಿಗೆ ಮಾತ್ರ ಆಧುನಿಕವಾಗಿದ್ದು (ಎಂದರೆ, ಆಧುನಿಕ ಕಾಲದಲ್ಲಿ ರಚಿತವಾದುದಾಗಿದ್ದು), ಸತ್ವದಲ್ಲಿ ಹಾಗಿಲ್ಲವೆಂದಾದರೆ ಅಂಥ ಕೃತಿ ಪಳೆಯುಳಿಕೆಯಂತೆ ಅನಿಸುತ್ತದೆ. ಆದರೆ ವಾಸ್ತವ ಜಗತ್ತಿನಲ್ಲಿ ಆಧುನಿಕ ಮತ್ತು 'ಆಧುನಿಕ' (ನವ್ಯ) ಎಂಬೀ ವ್ಯತ್ಯಾಸ ಹಲವು ಸಲ ಇಲ್ಲದಾಗುವುದು ಉಂಟು. ಇದರ ಅರ್ಥವೆಂದರೆ, ಆಧುನಿಕ ಕಾಲದ ಸಾಹಿತಿ, ಕಲಾವಿದ 'ಆಧುನಿಕ'ನಾಗಿಯೇ ಆಗುತ್ತಾನೆ ಎನ್ನುವ ನಂಬಿಕೆ. ಈ ದೃಷ್ಟಿಯಿಂದ, ನಮ್ಮ ಸಾಹಿತ್ಯಧರ್ಮಕ್ಕೆ ಕಾಲಧರ್ಮವೇ ಕಾರಣ ಎಂದು ನಾವು ನಂಬಿದ್ದೇವೆ ಎಂದಾಯಿತು.

ಶಾಂತಿನಾಥ ದೇಸಾಯಿಯವರ ಮುಕ್ತಿ (೧೯೬೧) ಕನ್ನಡದ ಮೊದಲ ನವ್ಯ ಕಾದಂಬರಿ ಎಂಬುದಾಗಿ ಸಾಧಾರಣವಾಗಿ ಹೇಳಲಾಗುತ್ತದೆ. ಗಿರಡ್ಡಿ ಗೋವಿಂದರಾಜರ ಪ್ರಕಾರ, ಈ ಕಾದಂಬರಿಯ ಪ್ರಧಾನ ಪಾತ್ರವಾದ ಗೌರೀಶ ಒಬ್ಬ ಎರಕದಚ್ಚಿನ ನವ್ಯ ನಾಯಕ--ದುರ್ಬಲ, ಭಾವುಕ, ಹಾಗೂ ಸಂವೇದನಾಶೀಲ. ಅವನನ್ನು ಶ್ರೀಕಾಂತ ಎಂಬ ಇನ್ನೊಂದು ಪಾತ್ರಕ್ಕೆ ಮುಖಾಮುಖಿ ಮಾಡಲಾಗಿದೆ; ಶ್ರೀಕಾಂತನಾದರೆ, ಗುಣವಾಗದ ರೋಗವೊಂದಕ್ಕೆ ತುತ್ತಾಗಿದ್ದರೂ, ಬದುಕನ್ನು ಅತೀವವಾಗಿ ಪ್ರೀತಿಸುವವನು, ಮತ್ತು ತನ್ನ ಅನುಭವಗಳಿಗೆ ತಾನೇ ಜವಾಬ್ದಾರಿ ತೆಗೆದುಕೊಳ್ಳುವವನು. ಇದು ಗೌರೀಶನ ಅಸಹಾಯಕತೆಯನ್ನು ಎತ್ತಿ ತೋರಿಸುತ್ತದೆ. ಕಾದಂಬರಿಯ ಕೊನೆಯಲ್ಲಿ ಆಫ್ರಿಕೆಗೆ ಹೋಗಲು ಗೌರೀಶ ತೆಗೆದುಕೊಳ್ಳುವ ತೀರ್ಮಾನ ಒಂದು ಪಲಾಯನವೋ ಅಥವಾ ಹೊಣೆಗಾರಿಕೆಯನ್ನು ತೆಗೆದುಕೊಳ್ಳುವ ಇರಾದೆಯೋ ಎನ್ನುವುದು ಸ್ಪಷ್ಟವಾಗುವುದಿಲ್ಲವಾದರೂ, ಗೌರೀಶನಿಗೀಗ ತನ್ನ ಕುರಿತು ಪ್ರಜ್ಞೆಯುಂಟಾಗಿದೆ ಎಂದ ಮೇಲೆ ಆತ ಹೊಣೆಗಾರನಾಗುತ್ತಾನೆ ಎನ್ನಬಹುದು. ವಿಕ್ಷೇಪ (೧೯೭೧) ಎಂಬ ಇನ್ನೊಂದು ಕಾದಂಬರಿಯಲ್ಲಿ ದೇಸಾಯಿಯವರು ಮುಖ್ಯ ಪಾತ್ರವಾದ ರಾಹುಲನ ಅವಸ್ಥೆಯನ್ನು ಚಿತ್ರಿಸುತ್ತಾರೆ; ಈತ ಯಾರ ಜತೆಯೂ ಸಂಬಂಧ ಸಾಧಿಸಿಕೊಳ್ಳಲು ಅಸಮರ್ಥನಾಗಿರುವವನು. ಅವನು ವ್ಯಕ್ತಿಯಿಂದ ವ್ಯಕ್ತಿಯತ್ತ, ಅನುಭವದಿಂದ ಅನುಭವದತ್ತ ಹೊರಳುತ್ತಲೇ ಇರುತ್ತಾನೆ, ಆದರೆ ಜಯ ಗಳಿಸುವುದಿಲ್ಲ. ಸೃಷ್ಟಿಯಲ್ಲಿ (೧೯೭೯) ಬರೆಯುವ ಸಾಧ್ಯತೆಯೇ ಪ್ರಶ್ನೆಗೆ ಗುರಿಯಾಗುತ್ತದೆ. ಲೇಖಕ ಬರವಣಿಗೆಯನ್ನು ಕ್ರಿಯೆಗೋಸ್ಕರ ತಿರಸ್ಕರಿಸುತ್ತಾನೆ. ಹೀಗೆ ದೇಸಾಯಿಯವರ ಕೃತಿಗಳ ಹಿಂದೆ ಫ್ರೆಂಚ್ ಅಸ್ತಿತ್ವವಾದದ ಎಳೆಗಳಿರುವುದು ಗಮನಾರ್ಹ. ಯಶವಂತ ಚಿತ್ತಾಲರ ಮೂರು ದಾರಿಗಳು (೧೯೬೪) ಒಂದೇ ಘಟನೆಯನ್ನು ಬೇರೆ ಬೇರೆ ದೃಷ್ಟಿಕೋನಗಳಿಂದ ಕಥಿಸುವ ಹೊಸತನವನ್ನು ಒಳಗೊಂಡಿದೆ. ಪ್ರತಿಯೊಂದು ದೃಷ್ಟಿಕೋನವೂ ಕೇವಲ ಪಾಕ್ಷಿಕವಾದ್ದರಿಂದ, ಇದು ವಸ್ತುನಿಷ್ಠ ಸತ್ಯವೆಂಬ ಪರಂಪರಾಗತ ಕಲ್ಪನೆಯನ್ನು ಸಮಸ್ಯೆಗೆ ಒಡ್ಡುತ್ತದೆ. ಪೂರ್ಣಚಂದ್ರ ತೇಜಸ್ವಿಯವರ ಕಿರುಕಾದಂಬರಿ ಸ್ವರೂಪ (೧೯೬೬) ಫ್ರೆಂಚ್ ಕಾದಂಬರಿಕಾರ ಅಲ್ಬರ್ಟ್ ಕಮೂವಿನ La Chute (The Fall, 1956) ಎಂಬ ಕಾದಂಬರಿಯನ್ನು ಹೋಲುವಂಥದು. ಮೌಲ್ಯರಹಿತ ಸಮಾಜವೊಂದರಲ್ಲಿ ಆಯ್ಕೆಗೆ ಬಾಧ್ಯನಾಗುವ ಹಾಗೂ ಬೇರೆಯವರ ಕಾರ್ಯಗಳಿಗೆ ಕೆಲವೊಮ್ಮೆ ಹೊಣೆ ಹೊರಬೇಕಾಗಿ ಬರುವ ಮನುಷ್ಯನೊಬ್ಬನ ಅವಸ್ಥೆಯನ್ನು ಸ್ವರೂಪ ಚಿತ್ರಿಸುತ್ತದೆ. ಇದೂ ಕೂಡ ಅಸ್ತಿತ್ವವಾದದ ಪ್ರಭಾವಕ್ಕೆ ಒಳಗಾದ ಕಾದಂಬರಿ ಎನ್ನಬಹುದು. ಈ ರೀತಿಯ ನೇರ ವಿದೇಶೀ ಪ್ರಭಾವಕ್ಕೆ ಒಳಗಾದ ಕೃತಿಗಳಿಗೆ ಇನ್ನೊಂದು ಉದಾಹರಣೆಯೆಂದರೆ ಗಿರಿಯವರ ಗತಿ ಸ್ಥಿತಿ (೧೯೭೧). ಇಲ್ಲಿನ ವಾತಾವರಣ ಪೂರ್ತಿ ಕಾಫ್ಕಾನಂಥದು. ಎರಡು ಮುಖ್ಯ ಪಾತ್ರಗಳನ್ನು ಒಂದು ಗಂಡು ಇನ್ನೊಂದು ಹೆಣ್ಣು ಕಾದಂಬರಿಯ ಉದ್ದಕ್ಕೂ 'ಅವನು' ಮತ್ತು 'ಅವಳು' ಎಂದು

ಮಾತ್ರವೇ ಗುರುತಿಸಲಾಗಿದೆ. ಕೊನೆಯಿಲ್ಲದ ಬೀದಿಗಳು, ತಪ್ಪಿಸಿಕೊಳ್ಳುವ ಪ್ರಯತ್ನಗಳು, ಸಂವಹನಕ್ಕೆ ಅಸಾಧ್ಯವಾದ ಜನ ಹಾಗೂ ಒಟ್ಟಾರೆಯಾಗಿ ಕಾಣುವ ಅರ್ಥ ಕುಸಿತ ಇಲ್ಲಿನ ಮುಖ್ಯ ಲಕ್ಷಣಗಳು. ಆದರೂ ನವ್ಯದ ಉತ್ತುಂಗ ಕ್ಷಣವನ್ನು ಕಾಣಬೇಕಾದರೆ ನಾವು ಪಿ. ಲಂಕೇಶರ ಬಿರುಕು (೧೯೬೭) ಓದಬೇಕು. ಇಂಗ್ಲಿಷ್‌ನ ಕಿಂಗ್‌ಸ್ಲಿ ಎಮಿಸ್‌ನ ಲಕ್ಕಿ ಜಿಮ್ (೧೯೫೪) ಹಾಗೂ ಜೆ. ಡಿ. ಸಾಲಿಂಜರ್‌ನ ಕ್ಯಾಚರ್ ಇನ್ ದ ರೈ (೧೯೫೧) ಎರಡೂ ಒಟ್ಟಿಗೆ ಮಡಚಿದ ಹಾಗಿರುವ ಬಿರುಕು ಬಸವರಾಜ್ ಎಂಬ ಒಬ್ಬ ವಿಶ್ವವಿದ್ಯಾಲಯದ ಬಡ ಯುವ ವಿದ್ಯಾರ್ಥಿ ಸಮಾಜದಲ್ಲಿನ ಬೂರ್ಜ್ವಾ ಮೌಲ್ಯಗಳಿಗೆ ಮುಖಾಮುಖಿಯಾಗುವ ಸಮಸ್ಯೆಗಳನ್ನು ಚಿತ್ರಿಸುತ್ತದೆ. ಈ ಬೂರ್ಜ್ವಾ ಮೌಲ್ಯಗಳನ್ನು ಪ್ರತಿನಿಧಿಸುವವರು ಮುಖ್ಯವಾಗಿ ಆತನ ಪ್ರೊಫೆಸರರಾದ ರಂಗಯ್ಯ ಮತ್ತು ಪ್ರೊಫೆಸರರ ಪತ್ನಿ. ಲಂಕೇಶರೇ ಮುನ್ನುಡಿಯಲ್ಲಿ ಹೇಳುವಂತೆ, ಇದು ವ್ಯಕ್ತಿಯೊಬ್ಬ ಒಂದು ಸಂದರ್ಭದಿಂದ ಇನ್ನೊಂದಕ್ಕೆ ಪಲಾಯನಗೈಯುತ್ತ, ತನ್ನಿಂದ ತಾನೇ ತಪ್ಪಿಸಿಕೊಳ್ಳುತ್ತ, ಕೊನೆಗೂ ತನ್ನನ್ನು ತಾನು ಹೀಗೆಂದು ಸ್ವೀಕರಿಸುವವನ ಕತೆ. ಬಸವರಾಜನಿಗೆ ಬಂಡಾಯವೇಳುವ ಮನಸ್ಸಿದೆ, ಆದರೆ ಆತನ ವ್ಯಕ್ತಿತ್ವದ ದೌರ್ಬಲ್ಯ ಅದಕ್ಕೆ ಬಿಡುವುದಿಲ್ಲ; ಆದ್ದರಿಂದ ಆತ ಸುಳ್ಳು, ಭಂಡತನ ಮತ್ತು ಭ್ರಮಾಧೀನತೆಗಳಿಗೆ ಶರಣಾಗುತ್ತಾನೆ. ಕಾದಂಬರಿಯ ಕೊನೆಯ ಭಾಗದಲ್ಲಿ ಆತನಿಗೆ ಪ್ರೊಫೆಸರರ ಹೆಂಡತಿಯ ವಿಪ್ರಲಂಭನವನ್ನು ಎದುರಿಸಲು ಸಾಧ್ಯವಾಗುತ್ತದೆ (ಇಡೀ ಕಾದಂಬರಿಯಲ್ಲಿ ಬಸವರಾಜ್ ಆಕೆಯನ್ನು 'ತಿಮಿಂಗಿಲ' ಎಂದು ಉಲ್ಲೇಖಿಸುತ್ತಾನೆ!), ಆದರೆ ಆಕೆಯ ಮಗಳಾದ ಶಾಂತಳಿಗೆ ಶರಣಾಗತನಾಗುತ್ತಾನೆ. ಈ ಕೃತಿಯಲ್ಲಿ ಕಂಡುಬರುವ ತಮಾಷೆ, ನಗು, ಪಾವಿತ್ರ್ಯಮಾಲಿನ್ಯ, ಎಗ್ಗಿಲ್ಲದ ಮೂರ್ತಿಭಂಜನೆ ಮುಂತಾದ ಸಂಗತಿಗಳು ಕರ್ನಾಟಕದ ಅಕ್ಷರಜಗತ್ತಿನಲ್ಲೊಂದು ಘಾತದ ಅಲೆಯೆಬ್ಬಿಸಿದುವು ಎನ್ನುವುದು ಉಲ್ಲೇಖನೀಯ. ಬಹುಬೇಗನೆ ಲಂಕೇಶರ ಈ ಕಾದಂಬರಿ ಯುವಜನತೆಯ ವೇದವಾಯಿತು; ಯಾಕೆಂದರೆ ಅದು ಹಲವಾರು ತರುಣ ಓದುಗರ ಹತ್ತಿಕ್ಕಿದ ಭಾವನೆಗಳಿಗೊಂದು ಅಗತ್ಯವಾದ ಬಿಡುಗಡೆ ದೊರಕಿಸಿ ಕೊಟ್ಟಿರಬೇಕು.

ಈಗಾಗಲೇ ಹೇಳಿದಂತೆ, ಅನಂತಮೂರ್ತಿಯವರ ಸಂಸ್ಕಾರ ೧೯೬೫ರಲ್ಲಿ ಪ್ರಕಟವಾಯಿತು. ಸುಮಾರು ನೂರೈವತ್ತು ಪುಟಗಳೊಳಗಿನ ಈ ಚಿಕ್ಕ ಸಂಪುಟ ಸ್ವಾತಂತ್ರ್ಯಪೂರ್ವ ಭಾರತದ ಅವನತಿಯಲ್ಲಿರುವ ಒಂದು ಬ್ರಾಹ್ಮಣ ಅಗ್ರಹಾರದ ಕತೆಯನ್ನು ನಿರೂಪಿಸುತ್ತದೆ. ಬಹುಶಃ ಸ್ವಾತಂತ್ರ್ಯಕ್ಕಿಂತ ಒಂದೆರಡು ದಶಕಗಳ ಹಿಂದಣ ಕತೆ. ಪ್ರಧಾನ ಪಾತ್ರವಾದ ಪ್ರಾಣೇಶಾಚಾರ್ಯರು ಪ್ರತಿನಾಯಕನಾದ ನಾರಣಪ್ಪನನ್ನುಳಿದು ಮತ್ತೆ ಎಲ್ಲರಿಂದಲೂ ಗೌರವಿಸಲ್ಪಡುವ ಒಬ್ಬ ನಿಷ್ಠಾವಂತನೂ ಪಂಡಿತನೂ ಆದ ಬ್ರಾಹ್ಮಣ. ಆಚಾರ್ಯರು ಹಲವು ವರ್ಷಗಳಿಂದ ತಮ್ಮ ರೋಗಿ ಪತ್ನಿಯೊಂದಿಗೆ ವಾಸವಾಗಿದ್ದು ಮದುವೆಯಾದ ಲಾಗಾಯ್ತಿನಿಂದಲೂ ಅವರು ಆಕೆಯ ಆರೈಕೆ ಮಾಡಿಕೊಂಡಿದ್ದಾರೆ. ಅದಲ್ಲದೆ, ಅಗ್ರಹಾರದ ಜನಕ್ಕೆ ತಮ್ಮ ಮನೆ ಚಾವಡಿಯಲ್ಲೇ ಪುರಾಣಪ್ರವಚನ ನೀಡುವುದು ಹಾಗೂ ಹೊಳೆಯಾಚೆಯ ಮಾರುತಿ ಗುಡಿಯಲ್ಲಿ ಪೂಜೆ ಮಾಡುವುದು ಅವರ ನಿತ್ಯದ ಕೆಲಸ. ಪ್ರತಿದಿನವೂ ಯಾವುದೇ ಅಹವಾಲಿಲ್ಲದೆ, ಅವರಿದನ್ನು ಮಾಡಿಕೊಂಡು ಬಂದಿದ್ದಾರೆ– ನಿಜವಾಗಿಯೂ ಆತ್ಮತೃಪ್ತಿಯ ಮಹತ್ತಾದ ಭಾವನೆಯಿಂದ. ಯಾಕೆಂದರೆ, ಎಲ್ಲವೂ ಪೂರ್ವನಿಶ್ಚಿತವಾಗಿದ್ದು ಪವಿತ್ರ ಗ್ರಂಥಗಳಲ್ಲಿ ಎಲ್ಲ ಸಮಸ್ಯೆಗಳಿಗೂ ಉತ್ತರಗಳಿವೆಯೆಂಬುದು ಅವರ ನಂಬಿಕೆ. ಮಾನವ ಜೀವನದ ಉದ್ದೇಶವೆಂದರೆ ಜನನ ಮರಣಗಳ ಚಕ್ರದಿಂದ ಮುಕ್ತಿ ಗಳಿಸುವುದು ಮತ್ತು ಪ್ರಾಣೇಶಾಚಾರ್ಯರ ಮಟ್ಟಿಗೆ ಮುಕ್ತಿಮಾರ್ಗವೆಂದರೆ ಋಜುಜೀವನ. ಅಗ್ರಹಾರದ ಬ್ರಾಹ್ಮಣರು ಗುರಿತಪ್ಪಿ ದೂರಹೋಗಿದ್ದಾರೆನ್ನುವುದನ್ನು ಆಚಾರ್ಯರು

ಬಲ್ಲಿದರೂ ಸರಿದಾರಿಗೆ ಬಂದರೆ ಅಂಥವರಿಗೂ ಮುಕ್ತಿಯ ಭರವಸೆಯಿದೆ ಎನ್ನುವುದು ಅವರ ವಿಚಾರ. ಆದರೆ ಸುಧಾರಿಸಲು ಅಸಾಧ್ಯವಾದಂಥ ಒಬ್ಬ ಮನುಷ್ಯನಿದ್ದಾನೆ— ನಾರಣಪ್ಪ. ಬೇಕೆಂದೇ ಬ್ರಾಹ್ಮಣ್ಯವನ್ನು ತೊರೆದ ನಾರಣಪ್ಪ ಸಂಪೂರ್ಣ ಸ್ವತಂತ್ರವೂ ಸ್ವಚ್ಛಂದವೂ ಆದ ಜೀವನ ನಡೆಸುತ್ತಾನೆ ಹಾಗೂ ತನ್ನನ್ನು ಮಠದವರು ಜಾತಿಯಿಂದ ಹೊರಗೆ ಹಾಕಿದರೆ ತಾನು ಮುಸ್ಲಿಮ್ ಧರ್ಮಕ್ಕೆ ಮತಾಂತರಗೊಳ್ಳುವುದಾಗಿ ಬೆದರಿಕೆ ಹಾಕುತ್ತಾನೆ. ಅವನು ಕುಡಿಯುತ್ತಾನೆ, ಸಿಗರೇಟು ಸೇದುತ್ತಾನೆ, ಮಾಂಸ ತಿನ್ನುತ್ತಾನೆ, ಸನಾತನ ಬ್ರಾಹ್ಮಣನೊಬ್ಬ ಏನೇನು ಮಾಡಬಾರದೋ ಅದೆಲ್ಲವನ್ನೂ ಮಾಡುತ್ತಾನೆ ಮಾತ್ರವಲ್ಲ, ಅವನು ಚಂದ್ರಿಯೆಂಬ ಹೊಲತಿಯೊಬ್ಬಳನ್ನು ಸೂಳೆಯಾಗಿ ಇಟ್ಟುಕೊಂಡಿದ್ದಾನೆ ಕೂಡ. ಪ್ರಾಣೇಶಾಚಾರ್ಯರದೇ ವಯಸ್ಸಿನವನಾದ ನಾರಣಪ್ಪ ಪ್ರಾಣೇಶಾಚಾರ್ಯರ ನೈತಿಕ ನಿಷ್ಠೆಗೆ ಮಾತ್ರವೇ ಅಲ್ಲ, ಅವರು ಪ್ರತಿನಿಧಿಸುವ ಎಲ್ಲಾ ಮೌಲ್ಯಗಳಿಗೂ ಒಂದು ಸವಾಲೇ ಸರಿ. ಒಂದು ದಿವಸ ನಾರಣಪ್ಪ ಸಾಯುತ್ತಾನೆ ಹಾಗೂ ಚಂದ್ರಿ ಆಚಾರ್ಯರಲ್ಲಿಗೆ ಸಮಸ್ಯೆಯೊಂದನ್ನು ತೆಗೆದುಕೊಂಡು ಬರುತ್ತಾಳೆ. ಸಂತಾನರಹಿತನಾದ ನಾರಣಪ್ಪನ ಶವ ಸಂಸ್ಕಾರವನ್ನು ಯಾರು ಮಾಡಬೇಕು? 'ಅಸ್ಪೃಶ್ಯ ಜಾತಿ'ಯ ಹೆಂಗಸಾಗಿ ಅವಳು ಅದನ್ನು ಮಾಡುವ ಹಾಗಿಲ್ಲ. ಅಗ್ರಹಾರದ ಬ್ರಾಹ್ಮಣರು ಮಾಡುವರೇ? ನಾರಣಪ್ಪ ಬ್ರಾಹ್ಮಣ್ಯದ ವಿರುದ್ಧ ಬಂಡಾಯವೆದ್ದರೂ ಆತ ಜನ್ಮದಿಂದ ಬ್ರಾಹ್ಮಣ ಜಾತಿಗೇ ಸೇರಿದವನಾದ್ದರಿಂದ ಅವನ ಶವವನ್ನು ಬ್ರಾಹ್ಮಣ ಸಂಪ್ರದಾಯಕ್ಕನುಗುಣವಾಗಿ ಸಂಸ್ಕಾರ ಮಾಡಬೇಕು; ಆದರೆ ಆತ ಜಾತಿ ಬಿಟ್ಟವನೂ ಆದ್ದರಿಂದ ಅವನ ಶವಸಂಸ್ಕಾರ ಮಾಡುವುದಕ್ಕೆ ಯಾವ ಬ್ರಾಹ್ಮಣನೂ ಒಪ್ಪಲಾರ— ಇದೇ ಕತೆಯ ಕೇಂದ್ರ ಸಮಸ್ಯೆ. ('ಸಂಸ್ಕಾರ' ಎನ್ನುವ ಪದ ಮೂಲತಃ ಸಂಸ್ಕೃತದ್ದಾಗಿದ್ದು ಕಾದಂಬರಿಯಲ್ಲಿ ಅದಕ್ಕೆ ಸಾಂಸ್ಕೃತಿಕ ಸಂಬಂಧದ ಅರ್ಥಗಳು ಬರುತ್ತವೆ, ಆದರೆ ಶವಸಂಸ್ಕಾರಕ್ಕೆ ಸಂಬಂಧಿಸಿದ ಅರ್ಥ ಪ್ರಧಾನವಾದುದು—ಅಥವಾ ಹೌದೇ?) ನಾರಣಪ್ಪನ ಶವಸಂಸ್ಕಾರ ಹಾಗೂ ಉತ್ತರಕ್ರಿಯೆಗಳನ್ನು ಮಾಡುವವರಿಗೆ ಕೊಡಲೆಂದು ತನ್ನೆಲ್ಲ ಚಿನ್ನಾಭರಣಗಳನ್ನೂ ಚಂದ್ರಿ ಆಚಾರ್ಯರಿಗೆ ಒಪ್ಪಿಸಲು ತಯಾರಿದ್ದಾಳೆ. ಆದರೆ, ಅಗ್ರಹಾರದ ಬ್ರಾಹ್ಮಣರಲ್ಲಿ ಯಾರಾದರೂ ಈ ಹಣವನ್ನು ಸ್ವೀಕರಿಸಿ ನಾರಣಪ್ಪನ ಶವಕ್ಕೆ ಗತಿ ತೋರಿಸಬಹುದೇ/ ಬಾರದೇ ಎಂಬ ಪ್ರಶ್ನೆಗೆ ಈ ಕಾಶಿಯಲ್ಲಿ ವೇದ ವೇದಾಂತಗಳನ್ನು ಕಲಿತು ಬಂದ ಆಚಾರ್ಯರಲ್ಲೂ ಸಿದ್ಧ ಉತ್ತರವಿಲ್ಲ. ಅವರು ತಾಡಪತ್ರಗಳ ಪವಿತ್ರ ಗ್ರಂಥಗಳನ್ನು ತೆಗೆದು ನೋಡುತ್ತಾರೆ, ಆದರೆ ಉಪಯೋಗವಾಗುವುದಿಲ್ಲ. ಹೀಗೆ 'ಜ್ಞಾನಮಾರ್ಗ' ಸೋಲುತ್ತದೆ. ನಂತರ ಹೊಳೆ ದಾಟಿ ಆಚಾರ್ಯರು ತಾವು ಜೀವಮಾನವಿಡೀ ಪೂಜೆ ಸಲ್ಲಿಸುತ್ತಿದ್ದ ಗುಡಿಗೆ ಹೋಗಿ ತಮ್ಮ ಇಷ್ಟದೈವವಾದ ಮಾರುತಿಯಿಂದ ಉತ್ತರಕ್ಕೋಸ್ಕರ ಸಂಕೇತವೊಂದನ್ನು ಕೋರುತ್ತಾರೆ. ಆದರೆ ಈ 'ಭಕ್ತಿಮಾರ್ಗ'ವೂ ಸೋಲುತ್ತದೆ, ಯಾಕೆಂದರೆ ಮಾರುತಿ ಯಾವ ಸಂಕೇತವನ್ನೂ ನೀಡುವುದಿಲ್ಲ. ನೆರೆಯಲ್ಲಿ ಸಂಸ್ಕಾರವಾಗದೆ ಮಲಗಿರುವ ಹೆಣದ ಕಾರಣವಾಗಿ ದಿನವಿಡೀ ಆಚಾರ್ಯರು ಹಸಿದೇ ಇದ್ದಾರೆ. ಇತರ ಬ್ರಾಹ್ಮಣರೂ ಊಟಮಾಡಬಾರದು ಎಂದಿದ್ದರೂ, ಹೆಚ್ಚಿನವರು ತಂತಮ್ಮ ಹಸಿವೆಯನ್ನು ಹಿಂಗಿಸಿಕೊಳ್ಳುವ ಒಳದಾರಿಗಳನ್ನು ಕಂಡುಕೊಂಡಿರುತ್ತಾರೆ. ಆಚಾರ್ಯರು ಬಳಲುತ್ತಿರುವ ಇನ್ನೊಂದು ಹಸಿವೆಯೂ ಉಂಟು— ಲೈಂಗಿಕ ಹಸಿವು: ಕೈಕಾಲು ಬರದವಳೊಬ್ಬಳನ್ನು ಮದುವೆಯಾಗಿರುತ್ತ, ಅವರಿಗೆ ಯಾವುದೇ ಹೆಣ್ಣಿನ ಲೈಂಗಿಕ ಸಂಪರ್ಕ ಮಾಡಿ ಗೊತ್ತಿಲ್ಲ. ಈ ಮದುವೆಯನ್ನಾದರೂ ಅವರು ಸ್ವಇಚ್ಛೆಯಿಂದಲೇ, ತನಗೆ ಹೆಣ್ಣಿನ ಇಂಥ ಸಂಪರ್ಕವೇ ಇರಬಾರದು ಎಂಬುದಕ್ಕೆ ಮಾಡಿಕೊಂಡದ್ದು. ಹೆಂಡತಿಯ ಆರೈಕೆಯೊಂದನ್ನೇ ಚಾಚೂ ತಪ್ಪದೆ ಪ್ರೀತಿಯಿಂದಲೇ, ಆದರೆ ತನ್ನದೇ ಮೋಕ್ಷಮಾರ್ಗವಾಗಿ, ಅವರು ನಡೆಸುತ್ತ ಬಂದಿರುವುದು. ನಾರಣಪ್ಪನ ಶವದ ಕುರಿತಾದ ಸಮಸ್ಯೆಯನ್ನು ತಾವು ಪರಿಹರಿಸಲಾಗದಿದ್ದುದಕ್ಕೆ

ಅವರೀಗ ಹತಾಶರಾಗಿದ್ದಾರೆ. ಈ ಗಳಿಗೆಯಲ್ಲಿ ಅವರು ಮಾರುತಿ ಗುಡಿಯಿಂದ ಹಿಂದಿರುಗಬೇಕು ಎನ್ನುವಷ್ಟರಲ್ಲಿ ಅಲ್ಲೇ ಉತ್ತರಕ್ಕೆ ಕಾಯುತ್ತಿದ್ದ ಚಂದ್ರಿ ಕರುಣೆಯಿಂದ ನೀಡಿದ ಬಾಳೆಯ ಹಣ್ಣುಗಳನ್ನು ಅವರು ತಿನ್ನುತ್ತಾರೆ. ಇದೇ ಅಯೋಮಯ ಸ್ಥಿತಿಯಲ್ಲಿ ಅವರು ಚಂದ್ರಿಯೊಂದಿಗೆ ಕೂಡುತ್ತಾರೆ. ಇದು ಅವರು ಎಂದಿನಿಂದಲೋ ಬಯಸಿದ ಹಾಗೆ; ಚಂದ್ರಿ ಸಹ ತಾನು ತುಂಬಾ ಗೌರವಿಸುತ್ತಿರುವ ಈ ಪವಿತ್ರ ಮನುಷ್ಯನಿಂದ ಒಂದು ಮಗುವನ್ನು ಅಪೇಕ್ಷಿಸಿದವಳೇ. ಆಚಾರ್ಯರ ವೈಯಕ್ತಿಕ ದುರಂತ ಆರಂಭವಾಗುವುದು ಇಲ್ಲಿಂದಲೇ. ಈಗ ನಾರಣಪ್ಪನಂತೆಯೇ ತಾನೂ ಒಬ್ಬ ಪತಿತನೆಂದು ಅವರಿಗೆ ಖಚಿತವಾಗುತ್ತದೆ ಹಾಗೂ ನಾರಣಪ್ಪನ ಹೆಣ್ಣಿನ ಜತೆಯೇ ತಾನು ಕೂಡಿದ್ದು ಎನ್ನುವ ವ್ಯಂಗ್ಯ ದುರ್ಭರವಾಗುತ್ತದೆ. ಹೀಗೆ ಅಸ್ತಿತ್ವದ ಅಘೋರತೆ ಕಾಡಲು ಶುರುವಾಗುತ್ತಲೂ, ಅವರು ಊರು ಬಿಟ್ಟು ಪುಟ್ಟನೆನ್ನುವ ಒಬ್ಬ ದಾರಿಹೋಕನ ಜತೆ ಸಂತೆ ಅಲೆಯಲು ತೊಡಗುತ್ತಾರೆ. (ಈ ಮಧ್ಯೆ ಅವರ ಹೆಂಡತಿಯೂ ತೀರಿಹೋಗಿ ಅವಳ ಶವಸಂಸ್ಕಾರ ನೆರವೇರಿಸಿ ಆಗಿರುತ್ತದೆ.) ಆಚಾರ್ಯರ ಈ ತಿರುಗಾಟ ಕಾದಂಬರಿಯ ಉತ್ತರಾರ್ಧವೆನಿಸುತ್ತದೆ— ಆಚಾರ್ಯರ ದೃಷ್ಟಿಯಿಂದ ಇದೊಂದು ರೀತಿಯ 'ನರಕ ದರ್ಶನ.' ಆದರೆ ಅದು ವಾಸ್ತವ ಜಗತ್ತಿನ ಸಂಪರ್ಕವೂ ಹೌದು. ಸಣ್ಣದೊಂದು ಕಾಲಾವಧಿಯಲ್ಲಿ ಅವರು ಹಲವಾರು ಅನುಭವಗಳಿಗೆ ಗುರಿಯಾಗುತ್ತಾರೆ; ಸದಾ ಸಂದೇಹಗಳು, ಪ್ರಶ್ನೆಗಳು, ದ್ವಂದ್ವಗಳು ಮತ್ತು ಅನಿಶ್ಚಿತತೆಗಳು ಅವರನ್ನು ಕಾಡುತ್ತಿರುತ್ತವೆ. ಕೊನೆಗೂ ಅವರು ಗ್ರಾಮಕ್ಕೆ ಹಿಂತಿರುಗಲು ತೀರ್ಮಾನಿಸುತ್ತಾರೆ. ಆದರೆ ಅಲ್ಲಿ ಏನಾಗಬಹುದು? ಬ್ರಾಹ್ಮಣರಿಗೆ ತನ್ನ ಉಲ್ಲಂಘನಗಳ ಬಗ್ಗೆ ಹೇಳಬೇಕೇ? ತಾನಿನ್ನು ಅವರ ಗುರುಸ್ಥಾನದಲ್ಲಿರಲು ಸಾಧ್ಯವಿಲ್ಲ ಎನ್ನಬೇಕೇ? ಅವರದನ್ನು ಯಾವ ರೀತಿ ಸ್ವೀಕರಿಸಬಹುದು? ತದನಂತರ ತಾನು ಬದುಕಬಹುದಾದ ಜೀವನ ಯಾವ ರೀತಿಯದಾಗಿರುತ್ತದೆ? ಅನೇಕ ಪ್ರಶ್ನೆಗಳು, ಆದರೆ ಉತ್ತರಗಳಿಲ್ಲ. ಸ್ಪಷ್ಟವೆಂದರೆ, ಕಾದಂಬರಿಕಾರರು ಕತೆಗೊಂದು ಉಪಸಂಹಾರವನ್ನು ಒದಗಿಸುವ ಯಾವ ಪ್ರಯತ್ನವನ್ನೂ ಮಾಡುವುದಿಲ್ಲ ಎನ್ನುವುದು. ತಲುಪಿದ ಸತ್ಯವೆಂದರೆ— ಹಾಗೆ ಸತ್ಯವನ್ನು ತಲುಪಿದ್ದು ನಿಜವೆಂದಾದರೆ— ಕೇಂದ್ರೀಯ ಸಮಸ್ಯೆಯ ಕುರಿತಾದ ಅನಿಶ್ಚಿತತೆ. ಈ ಅರ್ಥದಲ್ಲಿ ಸಂಸ್ಕಾರಕ್ಕಿಂತಲೂ ಮುಕ್ತ ಅಂತ್ಯವಿರುವ ಇನ್ನೊಂದು ಕಾದಂಬರಿಯಿರಲಾರದು.

ಬಹುಚರ್ಚಿತವಾದ ಈ ಕಾದಂಬರಿಯ ಪ್ರಾಮುಖ್ಯತೆಯ ಬಗ್ಗೆ ವಿವರಣೆಯ ಅಗತ್ಯವಿಲ್ಲ. ಆದರೂ ಸಂಸ್ಕಾರದ ಅತ್ಯದ್ಭುತವಾದ ಜನಪ್ರಿಯತೆ ತುಸು ಅಚ್ಚರಿಯನ್ನೇ ಹುಟ್ಟಿಸುವಂಥದು. ಯಾಕೆಂದರೆ, ಈಗಾಗಲೇ ಸೂಚಿಸಿದಂತೆ, ಸಂಪ್ರದಾಯವಿರೋಧೀ ಕಾದಂಬರಿಗಳಿಗೆ ಕನ್ನಡದಲ್ಲಿ ಕೊರತೆಯೇನೂ ಇಲ್ಲ, ನಿಜವಾಗಿಯೂ ಕನ್ನಡದ ಮೊದಲ ಸಾಮಾಜಿಕ ಕಾದಂಬರಿ ಇಂದಿರಾಬಾಯಿ ಈ ಕೆಲಸವನ್ನು ಅತ್ಯುತ್ತಮವಾಗಿ ಮಾಡುತ್ತದೆ. ಆದರೆ ಸಂಸ್ಕಾರವನ್ನು ಈ 'ಸಂಪ್ರದಾಯವಿರೋಧಿ' ಪ್ರಕಾರಕ್ಕೆ ಸೇರಿಸುವುದು ತಪ್ಪಾಗಿರಬಹುದು. ಈ ಕಾದಂಬರಿ ಸಂಪ್ರದಾಯದ ಕುರುಡು ಹಿಂಬಾಲಿಕೆಯನ್ನು ಪ್ರಶ್ನಿಸುತ್ತಿದೆಯೆನ್ನುವುದರಲ್ಲಿ ಸಂದೇಹವಿಲ್ಲ, ಆದರೆ ಅದರದೇ ಸಮಕಾಲೀನ ಇತರ ಅನೇಕ ಕಾದಂಬರಿಗಳೂ ಹೀಗೆ ಮಾಡಿವೆ. ಹಾಗೆ ನೋಡುವುದಿದ್ದರೆ, ಎಸ್.ಎಲ್. ಭೈರಪ್ಪನವರ ವಂಶವೃಕ್ಷ ಅನಂತಮೂರ್ತಿಯವರ ಕಾದಂಬರಿ ಪ್ರಕಟವಾಗುವುದಕ್ಕೆ ಒಂದು ವರ್ಷ ಮೊದಲು ಬೆಳಕು ಕಂಡದ್ದು ಸಾದೃಶ್ಯವನ್ನು ಅಪೇಕ್ಷಿಸುತ್ತದೆ. ವಂಶವೃಕ್ಷದಲ್ಲಿ ಸಹ ಒಬ್ಬರು ಸನಾತನಿ ಇದ್ದಾರೆ, ಶ್ರೋತ್ರಿ ಎಂಬವರು; ಅವರು ಕೂಡ ಸನಾತನ ಧರ್ಮಸಂಹಿತೆಗಳಲ್ಲಿ ನಂಬಿಕೆಯಿರಿಸಿದವರು, ಅದರಂತೆ ಜೀವಿಸುವವರು. ಮಗನಿಗೆ ಮದುವೆಯಾದ ಮೇಲೆ, ಧರ್ಮಶಾಸ್ತ್ರಗಳಲ್ಲಿ ಹೇಳಿದಂತೆ, ಶ್ರೋತ್ರಿಯವರು ಸನ್ಯಾಸ

ಸ್ವೀಕರಿಸುವ ಬಯಕೆ ಇರಿಸಿಕೊಂಡಿರುತ್ತಾರೆ. ಆದರೆ ಮಗ ಅಕಾಲಿಕವಾಗಿ ಸಾಯುತ್ತಾನೆ, ತನ್ನ ತರುಣ ವಯಸ್ಸಿನ ಪತ್ನಿ ಮತ್ತು ಚಿಕ್ಕವಯಸ್ಸಿನ ಒಬ್ಬ ಮಗನನ್ನು ತೊರೆದು. ಶ್ರೋತ್ರಿಯವರ ಈ ಸೊಸೆ ಸ್ವಲ್ಪ ಕಾಲ ಕಳೆದು ಬೇರೆ ಮದುವೆಯಾಗುತ್ತಾಳೆ. ಇದೊಂದು ವಿಧವಾವಿವಾಹ, ಕತೆ ನಡೆಯುವ ಕಾಲಕ್ಕೆ (ಸಂಸ್ಕಾರ ಕತೆಯದೂ ವಂಶವೃಕ್ಷ ಕತೆಯದೂ ಕಾಲ ಬಹುಶಃ ಒಂದೇ ಇರಬಹುದು ಎನಿಸುತ್ತದೆ) ಬಹಳ ಕ್ರಾಂತಿಕಾರಿಯಾದ ಸಂಗತಿ. ಅದೂ ಶ್ರೋತ್ರಿಯವರ ಸೊಸೆಯೇ ಹೀಗೆ ಮಾಡಿದಳೆನ್ನುವುದು ಇದಕ್ಕೆ ಇನ್ನಷ್ಟು ಮೊನಚು ನೀಡುತ್ತದೆ. ಇದು ತಮ್ಮ ಮನಸ್ಸಿಗೆ ವಿರುದ್ಧವಾಗಿದ್ದರೂ ಶ್ರೋತ್ರಿಯವರು ಸೊಸೆಯ ದಾರಿಗೆ ಅಡ್ಡಬರುವುದಿಲ್ಲ. ಆದರೆ ಅವರು ತಮ್ಮ ಮೊಮ್ಮಗನನ್ನು ಮನೆಯಲ್ಲಿ ಇರಿಸಿಕೊಳ್ಳಲು ಬಯಸುತ್ತಾರೆ, ಯಾಕೆಂದರೆ ಈತನೊಬ್ಬನೇ ತಮ್ಮ ವಂಶವೃಕ್ಷವನ್ನು ಮುಂದೆ ಬೆಳೆಸುವಂಥವನು. ಹೀಗೆ, ಎಲ್ಲವನ್ನೂ ಕಳೆದುಕೊಂಡರೂ ಶ್ರೋತ್ರಿಯವರ ಒಂದು ಆಸೆ ಮಾತ್ರ ಚಿಗುರಿರುತ್ತದೆ: ವಂಶವೃಕ್ಷದ ಮುಂದುವರಿಕೆ. ಆದರೆ ಈ ಆಸೆ ಕೂಡಾ ಮಣ್ಣುಪಾಲಾಗುವುದು ತಮ್ಮದೇ ಮೂಲ ಅಕ್ರಮಸಂಬಂಧದಿಂದ ಎನ್ನುವ ಆಘಾತಕಾರಿ ಸತ್ಯ ಅವರಿಗೆ ಕೊನೆಯಲ್ಲಿ ಗೊತ್ತಾದಾಗ. ಪರಿಣಾಮವಾಗಿ, ಶ್ರೋತ್ರಿಯವರು ಸಮಾಜದಿಂದ ಹಿಮ್ಮುಖವಾದರೂ ಕಾದಂಬರಿ ಪ್ರಶ್ನೆ ಮಾಡುವಂಥ ವಿಷಯಗಳು ನಿರುತ್ತರವಾಗಿ ಉಳಿಯುತ್ತವೆ.

ವಂಶವೃಕ್ಷದ ಜತೆ ಹೋಲಿಕೆಯಿದ್ದರೂ, ಅನಂತಮೂರ್ತಿಯವರ ಕಾದಂಬರಿಯಲ್ಲೊಂದು ಅಭೂತಪೂರ್ವವಾದ ಅನನ್ಯತೆಯಿರುವಂತೆ ತೋರುತ್ತದೆ. ಇದನ್ನು ಯಾವುದೇ ಒಂದು ಮೂಲಕ್ಕೆ, ಒಂದು ಕಾರಣಕ್ಕೆ ಇಳಿಸುವುದು ಸರಿಯಾಗಲಾರದು; ಯಾಕೆಂದರೆ ಈ ಕಾದಂಬರಿಗೆ ಬಹುರೀತಿಯ ಅರ್ಥಸ್ಫುರಿತಗಳಿವೆ ಹಾಗೂ ಈ ಪ್ರತಿಯೊಂದು ಸ್ಫುರಿತವೂ ಅದರದೇ ರೀತಿಯಲ್ಲಿ ಮುಖ್ಯವಾಗುತ್ತದೆ. ಬೇರೆ ಬೇರೆ ಓದುಗರು ಈ ಕೃತಿಯನ್ನು ಬೇರೆ ಬೇರೆ ರೀತಿಯಲ್ಲಿ ಓದುವುದು ಸಾಧ್ಯ. ತೀರಾ ಹೊಸ ರೀತಿಯ ಇಂಥದೊಂದು 'ಓದಿನ' ಉದಾಹರಣೆಗೆ ವಿ. ಎಸ್. ನೈಪಾಲರು ಈ ಕೃತಿಯ ಬಗ್ಗೆ ಹೇಳಿರುವುದನ್ನು ಗಮನಿಸಬಹುದು. ನೈಪಾಲರು ತಮ್ಮ India: A Wounded Civilization ಎಂಬ ಪುಸ್ತಕದಲ್ಲಿ (ನೈಪಾಲ್, ೧೯೭೭) ಮಹಾತ್ಮಗಾಂಧಿ ತಮ್ಮ ಆತ್ಮಕಥೆ My Experiments with Truthನಲ್ಲಿ ಕಾಣಿಸಿಕೊಳ್ಳುವ ರೀತಿಯನ್ನೂ ಸಂಸ್ಕಾರದಲ್ಲಿ ಚಿತ್ರಿತವಾಗಿರುವ ಪ್ರಾಣೇಶಾಚಾರ್ಯರನ್ನೂ 'ಅರೆ ಬೆಳವಣಿಗೆಯ ವ್ಯಕ್ತಿತ್ವ' ಎಂದು ಕರೆಯುತ್ತಾರೆ. ಹಾಗೂ ಇಂಥದು ಮಾದರಿ ಭಾರತೀಯವೆಂದೂ ಅವರು ಹೇಳುತ್ತಾರೆ. ಮಹಾತ್ಮ ಗಾಂಧಿ ಮತ್ತು ಆಚಾರ್ಯ ಇಬ್ಬರೂ ಎಷ್ಟು ಮಟ್ಟಿಗೆ ಆತ್ಮರತಿಯಲ್ಲಿ ಮುಳುಗಿದವರೆಂದರೆ, ತಾವು ಗಮನಿಸಲ್ಪಡುತ್ತಿದ್ದೇವೆ ಎಂಬ ಭಯದಲ್ಲಿ ಅವರು ಏನನ್ನೂ ಗಮನಿಸಲು ಸಾಧ್ಯವಾಗುವುದಿಲ್ಲ. 'ಅರೆ ಬೆಳವಣಿಗೆಯ ವ್ಯಕ್ತಿತ್ವ'ವೆನ್ನುವುದು ಡಾ. ಸುಧೀರ್ ಕಾಕರ್ ಅವರಿಂದ ನೈಪಾಲರು ತೆಗೆದುಕೊಂಡ ಮನೋವಿಶ್ಲೇಷಣಾತ್ಮಕ ಪದ— ಕಾಕರ್ ಅವರು ನೈಪಾಲರಿಗೆ ಬರೆದ ವೈಯಕ್ತಿಕ ಪತ್ರವೊಂದರಿಂದ. ಕಾಕರ್‌ರ ಪ್ರಕಾರ, ಭಾರತೀಯರ ವಾಸ್ತವಪ್ರಜ್ಞೆ 'ತೌಲನಿಕವಾಗಿ ಎಳಸು, ಯಾಕೆಂದರೆ 'ಮಾಂತ್ರಿಕ ಮತ್ತು ವಸ್ತುಜೀವ ವಿಚಾರ ವಿಧಾನಗಳು ಮೇಲ್ಮೈಗೆ ಸಮೀಪ ಇರುತ್ತವೆ.' 'ನಾವು ಭಾರತೀಯರು ಹೊರಗಿನ ವಾಸ್ತವತೆಯನ್ನು ಹೊರ ಘಟನೆಗಳ ಮತ್ತು ವಸ್ತುಗಳ ನಿರಂತರ ಬದಲಾವಣೆ ಮಧ್ಯೆ ನಮ್ಮ ಸ್ವಂತಿಕೆಯ ಮುಂದರಿಕೆಯನ್ನು ಕಾಪಾಡುವುದಕ್ಕೆ ಉಪಯೋಗಿಸುತ್ತೇವೆ' ಎನ್ನುತ್ತಾರೆ ಕಾಕರ್. ಆದ್ದರಿಂದ ಮನುಷ್ಯರು ಜಗತ್ತನ್ನು ಕ್ರಿಯಾತ್ಮಕವಾಗಿ ಶೋಧಿಸುವುದಿಲ್ಲ, ಬದಲಿಗೆ ಅವರು ಈ ಜಗತ್ತಿನಿಂದ ಗುರುತಿಸಲ್ಪಡುತ್ತಾರೆ' (ನೈಪಾಲ್ ೧೯೭೭: ೧೦೩). ವಾಸ್ತವತೆಯನ್ನು ನೋಡುವ ಈ ಋಣಾತ್ಮಕವಾದ ವಿಧಾನ, ನೈಪಾಲರ ಪ್ರಕಾರ, "ಭಾರತದ ಹಿಂದುಳಿದಿರುವಿಕೆಯನ್ನು ತಿಳಿದುಕೊಳ್ಳುವುದಕ್ಕೆ ಮೂಲಭೂತವಾದ್ದು" (ನೈಪಾಲ್

೧೯೭೭: ೧೦೪). ಹೀಗೆ ನೈಪಾಲರಿಗೆ, ಸಂಸ್ಕಾರ ಕಾದಂಬರಿ ಹಿಂದುಳಿದ ಭಾರತಕ್ಕೆ ಹಿಡಿದ ಒಂದು ಕನ್ನಡಿ, ಆದ್ದರಿಂದ ಒಂದು ಬಹುಮುಖ್ಯ ಕೃತಿ. "ಅರಿತೋ ಅರಿಯದೆಯೋ ಅನಂತಮೂರ್ತಿಯವರು ಒಂದು ಬರ್ಬರ ನಾಗರಿಕತೆಯನ್ನು ಚಿತ್ರಿಸಿದ್ದಾರೆ, ಅಲ್ಲಿ ಪುಸ್ತಕಗಳು, ಕಾನೂನುಗಳು ಮಾಂತ್ರಿಕತೆಯಿಂದ ಬೆಂಬಲಿಸಲ್ಪಡುತ್ತವೆ ಹಾಗೂ ಅತಿ ವಿಸ್ತೃತ ಸಾಮಾಜಿಕ ಸಂಸ್ಥೆ ಧೀಶಕ್ತಿಯಿಂದಾಗಲಿ ಸೃಜನಾತ್ಮಕತೆಯಿಂದಾಗಲಿ ತೀವ್ರಗೊಳ್ಳುವುದಿಲ್ಲ (ಮೋಕ್ಷದ ಆರೋಹಣದಲ್ಲಿನ ಆತ್ಮವೊಂದರ ಹೊರತಾಗಿ)" (ನೈಪಾಲ್ ೧೯೭೭: ೧೦೯).

ಆದರೆ ಈ ವಿವರಣೆ ಸಂಸ್ಕಾರವನ್ನು ಅರ್ಥಮಾಡಿಕೊಳ್ಳುವ ಹಾದಿಯಲ್ಲಿ ಅರ್ಧದಷ್ಟೆ ಸಾಗುತ್ತದೆ (ಈ ಕಾದಂಬರಿಯ ವಿವರಣೆ ನೈಪಾಲರ ಉದ್ದೇಶ ಅಲ್ಲವೂ ಅಲ್ಲ!); ಯಾಕೆಂದರೆ, ಇಡೀ ಕಾದಂಬರಿಯಲ್ಲಿ, ಮುಖ್ಯವಾಗಿ ಆಚಾರ್ಯರ ಪತನದ ನಂತರ, ಕಥಾನಾಯಕನ ತಲೆ ತುಂಬಾ ಅಸ್ತಿತ್ವವಾದಿ ಚಿಂತನೆಗಳೇ ತುಂಬಿವೆ, ಹಾಗೂ ಅವುಗಳಲ್ಲಿ ಕೆಲವಾದರೂ ಫ್ರೆಂಚ್ ತತ್ವಜ್ಞಾನಿ ಜಾನ್-ಪಾಲ್ ಸಾರ್ತ್ರ್‌ನ Existentialism and Humanism (ಅಸ್ತಿತ್ವವಾದ ಮತ್ತು ಮಾನವತಾವಾದ) ಎಂಬ ಕಿರುಹೊತ್ತಗೆಯಿಂದ ಸ್ವೀಕರಿಸಿಕೊಂಡಂಥವು. ಅನಂತಮೂರ್ತಿಯವರು ಸಾರ್ತ್ರ್‌ನ ವಿಚಾರಗಳನ್ನು ಕನ್ನಡದಲ್ಲಿ ಕ್ರೋಢೀಕರಿಸಿ ಪತ್ರಿಕೆಯೊಂದರಲ್ಲಿ ಲೇಖನರೂಪದಲ್ಲಿ ಪ್ರಕಟಿಸಿಯೂ ಇದ್ದರು; ಇದು ಅವರ ಮೊದಲ ಮಹತ್ವದ ಲೇಖನ ಸಂಕಲನವಾದ ಪ್ರಜ್ಞೆ ಮತ್ತು ಪರಿಸರದಲ್ಲಿ (೧೯೭೭) ಅಡಕವಾಗಿದೆ. ಸಂಸ್ಕಾರದ ರಚನೆಯ ಕಾಲದಲ್ಲಿ ಅನಂತಮೂರ್ತಿಯವರ ಮೇಲೆ ಅಸ್ತಿತ್ವವಾದದ ಪ್ರಭಾವವಿದ್ದುದಂತೂ ಸ್ಪಷ್ಟ ಕತೆಯ ಕಾಲ್ಪನಿಕ ಕಾಲದಲ್ಲಿ (ಎಂದರೆ, ಭಾರತದ ಸ್ವಾತಂತ್ರ್ಯಪೂರ್ವದ ಕಾಲದಲ್ಲಿ) ಚಾರಿತ್ರಿಕವಾಗಿ ಸಾರ್ತ್ರ್‌ನ ಅಸ್ತಿತ್ವವಾದದ ಪ್ರಭಾವ ಪ್ರಾಣೇಶಾಚಾರ್ಯರ ಮೇಲೆ ಆಗುವುದು ಸಾಧ್ಯವಿಲ್ಲ, ಮಾತ್ರವಲ್ಲ, ಪ್ರಾಣೇಶಾಚಾರ್ಯರು ಪಾಶ್ಚಾತ್ಯ ಸಾಹಿತ್ಯವನ್ನು ಓದಿಕೊಂಡಂಥ ಪಾತ್ರವೂ ಅಲ್ಲ. ಆದ್ದರಿಂದ ಈ ಕಥಾಪಾತ್ರ ಸಾರ್ತ್ರ್ ತರದ ಅಸ್ತಿತ್ವವಾದಿ ವಿಚಾರಗಳನ್ನು ಮಾಡುವುದೊಂದು ಸಾಹಿತ್ಯಿಕ ತಂತ್ರವೆಂದೇ ತಿಳಿಯಬೇಕು. ಆದರೆ ಸನಾತನ ಬ್ರಾಹ್ಮಣ ಧರ್ಮದಲ್ಲಿನ ದ್ವಂದ್ವಗಳಲ್ಲಿ ಇದಕ್ಕೆ ಸಮಾನಾಂತರಗಳನ್ನು ಕಾಣುವುದರ ಮೂಲಕ ಅನಂತಮೂರ್ತಿಯವರು ಇದನ್ನು ಸ್ವದೇಶೀಕರಿಸುತ್ತಾರೆ– ಅರ್ಥಾತ್, ಪ್ರಚಲಿತ ವಿದೇಶೀ ವಿಚಾರಗಳಿಗೆ ಅವರು ಎಂದಿನಿಂದಲೂ ಇದ್ದ ಸ್ವದೇಶೀ ಸಾದೃಶ್ಯಗಳನ್ನು ಒಡ್ಡುತ್ತಾರೆ. ಒಳ್ಳೇ ಮನುಷ್ಯಜೀವಿಯ ಜೀವನೋದ್ದೇಶವೆಂದರೆ ಈ ದ್ವಂದ್ವಗಳಿಂದ ಬಿಡುಗಡೆ ಪಡೆಯುವುದು– ಇದುವೇ ಮೋಕ್ಷ ಎನ್ನುತ್ತದೆ ಸನಾತನ ಧರ್ಮ. ಆದರೆ ಇಹದಲ್ಲಿ ಜೀವಿಸುತ್ತಿರುವ ಮನುಷ್ಯನಿಗೆ ಜೀವನಕ್ಕೆ ಬೇಕಾದ ಹಲವಾರು ಅಗತ್ಯಗಳಿಂದ ಬಿಡುಗಡೆ ಪಡೆಯುವುದು ಸುಲಭವಲ್ಲ. ಸನಾತನ ಧರ್ಮವು ಇದನ್ನೂ ಗುರುತಿಸುತ್ತದೆ. ಸ್ವತಃ ಪ್ರಾಣೇಶಾಚಾರ್ಯರಿಗೆ ಇದರ ಅರಿವು ಇದೆ: ತಾನು ಕೈಕಾಲು ಬರದ ರೋಗಿಯೊಬ್ಬಳನ್ನು ಬೇಕೆಂದೇ ಮದುವೆಯಾದುದು ತನ್ನ ಮೋಕ್ಷದ ಸ್ವಾರ್ಥದಿಂದ ಅಲ್ಲವೇ ಎಂದು ಅವರು ತಮ್ಮನ್ನು ತಾವೇ ಕೇಳಿಕೊಳ್ಳುತ್ತಾರೆ. ಅದೇ ರೀತಿ, ನಾರಣಪ್ಪ ಆಪಾದಿಸುವಂತೆ, ಅಗ್ರಹಾರದ ಬ್ರಾಹ್ಮಣ ಯುವಕರನ್ನು ಹಾಳುಮಾಡಿದುದು ತಮ್ಮ ಪುರಾಣಪ್ರವಚನದಲ್ಲಿ ಬರುವ ಕೆಲವು ಶೃಂಗಾರ ವರ್ಣನೆಗಳೇ ಆಗಿರಬಹುದು ಎಂಬ ಅನುಮಾನ ಕೂಡ ಅವರನ್ನು ಬಾಧಿಸುವುದಿದೆ. ಹೀಗೆ ಆಚಾರ್ಯರ ಆಂತರಿಕ ಸಂಘರ್ಷಗಳು ಅಸ್ತಿತ್ವವಾದ ಮತ್ತು ಪೂರ್ವನಿರ್ಧರಿತ ಕರ್ಮತತ್ವ ಎಂಬ ಸಮಾನಾಂತರ ಹಳಿಗಳ ಮೇಲಿಂದ ಸಾಗುತ್ತವೆ. ಆದರೆ ಈ ವಿದೇಶೀ ಹಾಗೂ ಸ್ವದೇಶೀ ವಿಚಾರಗಳು ಎಷ್ಟು ಸಮಾನಾಂತರವೋ ಅಷ್ಟೇ ವಿರುದ್ಧವೂ ಹೌದು. ಅಸ್ತಿತ್ವವಾದ ಮನುಷ್ಯನ ಮೂಲಭೂತ ಸ್ವಾತಂತ್ರ್ಯ ಹಾಗೂ ಅದರಿಂದಾಗಿ ಬರುವ ಆಯ್ಕೆಯ

ಹೊಣೆಯನ್ನು ಒತ್ತಿಹೇಳಿದರೆ, ಕರ್ಮತತ್ತ್ವವು ಜೀವನವನ್ನು ಕೆಲವೊಂದು ಪರಂಪರಾಗತ ಮೌಲ್ಯಗಳ ಆಧಾರದ ಮೇಲಿಂದ ಸ್ವೀಕರಿಸುವುದಕ್ಕೆ ಕಲಿಸುತ್ತದೆ. ಅಸ್ತಿತ್ವವಾದವನ್ನು ತೆಗೆದುಕೊಂಡರೆ, ಆಚಾರ್ಯರ ಸದ್ಯದ ಪರಿಸ್ಥಿತಿಯನ್ನೂ ಮುಂದಿನ ಕಾರ್ಯಸಾಧ್ಯತೆಗಳನ್ನೂ ಅದು ಚೆನ್ನಾಗಿಯೇ ವಿವರಿಸುವಂತೆ ತೋರುತ್ತದೆ. ತನ್ನ ಅಸ್ತಿತ್ವವಾದದ ಹೊತ್ತಗೆಯಲ್ಲಿ ಸಾರ್ತ್ರ ಕ್ರಿಯಾತ್ಮಕತೆಗೆ ಮನುಷ್ಯ ಸ್ವಾತಂತ್ರ್ಯವನ್ನು ಪ್ರಮುಖ ಅಗತ್ಯವಾಗಿ ಗುರುತಿಸುತ್ತಾನೆ ಹಾಗೂ ಅಸ್ತಿತ್ವವಾದ ಮೂಲತಃ ನಿರಾಶಾವಾದಿ ಎನ್ನುವುದನ್ನು ಅಲ್ಲಗಳೆಯುತ್ತಾನೆ. ಆಯ್ಕೆಯ ಸ್ವಾತಂತ್ರ್ಯವನ್ನು ಚಲಾಯಿಸುವ ಮೂಲಕ ಮನುಷ್ಯ ಬರಿಯ 'ಇರುವಿಕೆ'ಯಿಂದ 'ಆಗುವಿಕೆ'ಯ ಕಡೆಗೆ ಚಲಿಸುತ್ತಾನೆ. "ಮನುಷ್ಯನಿಗೆ ಬೇಕಾದ್ದೆಂದರೆ, ತನ್ನನ್ನು ತಾನು ಪುನಃ ಕಂಡುಕೊಳ್ಳುವುದು ಮತ್ತು ತನ್ನಿಂದ ತನ್ನನ್ನು ಯಾವುದೂ ರಕ್ಷಿಸಲಾರದು, ದೇವರು ಇದ್ದಾನೆ ಎಂಬ ನಂಬಲರ್ಹವಾದ ಸಾಕ್ಷಿ ಕೂಡ, ಎಂಬುದನ್ನು ತಿಳಿದುಕೊಳ್ಳುವುದು. ಈ ಅರ್ಥದಲ್ಲಿ ಅಸ್ತಿತ್ವವಾದವು ಆಶಾವಾದಿಯಾದುದು, ಅದೊಂದು ಕಾರ್ಯ ಸಿದ್ಧಾಂತ, ಹಾಗೂ ಆತ್ಮವಂಚನೆಯಿಂದ ಮಾತ್ರವೇ ತಮ್ಮ ಹತಾಶೆಯನ್ನು ನಮ್ಮದರೊಂದಿಗೆ ತಪ್ಪಾಗಿ ಭಾವಿಸಿ, ಕ್ರಿಶ್ಚಿಯನ್ನರು ನಮ್ಮನ್ನು ನಿರಾಶಾವಾದಿಗಳೆಂದು ಕರೆಯಬಹುದಷ್ಟೆ' (ಸಾರ್ತ್ರ ೧೯೪೮: ೫೬). ಅಸ್ತಿತ್ವವಾದವು ವ್ಯಕ್ತಿವಿಶಿಷ್ಟವಾದ ಎನ್ನುವುದನ್ನೂ ಸಾರ್ತ್ರ ಅಲ್ಲಗಳೆಯುತ್ತಾನೆ. "ಮನುಷ್ಯನು ತನ್ನನ್ನು ತಾನು ಆಯ್ಕೆಮಾಡಿಕೊಳ್ಳುತ್ತಾನೆ ಎಂದಾಗ, ನಾವು ಪ್ರತಿಯೊಬ್ಬನೂ ತನ್ನನ್ನು ತಾನು ಆಯ್ಕೆಮಾಡಿಕೊಳ್ಳಬೇಕು ಎಂಬ ಅರ್ಥವಲ್ಲ; ಆದರೆ ತನಗೆ ತಾನೇ ಆಯ್ಕೆ ಮಾಡಿಕೊಂಡಾಗ ಆತ ಎಲ್ಲಾ ಮನುಷ್ಯರಿಗೂ ಆಯ್ಕೆ ಮಾಡುತ್ತಾನೆ.... ಇದನ್ನೋ ಅದನ್ನೋ ಆಯುವುದೆಂದರೆ, ಆಯ್ದುದರ ಮೌಲ್ಯದಲ್ಲಿ ನಂಬಿಕೆಯನ್ನು ಪುನರ್ ಸ್ಥಾಪಿಸುವುದು; ಯಾಕೆಂದರೆ, ಕೆಟ್ಟದ್ದನ್ನು ಆಯುವುದು ನಮಗೆ ಅಸಾಧ್ಯ. ಒಳ್ಳೆಯದನ್ನೇ ನಾವು ಯಾವಾಗಲೂ ಆಯುವುದು; ಹಾಗೂ ಎಲ್ಲರಿಗೂ ಒಳ್ಳೆಯದಾಗದೆ ಯಾವುದೂ ನಮಗೆ ಒಳ್ಳೆಯದಾಗುವುದು ಸಾಧ್ಯವಿಲ್ಲ" (ಸಾರ್ತ್ರ ೧೯೪೮: ೨೯). ಸಾರ್ತ್ರವಿನ ಈ ಹೇಳಿಕೆಗಳಿಗಿಂತ ಇನ್ನು ಯಾವುದೂ ಆಚಾರ್ಯರ ಸ್ಥಿತಿಯನ್ನು ವಿವರಿಸಲಾರವು. ಅವರು ಚಂದ್ರಿಯ ಜತೆ ಸೇರಿದ್ದು ಕೂಡ ಪೂರ್ತಿ ಪ್ರಜ್ಞಾಪೂರ್ವಕವಾದ ನಿರ್ಣಯವಾಗಿದ್ದಿರಲಿಲ್ಲ, ಬದಲಿಗೆ ಒಂದು ಕ್ಷಣದ ಉದ್ವೇಗಕ್ಕೆ ಆದ ಶರಣಾಗತಿ ಎನ್ನುವುದನ್ನು ನೆನಪಿಟ್ಟುಕೊಳ್ಳಬೇಕು. ಆಚಾರ್ಯರೀಗ ಮೂಲದಿಂದಲೇ ಎಲ್ಲವನ್ನೂ ಆರಂಭಿಸಬೇಕಾಗಿದೆ, ಹಾಗೂ ಚಂದ್ರಿಯ ಜತೆಗಿನ ಕ್ಷಣಕೂಟ ಅವರ ಈ ಹಸುಳೆಯ ಸ್ಥಿತಿಯನ್ನು ಸಾಂಕೇತಿಸಬಹುದು.

"ಗುರುತಿಗಾಗಿ ಶೋಧ" ಎಂಬ ವಿಚಾರಪ್ರದವಾದೊಂದು ಲೇಖನದಲ್ಲಿ ಅನಂತಮೂರ್ತಿಯವರು ಭಾರತದ ವಾಸ್ತವತೆಯನ್ನು ಪರೀಕ್ಷಿಸುವುದಕ್ಕೆ ಪಾಶ್ಚಾತ್ಯ ಚಿಂತನ ಚೌಕಟ್ಟನ್ನು ಕಡಪಡೆಯುವ ಆಧುನಿಕ ಹವ್ಯಾಸವನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ. ಜತೆಗೇ ಭಾರತೀಯ ಪರಂಪರೆಯ ಬಗೆಗಿನ ಪಾಶ್ಚಾತ್ಯ ಪ್ರಾಚ್ಯವೀಕ್ಷಕರ (ಓರಿಯೆಂಟಲಿಸ್ಟರ) ಔದಾರ್ಯಮನೋಭಾವವನ್ನೂ ಅವರು ತಮ್ಮ ವಿಮರ್ಶೆಯಿಂದ ಹೊರತುಪಡಿಸುವುದಿಲ್ಲ. "ಹಿಂತಿರುಗಿ ನೋಡುವ ಕ್ಲೀಷೆಯುತವಾದ ಓರಿಯೆಂಟಲಿಸಂ, ಹಾಗೂ ಅನುಕರಣಶೀಲ ಪಾಶ್ಚಾತ್ಯತೆ ಎರಡೂ ಒಂದೇ." "ಉಪನಿಷತ್ತುಗಳ ಮಹರ್ಷಿ ಯಾಜ್ಞವಲ್ಕ್ಯ ಓರಿಯೆಂಟಲಿಸ್ಟ್ ಆಗಿರಲಿಲ್ಲ; ಆತನಿಗೆ ತನ್ನ ಭಾರತೀಯ ಅಸ್ಮಿತೆಯ ಕುರಿತು ಆತಂಕವಿರಲಿಲ್ಲ. ಅನುಕರಣೆ ನಮ್ಮದೇ ಗತದ್ದಾಗಿರಲಿ, ಯೂರೋಪಿನದ್ದಾಗಿರಲಿ, ನಿಷ್ಕ್ರಿಯತೆಗೆ ಕಾರಣವಾಗುತ್ತದೆ; ಮತ್ತು ಸದ್ಯೋವರ್ತಮಾನದ ಕುರಿತಾದ ನಮ್ಮ ದೃಷ್ಟಿಯನ್ನು ಮರೆಮಾಚುತ್ತದೆ' (ಅನಂತಮೂರ್ತಿ ೧೯೭೯: ೧೧೫). ವಾಸ್ತವದಲ್ಲಿ ನೈಪಾಲರು ಕೂಡ ಭಾರತೀಯ ಪರಿಸ್ಥಿತಿಯಲ್ಲಿ ಕಾಣಿಸುವುದಿಲ್ಲ ಎಂದದ್ದು ಈ ಸದ್ಯೋವರ್ತಮಾನದ ಕುರಿತಾದ ಗಮನವನ್ನೇ.


ಸಂಸ್ಕಾರಕ್ಕೆ ಇನ್ನೊಂದು ಮುಖ್ಯವಾದ ಮಗ್ಗುಲಿದೆ. ಅದು ತನ್ನ ಅನ್ಯೋಕ್ತಿಯಿಂದಾಗಿ (allegory) ಆ ಕಾಲದ ಇನ್ನಿತರ ಹಲವು ಕೃತಿಗಳಿಂದ ಬೇರೆ ನಿಂತುಬಿಡುತ್ತದೆ. ಕತೆ ಆಧುನಿಕ ಕಾಲದಲ್ಲಿ ನಡೆಯುವುದಲ್ಲ, ಗತದಲ್ಲಿ ನಡೆಯುವಂಥದು. ಆದ್ದರಿಂದ, ಕತೆಯಾಗಿ ಸದ್ಯತೆಗಿರುವ ಅದರ ಜರೂರುತನ ಕಮ್ಮಿಯಾಗುತ್ತದೆ. ಕತೆಯೊಳಗಡೆಯೇ, ಕೇಂದ್ರ ಸಮಸ್ಯೆಯಾದ ನಾರಣಪ್ಪನ ಶವ ಸಂಸ್ಕಾರ ಒಂದು ಅಸಂಗತ ರೀತಿಯಲ್ಲಿ ಪರಿಹಾರಗೊಳ್ಳುತ್ತದೆ– ಪ್ರಾಣೇಶಾಚಾರ್ಯರು ಊರು ಬಿಟ್ಟು ತಿರುಗಾಡುತ್ತಿರುವಾಗಲೇ ಚಂದ್ರಿ ಒಬ್ಬ ಮುಸ್ಲಿಮನ ಸಹಾಯದಿಂದ ನಾರಣಪ್ಪನ ಶವದಹನದ ಏರ್ಪಾಟು ಮಾಡುತ್ತಾಳೆ. ಹೀಗೆ ಕೇಂದ್ರ ಸಮಸ್ಯೆಯ ಗುರುತ್ವ ಕಳೆದುಹೋಗುತ್ತದೆ. ಆದರೂ ಕತೆಯ ಅನ್ಯೋಕ್ತಿತನ ಕಳೆದುಹೋಗುವುದಿಲ್ಲ. ಆಧುನಿಕ ಸಾಹಿತ್ಯದಲ್ಲಿ ಅನ್ಯೋಕ್ತಿತನವೆನ್ನುವುದು, ಜಾರ್ಜ್ ಲೂಕಾಚ್‌ನ ಅಭಿಪ್ರಾಯದಲ್ಲಿ, ಮನುಷ್ಯನ ಸದ್ಯೋವರ್ತಮಾನದ ಜಗತ್ತಿನಲ್ಲಿ ಅಡಕವಾಗಿರಬಹುದಾದ ಯಾವುದೇ ಅರ್ಥವನ್ನೂ ಗೌಣಗೊಳಿಸುವ ಮೂಲಕ, ಅತೀತಾರ್ಥಗಳನ್ನು ಮುಂದೊತ್ತುವಂಥದು. ಹೀಗೆ ಕಾಫ್ಕಾ, ಉದಾಹರಣೆಗೆ, "ಅನ್ಯೋಕ್ತಿ ವಿಧಾನವನ್ನು ಉಪಯೋಗಿಸುವುದರ ಮೂಲಕ, ದಿನನಿತ್ಯದ ಬದುಕಿನಿಂದ ಎಲ್ಲ ಅರ್ಥವನ್ನೂ ಖಾಲಿಗೊಳಿಸಿದ್ದಾನೆ; ತನ್ನ ಅತೀತದ ಶೂನ್ಯತೆಯಿಂದಾಗಿ ಅವನು ವಿವರಗಳನ್ನು ನಾಶವಾಗಲು ಬಿಟ್ಟಿದ್ದಾನೆ" (ಲೂಕಾಚ್ ೧೯೬೬: ೪೫). ನಿಜ, ಸಂಸ್ಕಾರ ಕಾಫ್ಕಾನ ಕಾದಂಬರಿಗಳಿಗಿಂತ ತುಂಬಾ ಭಿನ್ನವಾದುದು, ಆದರೂ ಒಂದು ಸಾದೃಶ್ಯವಿದೆ. ಸಂಸ್ಕಾರವು ಅನ್ಯೋಕ್ತಿಯ ಒಂದು ಅನ್ಯೋಕ್ತಿಯಾಗಿ ಅನಿಸುತ್ತದೆ– ಯಾಕೆಂದರೆ ಅದು ದೈನಂದಿನ ಬದುಕಿನ ವಿವರಗಳಿಂದ ಸುತ್ತುವರಿದ ಜಗತ್ತಿಗೆ ಅರ್ಥವನ್ನು ನಿರಾಕರಿಸಿದ ಮನುಷ್ಯನೊಬ್ಬನನ್ನೇ ಅನ್ಯೋಕ್ತಿಗೆ ಗುರಿಮಾಡಿದೆ! ಆಚಾರ್ಯರು ಸಮಕಾಲೀನ ಜಗತ್ತಿನಲ್ಲಿ ಬದುಕಿರುವುದಿಲ್ಲ, ಬದಲು ಸತ್ತು ಹೋದಂಥ ಗತದಲ್ಲಿ ಬದುಕುತ್ತಿದ್ದಾರೆ, ಬಹುಶಃ ಈ ಗತ ಕೂಡ ಎಂದೂ ವಾಸ್ತವವಾಗಿರದ ಒಂದು ಪುರಾಣ ಕಲ್ಪನೆಯೇ ಆಗಿರಲೂಬಹುದು. ಅತೀತನಾದ ದೇವರು (ಕಾಫ್ಕಾನ 'ಅತೀತ ಶೂನ್ಯತೆಗೆ ಸಮನಾಗಿರುವಂಥದು) ಗತಿಸಿದ್ದಾನೆ ಎನ್ನುವುದೂ ಪ್ರಾಯಶಃ ಅವರಿಗೆ ಗೊತ್ತಿಲ್ಲ. ಇದು ಅರಿವಿಗೆ ಬಂದ ಮೇಲೆಯೇ ಅವರು ತಮ್ಮ ಮಂಪರಿನಿಂದ ಹೊರಬರುವುದು ಮತ್ತು ತಮ್ಮ ಸುತ್ತಲ ಜಗತ್ತನ್ನು ಕಾಣಲು ಸಾಧ್ಯವಾಗುವುದು. "ಮನುಷ್ಯರು ಗಮನಿಸಲು ಸಾಧ್ಯವಾಗದಾಗ ಅವರಲ್ಲಿ ವಿಚಾರಗಳಿರುವುದಿಲ್ಲ; ಅವರಿಗೆ ಭ್ರಾಂತುಗಳಿರುತ್ತವೆ. ಮನುಷ್ಯರು ಸ್ಪಂದನಜೀವನಗಳನ್ನು ಬದುಕುತ್ತಿರುವಾಗ, ಸಾಮೂಹಿಕ ವಿಸ್ಮೃತಿಯಂಥದೊಂದು ಗತಕಾಲವನ್ನು ಮಬ್ಬುಗೊಳಿಸುತ್ತದೆ" (ನೈಪಾಲ್ ೧೯೭೭: ೧೧೨). ಗತದ ಈ ಮಬ್ಬುಗಟ್ಟುವಿಕೆಯೂ, ಫ್ರಾಂಕ್ ಕರ್ಮೋಡ್ ಅವರ ಒಂದು ನುಡಿಗಟ್ಟನ್ನು ಉಪಯೋಗಿಸುವುದಾದರೆ, ಒಂದು ರೀತಿಯ ಪೌರಾಣೀಕರಣವೇ (ಮಿತಿಫಿಕೇಶನ್), ಹಾಗೂ ಅದು ಸೃಜನಶೀಲತೆಯನ್ನು ತಡೆಯುತ್ತದೆ. "ಆಚರಣೆಯ ರೇಖಾಚಿತ್ರಗಳೊಳಗೆ ಪುರಾಣವು ಪ್ರವರ್ತಿಸುತ್ತದೆ, ಹಾಗೂ ಈ ರೇಖಾಚಿತ್ರಗಳು ವಿಷಯಗಳ ಸಂಪೂರ್ಣವೂ ಸಮರ್ಪಕವೂ ಆದ ವಿವರಣೆಗಳನ್ನು ಅವು ಇರುವಂತೆಯೇ ಹಾಗೂ ಇದ್ದಂತೆಯೇ ಪೂರ್ವಭಾವಿಯಾಗಿ ಸ್ವೀಕರಿಸಿರುತ್ತವೆ; ಪೌರಾಣೀಕರಣ ಮೂಲಭೂತವಾಗಿಯೂ ಬದಲಾಗದ ಭಂಗಿಗಳ ಒಂದು ಸರಣಿಯಾಗುತ್ತದೆ. ಕಥನ ಕೃತಿಗಳಾದರೆ ವಿಷಯಗಳನ್ನು ಕಂಡುಹುಡುಕುವುದರಲ್ಲಿವೆ, ಹಾಗೂ ಅವು ಅರ್ಥ ಮಾಡುವಿಕೆಯ ಅಗತ್ಯಗಳು ಬದಲಾದ ಹಾಗೆಯೆ ಬದಲಾಗುತ್ತ ಇರುತ್ತವೆ" (ಕರ್ಮೋಡ್ ೧೯೬೭: ೩೯). ಈ ಹಿನ್ನೆಲೆಯಲ್ಲಿ ಸಂಸ್ಕಾರವು ಈ ಜಡಗಟ್ಟಿದ ಪುರಾಣವನ್ನು ಕಥನವಾಗಿ ಕರಗಿಸುವುದಕ್ಕೆ, ಬದುಕಿಗೂ ಸಾಹಿತ್ಯಕ್ಕೂ ಅತ್ಯಗತ್ಯವಾದಂಥ ವರ್ತಮಾನದ ವಾಸ್ತವತೆಗಳನ್ನು ಗಮನಿಸುವ ಶಕ್ತಿಗಳನ್ನು ಚಲನಶೀಲವಾಗಿ ಮಾಡುವುದಕ್ಕೆ, ಅನಂತಮೂರ್ತಿಯವರು ನಡೆಸಿದ ಒಂದು ಮಹತ್ವದ ಪ್ರಯತ್ನ.

["The Context of 'Samskara'" ಎಂಬ ಮೂಲ ಇಂಗ್ಲಿಷ್ ಲೇಖನದ ಕನ್ನಡ ರೂಪ: U.R. Anantha Murthy's Samskara: A Critical Reader. Edited by Kailash C. Baral et al. Pencraft International, Delhi. 2005. Pages 72-81.]

ಗ್ರಂಥ ಋಣ

- ★ ಅನಂತಮೂರ್ತಿ, ಯು. ಆರ್. ೧೯೭೧. ಪ್ರಜ್ಞೆ ಮತ್ತು ಪರಿಸರ. ಸಾಗರ: ಅಕ್ಷರ ಪ್ರಕಾಶನ.
- ★ Anantha Murthy, U. R. 1979. Search for an Identity. In Identity and Adulthood. Edited by Sudhir Kakar. Delhi: OUP. 105-07.
- ★ ಆಮೂರ, ಜಿ. ಎಸ್. ೧೯೮೩. ಕನ್ನಡ ಕಾದಂಬರಿಯ ಬೆಳವಣಿಗೆ. ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯ.
- ★ ಗೋವಿಂದ ರಾಜ, ಗಿರಡ್ಡಿ. ೧೯೭೬. ಕಾದಂಬರಿ: ವಸ್ತು ಮತ್ತು ತಂತ್ರ. ಬೆಂಗಳೂರು: ಸ್ನೇಹ ಪ್ರಕಾಶನ.
- ★ Kermde, Frank. 1967. The Sense of an Ending: Studies in the Theory of Fiction. London: OUP.
- ★ Lucács, George. 1963. The Meaning of Contemporary Realism. Translated by John and Necke Mander. London: Merlin Press.
- ★ Naipaul, V. S. 1977. India: A Wounded Civilization. New Delhi: Vikas Publishing House.
- ★ Sartre, Jean-Paul. 1948. Existentialism and Humanism. Translated by Philip Mairet.London: Methuen & Co.

೫೦೧, ೫ನೇ ಮಹಡಿ, ಸಿದ್ಧಾರ್ಥ ಅರಿಯಾನ ಅಪಾರ್ಟ್‌ಮೆಂಟ್ಸ್
೧೨-೧೨-೯ ರವೀಂದ್ರ ನಗರ, ಸಿಕಂದರಾಬಾದ್ - ೬೧



ಅಂಗೈನಲ್ಲೊಂದಿಷ್ಟು ಆಕಾಶ

ಬೆರಳ ಸಂದಿಯಲಿ ತೂರಿ
ಬಂದ ಬೆಳಕಿಗೆ ಸೂರ್ಯಗರ್ವ
ತೆರೆದಷ್ಟೇ ರೆಪ್ಪೆ ಬಾಗಿಲೊಳು
ಇರುಳ ನಕ್ಷತ್ರಗಳಿಗೆಲ್ಲ ಜಾಗ

ಗೊತ್ತಿರಲಿಲ್ಲ ಹೀಗೆಲ್ಲಾ
ಬೆಳಕು ತೂರಿ ಬರುತ್ತದೆಂದು
ಬ್ರಹ್ಮಾಂಡದ ಸಂತಸವೆಲ್ಲಾ
ಅಂಗೈಲಿ ಬೆಚ್ಚಗೆ ಕೂತಿರುವುದೆಂದು

ಆಗಾಗ್ಗೆ ಸುಳಿವ ಮಿಂಚು
ತುಟಿಯ ಮಾತಿನಲಿ ಅರಳಿದೆ
ಗಂಟಲಲಿ ಕಟ್ಟಿಕೊಂಡ ದನಿ
ಆಕಾಶದ ಬಾಹುಗಳೆಡೆ ಚಾಚಿದೆ!

ಕಣ್ಣರೆಪ್ಪೆ ಬೆರಳ ಸಂದಿ
ಧನ್ಯತೆಯಲಿ ಮೀಯುವ ಸರದಿ
ಮೊನ್ನೆಯವರೆಗೂ ಕಾಡಿದ್ದ ಕೊರಗು
ಇಂದಿನ ನಗೆದಿನದಲಿ 'ನೆನಪು'

ಆಕಾಶ ಅಂಗೈಗೆ ಬರುವುದೆಂದು
ಓದಿ, ಕೇಳಿ, ನಕ್ಕವರೇ ಬಹಳ
ಮುಖಕೆ ಅಂಗೈ; ಆತ್ಮಕೆ ಆಕಾಶ
ಎಂದು ಸುಮ್ಮನಾಗುವುದೇ ನಿರಾಳ

◆ ವಾಸುದೇವ ನಾಡಿಗ್

ಕನ್ನಡ ಶಿಕ್ಷಕ, ಜವಾಹರ ನವೋದಯ ವಿದ್ಯಾಲಯ
ಏನಿಗದಲೆ, ಚಿಂತಾಮಣಿ - ಕೋಲಾರ-೫೬೩ ೧೨೫

ಎರಡು ಗಜ಼ಲ್‌ಗಳು

೧

ಕುಸುಮಕೋಮಲ ಕರಗಳೊಡತಿಯೇ ಕನಸುಗಳ ಸಭೆ ಕರೆಯಿಸು
ಪಾಮರನೆಡೆ ಕರುಣೆ ಹರಿಸಿ ಮನದ ದುಗುಡ ನಿವಾರಿಸು ॥ ೧ ॥

ಮಂದ ಮಾರುತದಲೆಗೆ ತೂಗುವ ಮುಂಗುರುಳಗಳೊಡತಿಯೇ
ಗಾಳೀಲಿ ಬಂತು ಕುರುಳಿಗೆ ಕಚಗುಳಿಯಿಡುವ ಪ್ರೇಮದುಸಿರನು ಗುರುತಿಸು ॥ ೨ ॥

ಸುಣ್ಣ ಬಿಳಿ ಬಣ್ಣಕಂಗಳ ಮೀನಂತೆ ಕುಣಿಸುವ ಮೂಲೋಕ ಮಾಯಗಾತಿಯೇ
ಕಾಂಬ ಕನಸುಗಳಲೆಲ್ಲ ಮೆರೆದಿಹ ಒಲವ ಭಕುತನ ಮನ್ನಿಸು ॥ ೩ ॥

ಮಧುರಭಾವದ ಕನಸ ಕಾಣದಿರುವುದೂ ಒಂದು ಹರೆಯವೇ? ಬಾ ಬಳಿಗೆ
ಹೇಳಲೇನಿದೆ; ಮರೆತೆಲ್ಲ ಮುನಿಸನು ಪ್ರೇಮಪಲ್ಲವ ಚಿಗುರಿಸು ॥ ೪ ॥

ಮನವ ಮೀರಿದ ಪಾಪವೇನಿದೆ? ಜಗದೆಲ್ಲ ಎಲ್ಲೆಗದೇ ಎಲ್ಲೆಯು
ಕಲ್ಲ ವೀಣೆಯ ನುಡಿಸಬಲ್ಲ 'ಸಾಲಿ'ಯ ಒಲ್ಲೆನದೆ ಹೃದಯದೊಳ ಸೇರಿಸು ॥ ೫ ॥

೨

ಒಳಿತು ಕೆಡಕುಗಳಿಗೆಲ್ಲ ನೀನೇ ಕಾರಣವೆಂಬುದಕೆ ಸಾಕ್ಷಿ ಬೇಕೇ ದೇವರೇ
ಅವಳ ದ್ರೋಹಕೆ ಪ್ರತಿ ಹುಟ್ಟಿದ ಜೀವನ ಪ್ರೀತಿಯಲಿ ಜಯದ ಕೇಕೆ ದೇವರೇ ॥ ೧ ॥

ಈ ದಾರಿ, ಆ ಗುರಿ ನಡೆವ ಪರಿ ಎಲ್ಲ ತೋರಿಸಿ ಪಯಣಕ್ಕೆ ತೊಡಗಿಸಿರುವೆ
ಪಯಣದ ದಣಿವ ನೀಗಿಸುವ ನೆಮ್ಮದಿಯ ಅಡಗಿಸಿರುವೆ ಯಾಕೆ ದೇವರೇ ॥ ೨ ॥

ತುಂಬಿ ಹರಿಯುತಿಹ ಹೊಳೆಯ ದೃಶ್ಯ ಹಾರಿಸಾಯುವಷ್ಟು ಪ್ರೀತಿ ಹುಟ್ಟಿಸುತಿದೆ
ಕಣ್ಸೆಳೆವ ಸೌಂದರ್ಯದಡಿಯಲೇ ಅಪಾಯವನಿಟ್ಟಿರುವುದೆಂಥ ಎಚ್ಚರಿಕೆ ದೇವರೇ ॥ ೩ ॥

ಎಲ್ಲ ಕಳ್ಳರೇ ಇರುವ ನಿನ್ನ ಮನೆಯಲಿ ಸಿಕ್ಕಿಬಿದ್ದವನಿಗಷ್ಟೇ ಹಣೆಪಟ್ಟಿ
ಆನೆ-ಹುಲಿ-ಸಿಂಹಗಳ ಬಿಟ್ಟು ಮೇಕೆಯೇ ಯಾಕಾಗಬೇಕು ಹರಕೆ ದೇವರೇ? ॥ ೪ ॥

◆ **ಚಿದಾನಂದ ಸಾಲಿ**

ಸಿಡಿವಾಳ - ೫೮೪ ೧೨೫, ರಾಯಚೂರು ಜಿಲ್ಲೆ

ಭೂತ ಶೇಷ



ಭೂತದ ಪಾತ್ರಧಾರಿಯಂತೆ
ಬಣ್ಣ ಹಚ್ಚಿ ಆವೇಶ ಹೆಚ್ಚಿ ಎದ್ದು ನಿಂತಿದ್ದೇನೆ
ನಿಮ್ಮಂತೆ ಅವರಿವರಂತೆ ಅವಕಾಶದಲ್ಲಿ ಕುಣಿ-
ಕುಣಿದ ರಂಗದಲ್ಲಿ ಹೆಜ್ಜೆಗಳ ಗುರುತುಗಳಲ್ಲಿ ಹುಡಿ
ಹಿಡಿಹಿಡಿ ಮಣ್ಣ ಕೆದರುಗಳಲ್ಲಿ; ಪದರುಗಳಲ್ಲಿ ಅಸ್ಪಷ್ಟ ಅಪರಿಚಿತ
ಲಿಪಿಗಳಂತಹ ಗೀಚುಗಳಿವೆ – ಶಾಸನಗಳಂತೆ ಶಿಥಿಲ
ನಮ್ಮೊಳಗೆ ಯೇಸು ರಾಮನಿದ್ದಾನೆ ಅಲ್ಲಾಹು
ಜಿನನಿದ್ದಾನೆ ಬುದ್ಧನಿದ್ದಾನೆ ಗಾಂಧಿ
ಭ್ರಮಿಸುತ್ತಿದ್ದೇನೆ ಚಕ್ರ ಭ್ರಮಣದಲ್ಲಿ
ದೇವನಾಟ್ಯದಲ್ಲಿ; ಜೀವನಾಟ್ಯದಲ್ಲಿ; ದೇವಭಾವ
ಮುದ್ರೆಗಳಲ್ಲಿ– ಭಯ ಅಭಯ ನಟಿಸಿದ್ದೇನೆ
ಚಿನ್ಮಯ ನಗುಮುಗುಳುಗಳಲ್ಲಿ ಪೂರ್ತಿ ಆಹ್ಲಾದ
ಅರಳುವ ಮುನ್ನ
ಸುಖದ ಗಣೆಯ ಮೇಲು ನೆಲ ಕುಸಿದಿದೆ
ಸೀಳು – ಸೀಳು ಚಿಮ್ಮಿದೆ ಸುಖ ಜಲ ಜೀವ ಜಲ ಜ್ವಾಲೆ
ನನ್ನದೇ ಕಂದನ ಪ್ರಥಮ ಆಕ್ರಂದನದ ಹಾಗೆ
ನನ್ನಲ್ಲಿ ಬೀಜಗಳಿವೆ – ನನ್ನದೇ ತಾತನ; ಅವನ ತಾತನ ಮುತ್ತಾತನ; ದೇವನ;
ದೇವನಲ್ಲದ – ದಾತನ
ದೇವ ಬೀಜಗಳಿವೆ.
ನನ್ನಲ್ಲಿ ನಿಮ್ಮಲ್ಲಿ ಅವರಿವರಲ್ಲಿ ಗಾಳಿಯಲ್ಲಿ ಗಂಧದಲ್ಲಿ
ಮಳೆ ಹನಿಗಳಲ್ಲಿ ಇಬ್ಬನಿಗಳಲ್ಲಿ ಉದುರಿದ ಉಲ್ಕೆಗಳಲ್ಲಿ
ಗುಪ್ತ ಸುಪ್ತ ರಂಧ್ರಗಳಲ್ಲಿ
ಮಧುರವ್ಯಸನದ ಸ್ರಾವದ ಹಾಗೆ; ಪಾರದ ಹಾಗೆ; ಬಿತ್ತು
ಬಿತ್ತುತ್ತಿದ್ದೇನೆ-
ಭೂಮಿ ಗರ್ಭಗಳಿಗೆ; ಸೀಳು ಗಾಯಗಳಿಗೆ ಮುತ್ತು ಮತ್ತು ಮತ್ತು.
ಬಿತ್ತುತ್ತಿದ್ದೇನೆ–
ಶಬ್ದ ಪ್ರಪಂಚದ ಭಾವ ಸಾಲುಗಳಿಗ ಶಬ್ದ ಮತ್ತು!
ಮತ್ತೂ ಒತ್ತಿ ಒತ್ತಿ ಎತ್ತಿ ಎತ್ತಿ ಹತ್ತಿ; ಹಗುರವಾಗಿ
ವೇಷವಾಗಿ ಆವೇಶವಾಗಿ ಭೂತ ಶೇಷವಾಗಿ
ನಿನ್ನೆಗಳನ್ನು ನಾಳೆಗಳಿಗೆ, ನಾಳೆಗಳನ್ನು ಅದರಾಚೆಗೆ
ಭೂತದ ಪಾತ್ರಧಾರಿಯಂತೆ– ಅಥವಾ ರೂಬು ರೂಬು
– ಭೂತದ ಹಾಗೆ

◆ ಎಂ. ವ್ಯಾಸ

ಕೃಪಾನಿಧಿ, ಆರ್.ಡಿ. ನಗರ
ಕಾಸರಗೋಡು, ೬೭೧ ೧೨೪

ನಾಲ್ಕಿತ್ತು; ಒಂದು ಕಿತ್ತು ಹೋಗಿದೆ.
ಅದೀಗ ಮೂರು ಕಾಲಿನ ಕುರ್ಚಿ
ಆದರೂ ನಿಂತಿದೆ ಹೇಗೆ?
ನೆಲದ ಜಲದಲ್ಲಿ ವಿರಾಜಮಾನವಾಗಿ
ನಿಂತಿದೆ ಅಥವಾ ಕುಳಿತಿದೆ.
ಚಲಿಸದು; ಯಾವುದನ್ನೂ ತಡೆಯದು;
ತಡೆದುಕೊಳ್ಳದು.
ಸಮತೋಲನದ ನಟನೆಗೆ
ಪ್ರೇಕ್ಷಕರ ಕೈ ಚಪ್ಪಾಳೆ
ಮುಖವಾಡದ ನಗುವಿಗೆ ಪ್ರತಿ ನಗು...

ಮುಟ್ಟದಿರಿ, ಬಿದ್ದೀತು
ಉರಿದ ದಾರದ ಹಾಗೆ
ಜಗ್ಗಿದರೆ ನುಚ್ಚುನೂರು
ನಿಮ್ಮ ಉಸಿರೂ ತಾಗಬಾರದು ಅದಕ್ಕೆ
ನೆಪ ಸಾಕು ಬೀಳುವುದಕ್ಕೆ

ಮುಕ್ಕಾಲು

ಅನೇಕರಿದ್ದಾರೆ ನಮ್ಮಲ್ಲಿ
ಹೀಗೆ ಬದುಕುವವರು;
ಬದುಕಿದಂತಿರುವವರು;
ಬದುಕಿನ ಸರಕಾದವರು
ಬೇಕೇ ನಿಮಗೆ?

ನಾವೂ ಅಷ್ಟೇ, ಮುಕ್ಕಾಲುಗಳು.
ಬೀಳುವುದನ್ನು ಕಾಯುತ್ತಿರುವವರು.
ಪರುಷಮಣಿಯೂ ಇಲ್ಲ, ಪುರುಷೋತ್ತಮನೂ ಇಲ್ಲ

ನಿಜವಾಗಿರುವವರು ಮುಟ್ಟುವುದನ್ನು
ಉಸಿರಿನಲೇ ನಮ್ಮನ್ನು ಬಯಲಿಗೆಳೆಯುವುದನ್ನು
ಕಾಯುತ್ತ ತಣಿಯುವವರು.

◆ ಬಾಲಸುಬ್ರಹ್ಮಣ್ಯ ಕಂಜರ್ಪಣೆ

'ಸಿರಿ', ಬ್ರಾಹ್ಮಿನ್ ವ್ಯಾಲಿ, ಮಡಿಕೇರಿ
ಕೊಡಗು

ಜಾಲಾರದ ಹೂ

ಶಿವರಾತ್ರಿಯಾದೆಂಟುದಿನ ಊರಲ್ಲಿ ಇಷ್ಟೊತ್ತಿಗೆ ತೇರು
ಬಾಳೆಹಣ್ಣಿನ ತುದಿಗೆ ದವನದ ಕುಡಿ ಚುಚ್ಚಿ ಪೂಜಾರಪ್ಪ
ನ ಬೆನ್ನಿಗೇ ಗುರಿಯಿಟ್ಟು ಎಸೆದದ್ದು ಅಪ್ಪಿ ತಪ್ಪಿ ದೇವರ
ಪೀಠಕ್ಕೆ ತಗುಲಿದರೆ ಅಂದುಕೊಳ್ಳುತ್ತಿದುದು 'ಓ ಈ ಸಾರಿ
ಖಂಡಿತಾ ಪಾಸು' ಗ್ಯಾಸಿನ ಒಲೆ ಮೇಲಿರಿಸಿರುವ ನಾನ್
ಸ್ಟಿಕ್ ತವೆಯ ಮೇಲೆ ಹಗೂರ ದೋಸೆ ಹಿಟ್ಟಿನ ನಿಟ್ಟಿಂಗ್
ಹೆಣೆಯುವಾಗ ತೂರಿದ ನೆನಪನ್ನೂ ಅವಳು ಬೇಯಿಸಿದಳು

ಕ್ರೌಳ್ ಕ್ರೌಳ್ ಗೇಟಿನಲಾಕು ತೆಗೆದದ್ದು ಇನ್ನಾರೂ ಅಲ್ಲ
ಅವನೇ ಅವನೇ ಅವನೇ ಆ ಕ್ರ ಕ್ರ ಕ್ರ ಕ್ರ ಕ್ರ ಕ್ರ ಕ್ರಕ್ಕಾರ
ಇನ್ನಾರದ್ದೂ ಅಲ್ಲ ಅವನದ್ದೆ ಅವನದ್ದೆ ಅವನದ್ದು ಮಾತ್ರ
ದೋಸೆ ಮಗುಚುವುದು ಪೆಂಡಿಂಗಿರಿಸಿ ವಿಂಡೋಹೋಲ್
ನಿಂದ ದಿಟ್ಟಿದಬ್ಬಳ ತಳ್ಳಿ ಎಸ್ ಅವನೇ ಅವನೇ ಅವನೇ
ಸ್ಟೌವ್ವಿನ ಸ್ವಿಚ್ಚು ಎಡಕ್ಕೋ ಬಲಕ್ಕೋ ಛೇ ಗಡಿಬಿಡಿ ಗಡಿಬಿಡಿ
ಬೆಲ್ಲೊತ್ತುವ ಮೊದಲೇ ಬಾಗಿಲು ತೆಗೆದು 'ಬನ್ನಿ ಬನ್ನಿ ಬನ್ನಿ'

ಇದೆಷ್ಟನೆಯ ವರ್ಷ ಹೂಂ ಇಪ್ಪತ್ತೇಳು ಅಲ್ಲ ಇನ್ನೂ ಜಾಸ್ತಿ
ಇಪ್ಪತ್ತೆಂಟು... ಪ್ರತಿ ಸಂವತ್ಸರದ ಇದೇ ದಿನ ಇದೇ ಹೊತ್ತು
ಅವನ ಚೀಲದಲ್ಲೇನಿದೆ ಹೇಳದೆಯೇ ಗೊತ್ತು ಹುರಿದಕ್ಕಿ
ತಂಬಿಟ್ಟು ಹೊಸ ಕೊಬರಿಗಿಟುಕು ಇಷ್ಟೂ ಚಿತ್ತಿರದ ಒದ್ದೆ
ಮಕಮಲ್ಲು ಚೌಕದಲಿ ಜಾಲಾರದ ಹೂವು ಕಟ್ಟು ಬಿಚ್ಚಿದರೆ
ಏಳು ಬೆಟ್ಟದ ಆಚೆ ಏಳು ಕೆರೆಗಳ ಈಚೆ ಗುಪ್ಪೆಯಾಗಿರುವ
ಅವಳೂರು ಎದುರು ಕುಂತುಬಿಡುವುದು ವೀರ ಮಂಡಿಯೂರಿ

ಈಗ ಮೊದಲು ಮಾತಾಡುವವರಾರು? ಇಪ್ಪತ್ತೆಂಟನೆಯ
ಸರ್ತಿಯೂ ಹೊಸದಾಗುವ ಹಳೆಯ ತಬ್ಬಿಬ್ಬು 'ಕೆಲಸವಿತ್ತು
ಇಲ್ಲೆ ಒಂಚೂರು ಹಂಗೆ ಬಂದಿದ್ದವನು ಇತ್ತಲೂ ಬಂದೆ...
ಹೆಂಗಿದ್ದೀರಾ ನೀ... ಈ ಈ ಈ ಈ ಈ ಈ ಈವು(ನು)?'
ಆ ತೊದಲು ಕೂಡಾ ಬದಲಾಗುವುದಿಲ್ಲ ಪ್ರತಿಸರ್ತಿಯು
ಅಲ್ಲೇ ಉಗ್ಗು ಅದೇ ಲೆಕ್ಕತಪ್ಪದ ಮಾತ್ರಾಗಣ ಯಾವುದಿದು
ಛಂದಸ್ಸು.. ಅನುಕ್ತಿತ್? ಅಘೋಷಿತ್? ಅನಾದಿ ಅಂತ್?

ಪ್ರತಿ ಪದಾರ್ಥದ ತಪಶೀಲು ಯಾರು ಯಾರಿಗೊಪ್ಪಿಸಬೇಕು?
ಗೊತ್ತಿರುವ ಪ್ರಶ್ನೆಗೆ ಗೊತ್ತಿರದ ಉತ್ತರ; ಹಾಳಾದವನು ಆ
ಮೇಷ್ಟ್ರೆಲ್ಲಿ ಹೋದ? ಘನಂದಾರಿಗಳಿವರು ನೋಡಿ ಸಾರ್
ಬರೇ ತಪ್ಪುಗಳ ಕಾಪಿ ಮಾಡುತ್ತಿದ್ದಾರೆ ಒಬ್ಬರನ್ನಿನ್ನೊಬ್ಬರು
ಸುಮ್ಮನಿರಮ್ಮ ಕವಯತ್ರಿ ಒಂದಕ್ಷರ ಬರೆವ ಇಸಮುಗಳಲ್ಲ
ಖಾಲಿ ಹಾಳೆಗಳಿವರು ಇಲ್ಲ ಸಾರ್ ನಿಮಗೆ ಗೊತ್ತಿಲ್ಲ ಇವರ
ಅದೃಶ್ಯಲಿಪಿ ನೋಡಿ, ಇಲ್ಲ ಕೇಳಿ ಒಂದಿಷ್ಟು ಹಿಂದಕ್ಕೆ ಹೋಗಿ

ತೇರಿನ ಮುಂದವನು ನಂದಿಕೋಲು ಕುಣಿಸಿದ್ದಾನೆ ಶಿವನೇ
ಭುಜದಿಂದಿಳಿದು ಎದೆ ಮೇಲೆ ಆಗೋ ಆಗೋ
ನಡುವಿನ ಮೇಲೆ ಉದರವೇ ಆಧಾರ ಬಿಟ್ಟ ಬಿಟ್ಟ ಎರಡೂ
ಕೈಬಿಟ್ಟ ದಿಟ್ಟ ತುದಿಗೆ ನೆಟ್ಟ ಝುತ್ತಣಕು ಝುತ್ತಣಕು ಝುತ್ತಣಕು
ಝುಣ್ ಝುಣ್ ಹರನ್ನಮೋ ಪಾರ್ವತಿಪತೇ ಹರಹರಮಹಾ
ದೇವ ಜಯನ್ನಮೋ ಪಾರ್ವತೀಪತೇ ಹರಹರ ಮಹಾದೇವಾ
ಮೂರಾಳುದ್ದ ಮುನ್ನೂರು ಜಂಘೆ ಸುಳಿಯಲ್ಲಿ ಕುಂತವ್ನೆ ಬಸವಣ್ಣ

ಎದೆಗಾರ ಜವನಿಗರು ನಂದಿಕೋಲಿಗಂಜದವರುಂಟೆ ಬನ್ನಿ
ಯಾರಯ್ಯ ಮುಂದಿನ ಸರದಿ ಬನ್ನಿರೋ ಬೇಗ ಬನ್ನಿ ಬನ್ನಿ
ಧರೆಗೆ ತಾಗಿಸದಂತೆ ಇಳಿಸಿದ ಕೋಲು ಕೈದಾಟಿಸಿದವನೆ
ಹುಡುಕುತ್ತಾನೆ ಒಂದು ಜೊತೆ ಕಣ್ಣು ಕುಂತಲ್ಲೆ ತನ್ನ ಕುಣಿತ
ವನ್ನೆಲ್ಲ ಸಾಲು ಚಿತ್ರವ ಮಾಡಿ ರೆಪ್ಪೆಯೊಳಗಿಟ್ಟುಕೊಂಡಿರುವ
ಜಮ್ಮುನೇರಳೆ ಹಣ್ಣು ಜಡೆ ತುಂಬ ತಾನು ಖುದ್ದು ಮರಹತ್ತಿ
ತಂದಿದ್ದ ಜಾಲಾರದ ಹುವ್ವಗಂಧವನು ಗುತ್ತಿ ಕಟ್ಟಿ ಮುಡಿದವಳನ್ನ

೨

ಸಂಜೆಗೆ ಯಜಮಾನರು ಕೇಳಿದರು 'ಯಾವುದಿದು ಹೊಸ
ಗಂಧ ಊದುಬತ್ತಿ ಬದಲಾಯಿಸಿದೆಯಾ?' ಅವಳು
ಹೇಳಿದಳು 'ಇಲ್ಲ ಊರಿಂದ ಹಂಪಣ್ಣ ಮಾವ ಬಂದಿದ್ದ
ಏಲಕ್ಕಿ ಬಾಳೆಯ ತಿರುಳು ಹಾಲುದುಪ್ಪದಲಿ ಕಲಸಿದ್ದ ತಂಬಿಟ್ಟು
ಹೊಳೆವ ಚಮಚದಲ್ಲೆತ್ತಿ ಬಾಯಂಗಳದ ತುಂಬಾ ಓಡಾಡಿಸಿ
ಅರೆಗಣ್ಣು ಮುಚ್ಚಿ ಹೇಳಿದರು 'ಪ್ಚ ಪ್ಚ ಪ್ಚ ಏನಾದರೂ ನೋಡು
ಇಂಥ ತಂಬಿಟ್ಟಿನ ಹದ ನಮ್ಮನೆಯಲ್ಲಿ ಕೂಡಲಿಲ್ಲ ಅಲ್ಲವಾ'

'ಸ್ವಂತದ್ದಂತೂ ಇಲ್ಲ ಆ ಹಂಪಣ್ಣನದು ಏನಂತೆ ಊರವಾರ್ತೆ'
'ತೀರಿಕೊಂಡರಂತೆ 'ಜಡೆಯ ಬುಡಕೊಂದೆಸಳು ಸಿಗಿಸಬಾರದಿತ್ತೆ
ಜಾಲಾರದ ಅರಳು' ಬೆಳಗಿನ ಸುದ್ದಿಯನು ರಾತ್ರಿಯಲ್ಲೋದುತ್ತ
ಕೇಳಿದರು ಅವರು ಸುತ್ತ ಚುಕ್ಕಿ ಬಿಳಿ ಜಾಲಾರದ ದೇಸಿಗಂಪಿನ ಗುಚ್ಚ
ಗಳ ಸಂತೆಯಲಿ ನುಣುಪು ಹಸುರಿನ ನೀಳ ಮೈ ಎಲೆಯ ಒಂದೊಂದೆ
ಕುಡಿಯನ್ನು ದಾನಿಯಾಕಾರಕ್ಕೆ ಕತ್ತರಿಸಿ ಕೊರಳು ಕಟ್ಟುತ್ತ ಹೇಳಿದಳು
ಅವಳು 'ಇಲ್ಲ ನಮ್ಮ ಕಡೆ ಜಾಲಾರದ ಹೂವು ಮುಡಿಯುವುದಿಲ್ಲ'

◆ ಲಲಿತಾ ಸಿದ್ದಬಸವಯ್ಯ

೫೨೧೭, ಗುರುಷ್ನಾಧಿ, ೨ನೇ ತಿರುವು
ಅಶೋಕ ನಗರ, ತುಮಕೂರು - ೫೭೨ ೧೦೩



ಭಾವದ ಹುತ್ತ
ಹರಿದಾಡುತ್ತ
ಅತ್ತ ಇತ್ತ ಸುತ್ತಮುತ್ತ
ಮನಸೇ ಮನಸೇ ಮನಸು
ಬೆರಗನೆ ಬಿಡಿಸುವ ಸೊಗಸು

ಕಂಡೂ ಕಾಣದ ದಾರಿ
ಹೊಳೆದೂ ಹೊಳೆಯದ ಥಿಯರಿ
ಮುಗಿಯದ ಕಡಲಿನ ಅಲೆಯಲೆ ಒಡಲಿನ
ಒಳಗಾರೊ ಹೊರಗಾರೊ
ಕೆಟ್ಟರೆ ಕಡುವೈರಿ
ಈ ಮನಸಿನ ಗೂಡು
ನಿಗೂಢದ ಕಾಡು

ಹೊಳಪೂ ಅದರದೆ ಹುಳುಕೂ ಅದರದೆ
ಮುನಿಸು ನಲಿವು ಬಿಂಕದ ಬಿಗುವು
ರಾಗದ ರಗಳೆ ಅನುರಾಗದ ಕಹಳೆ
ಎಲ್ಲವೂ ಎಲ್ಲವೂ ಎಲ್ಲವೂ ಅದರಾಸೆ
ಕದ್ದರೂ ಸರಿಯೆ ಗೆದ್ದರೂ ಸರಿಯೆ
ಮನಸಿನ ಜೊತೆಗೇ ಮನಸಿಗೆ ಮದುವೆ

ಮೋಹವು ಇರಲಿ ಮಮಕಾರವ ತರಲಿ
ಕನಸಿನ ತೊಟ್ಟಿಲ ತೂಗುವ ಜೋಗುಳ
ಹಾಡೇ ಹಾಡಲಿ ಹದವಾಗಿ
ಮೌನದ ಚಿಪ್ಪು ಮಿದುವಾಗಿ
ಮಾತಾಡಿದೆ ಬೆಳಕಿನ ಬಸಿರು
ತೊನೆದಾಡಿದೆ ಬಯಕೆಯ ಕದಿರು
ಮನಸಿನ ಜಗದಲಿ ಆಕಾಶದ ಜಗುಲಿ
ಮನಸಿಗೆ ಮನಸೇ ಯಜಮಾನ
ಮನಸಿನ ತುಂಬಾ ಸುಮ್ಮಾನ

ಮನಸೇ ಮನಸು

ಕಾಂಕ್ಷೆಯ ಕಣ್ಣಿನ ಅಂಚಲದೇನು?
ಶಬ್ದವ ಮೀರಿದ ಮಿಂಚಲದೇನು?
ಬಿರುಬೀಸಿನ ಗಾಳಿ ಹೇಳಿದ್ದೇನು?
ತಳಮಳವೇನು ಕನಲಿದ್ದೇನು?
ಆಚೆಯದೇನೋ ಈಚೆಗೆ ಬಂತು
ಮನಸಿಗೆ ಯಾಕೋ ದುಮ್ಮಾನ
ಮನಸೇ ಒಂದು ಅನುಮಾನ

ಭಾವದ ಹುತ್ತ
ಹರಿದಾಡುತ್ತ
ಅತ್ತ ಇತ್ತ ಸುತ್ತ ಮುತ್ತ...
ಮನಸಿನ ಕಥೆಗೆ ಮನಸಿಡುವ ಮನಸೆ
ಮನಸಿನ ಕಥೆಯ ತೆರೆದಿಡು ಮನಸೆ

◆ ವೆಂಕಟ್ರಮಣ ಗೌಡ
ಈ ಟೀವಿ ಕನ್ನಡ, ರಾಮೋಜಿ ಫಿಲಂ ಸಿಟಿ,
ಹೈದರಾಬಾದ್





ಮಸ್ತಕಾಭಿಷೇಕದಲ್ಲಿ

ನಿಂತ ನಿಲುವಲ್ಲಿ ಪಂಚಶೀಲದ ಹೊನಲು
ಹಾದಿ ಸರಿದಂತೆ ಹೃದಯಕ್ಕಿಳಿಯುವಲ್ಲಿ
ಚಕಿತ ಜಿಂಕೆಯ ಮೈಮುಗಿಲು ಕರಗಿ
ಎಳೆಎಳೆಯಾಗಿ ನೆಲಕ್ಕಿಳಿದು
ಅಂತರಂಗದ ಪಾತ್ರೆ ತುಂಬಿ ತುಳುಕುವಲ್ಲಿ
ಅಲೆಗಳಿಂದೆದ್ದು ಚಿಮ್ಮುವ ಬೆಳ್ಳಕಿನೂರು
(ಕಾಯುತ್ತಲಿದ್ದಾಳೆ ತಾಯಿ ಕುಡಿಕೆ ಹಿಡಿದು)

ಈ ನೆಲದ ಹಾದಿಗಳೆಲ್ಲ ಜನಜನಿತವಾಗಿ
ಅಯೋಮಯವಾಗಿತ್ತು ಬೆಟ್ಟ-ಬಯಲು
ನೆಲಕ್ಕೆ ನವಿರೇಳಿಸುವ ನಿಲುವು ನಿಶ್ಚಿಂತ
ಜೇನು – ಹಾಲು – ಇಕ್ಷುರಸ – ನೂರು ಕಳಸದ ನೀರು–
ಚಂದನ ಧಾರೆ ಸರಿದ ಹಳದಿ ಕುಂಕುಮ ಹಸಿರು
ಕಾಮನಬಿಲ್ಲು ನಿಲುವಲ್ಲಿ ದಿಗಂಬರ ಪುಳಕ
ನೂರು ನಾಣ್ಯದ ಚೀಲ ಬರಿದಾದರೂ
ಈತ ಗೊಮ್ಮಟ ನಿಂತ ನಿಲುವಲ್ಲಿ ನಿಶ್ಚಿಂತ
(ಕಾಯುತ್ತಲಿದ್ದಾಳೆ ತಾಯಿ ಕುಡಿಕೆ ಹಿಡಿದು)

ನೆಲದ ಚಿಂತೆಯ ಬೆಸುಗೆ ಇವನಿಗಿನಿತಿಲ್ಲ
ಬೇಕಿಲ್ಲದೆದೆಯ ಗೂಡಿನ ಹಣತೆ ಸಲುಗೆ
ಕಲ್ಲಿಗೂ ಅಂಟಿರುವ ಬದುಕಿನ ನಂಟು
ಒಳಒಳಗಿನ ಬವಣೆ ಶುದ್ಧಿಗೆ ಬೀಗಿ
ಹೊಳೆವಂತೆ ಹರಿಯುವ ತೃಪ್ತಿ ಹಾದಿಯಲ್ಲಿ
ಪ್ರತಿಮಾಯೋಗಿ ಗೊಮ್ಮಟನದಿಯ ಸುಳಿಯಲ್ಲಿ
ನಂಬಿಕೆಯ ಚಿಗುರುಮ್ಮಳದ ಬಳ್ಳಿ ತೋಳಿನಲ್ಲಿ
ಈ ಗೊಮ್ಮಟನ ಮೌನದ ಸಂಜೆ ಸರಿಯುವಲ್ಲಿ
(ಎಚ್ಚರಿಸಲೆಂದು ತಾಯಿ ಕಾದಿರುವಲ್ಲಿ)



ತೆರೆಸರಿದ ಕಣ್ಣುಗಳಲ್ಲಿ ಕಾಲದ ಜೋಕಾಲಿ
ಒಡ್ಡೋಲಗ ತುಂಬಿ ಚೆಲ್ಲಾಪಿಲ್ಲಿಯಾದ ಬೆರಗು
ಈ ಗೊಮ್ಮಟನ ಮೈ ತುಂಬಿ ತುಳುಕಾಡಿದ ಬೆಳಗು
ನೆಲಕ್ಕೆಲ್ಲ ಈ ಭೂಪತಿಯ ವಿರಾಗಕ್ಕೆ ಕಣ್ಣು-ಕಿವಿ
ಮೂಗು-ತುಟಿಯಲ್ಲಿ ಜಿನುಗುವ ಪ್ರೀತಿ –
ಹಣೆಯಿಂದಿಳಿದು ಮೂಗಿನ ತುತ್ತತುದಿಯವರೆಗೆ
ಕೆಳಗೆ ಮಿಂಚಿನ ಮುಗಿಲು ಚುಂಬಿತ ಗಲ್ಲ
ಕೊರಳಿಂದ ನೇರ ಹೊಕ್ಕುಳ ಸುಳಿಗೆ ಯೋಗಮುದ್ರೆ
ತಳಗೆ ತುದಿ ಬೆರಳ ಮಾಟಕ್ಕೆ ಶಾಂತಿಯ ಕಾಂತಿ!

ತನ್ನದೇ ನಿಲುವು ಪಂಚಶೀಲದ ಚಿಂತೆಯಲ್ಲಿ ಗೊಮ್ಮಟ
ಈ ಬದುಕು ಹಗಲಿರುಳಿಗನಂತ ಪಯಣದೋಟ
(ಕಾಯುತ್ತ ನಿಂತ ತಾಯಿ ಕುಡಿಕೆ ಹಾಲಿನ ಸಹಿತ)

◆ ಕ.ವೆಂ. ರಾಜಗೋಪಾಲ

ಬೆಂಗಳೂರು




ಸಂಕಿರಣ 9


೧೯೬೧ರ ಮೇ ೧೧ರಂದು ಚಿಕ್ಕಮಗಳೂರಿನಲ್ಲಿ ದಯಾನಂದ ಪೈ- ಸರಸ್ವತಿ ದಂಪತಿಗಳ ಮೊದಲ ಮಗಳಾಗಿ ಜನಿಸಿದ ಸವಿತಾ ನಾಗಭೂಷಣ, ಬೆಳೆದದ್ದು ಶಿಕ್ಷಣ ಪಡೆದದ್ದು ಶಿವಮೊಗ್ಗದಲ್ಲಿ. ಬಿ.ಕಾಂ. ಹಾಗೂ ಇತಿಹಾಸದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಇವರು ೧೯೭೬ರಿಂದ ಸುಮಾರು ೨೦ ವರ್ಷಗಳ ಕಾಲ ಅಂಚೆ ಇಲಾಖೆಯಲ್ಲಿ ಸೇವೆ ಸಲ್ಲಿಸಿದ ನಂತರ ಸ್ವಯಂ ನಿವೃತ್ತಿ ಪಡೆದು, ಈಗ ಪತಿ ಡಿ.ಎಸ್. ನಾಗಭೂಷಣ ಅವರೊಂದಿಗೆ ಶಿವಮೊಗ್ಗದಲ್ಲಿ ನೆಲೆಸಿದ್ದಾರೆ.




ವಿಚಾರಗಳ ಭಾರವಿಲ್ಲದಂತೆ ಅಂತಃಕರಣದಿಂದ ಬರೆಯುವ ಸವಿತಾ ಸಾಮಾನ್ಯ ಓದುಗ ಹಾಗೂ ವಿಮರ್ಶಕರಿಬ್ಬರ ಗಮನವನ್ನೂ ಸೆಳೆದಿದ್ದಾರೆ. 'ನಾ ಬರುತ್ತೇನೆ ಕೇಳು', 'ಚಂದ್ರನನ್ನು ಕರೆಯಿರಿ ಭೂಮಿಗೆ', 'ಹೊಳೆಮಗಳು' ಹಾಗೂ 'ಜಾತ್ರೆಯಲ್ಲಿ ಶಿವ' ಎಂಬ ೪ ಕವನ ಸಂಕಲನಗಳನ್ನು ಹೊರತಂದಿರುವ ಇವರು ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ ಪಡೆದ ಮೊದಲ ಕವಯಿತ್ರಿಯಾಗಿದ್ದಾರೆ. ಇವರ 'ಸ್ತ್ರೀ ಲೋಕ' (೧೯೯೬) ಕಾದಂಬರಿ ಒಂದು ವಿಶಿಷ್ಟ ಪ್ರಯೋಗವೆನಿಸಿದ್ದು ಹಲವು ಪುರಸ್ಕಾರಗಳನ್ನು ಪಡೆದು, ಸಾಹಿತ್ಯ ವಲಯದಲ್ಲಿ ಬಹು ಚರ್ಚಿತ ಕೃತಿಯಾಗಿದೆ.



ಸವಿತಾ ನಾಗಭೂಷಣ 'ಮುಡಿಮಲ್ಲಿಗೆ' ಎಂಬ ಮಹಿಳಾ ಸಾಹಿತ್ಯ ಸ್ಪಂದನ ಸಂಪುಟವನ್ನು ಸಂಪಾದಿಸಿದ್ದು, 'ಸಾಹಿತ್ಯ ಸಂವಾದ' ನಿಯತಕಾಲಿಕದ ಸಂಪಾದಕರಾಗಿಯೂ ಕೆಲಕಾಲ ಕೆಲಸ ಮಾಡಿದ್ದಾರೆ.





ವ್ಯವಸ್ಥೆಯ ಪಲ್ಲಟಕ್ಕೆ ಮಾತೃತ್ವ ಮತ್ತು ವಾತ್ಸಲ್ಯ

◆ ಎಸ್. ಸಿರಾಜ್ ಅಹಮದ್

ಕವಯಿತ್ರಿಯಾಗಿ ಈಗಾಗಲೇ ಹೆಸರು ಮಾಡಿರುವ ಸವಿತಾ ನಾಗಭೂಷಣ ಅವರ ಈಚಿನ ಸಂಕಲನ ಜಾತ್ರೆಯಲ್ಲಿ ಶಿವ(ಅಕ್ಷರ ಪ್ರಕಾಶನ, ೨೦೦೨)ದ ಪದ್ಯಗಳು ಎಲ್ಲಿಯೂ ಅವನ್ನು ಮಹಿಳಾ ಕಾವ್ಯ ಅಥವಾ ಸ್ತ್ರೀವಾದಿ ಎಂಬ ಹಣೆಪಟ್ಟಿಯ ಅಡಿಯಲ್ಲಿ ಓದಬೇಕೆಂಬ ಸೂಚನೆಯನ್ನು ನೀಡುವುದಿಲ್ಲ. ಇಂಥ ಒತ್ತಾಯಗಳ ಹೊರತಾಗಿಯೂ ಈ ಪದ್ಯಗಳನ್ನು ಓದಿದ ಮೇಲೆ ಉಳಿಯುವುದು ಅಂತಃಕರಣ ಮತ್ತು ಪರಮ ವಾತ್ಸಲ್ಯದ ಭಾವಗಳೇ ಆಗಿವೆ. ಅವು ಮನುಷ್ಯ ಅನುಭವಗಳಲ್ಲಿ ಬಹುಮಾನ್ಯವಾಗಿರುವ ಮಾತೃತ್ವದ ಗುಣಗಳೂ ಆಗಿರುವುದರಿಂದ ಕವಿತೆಗಳು ಒಟ್ಟಂದದಲ್ಲಿ ತಾಯ್ತನದ ತುಂಬು ವಾತ್ಸಲ್ಯದ ಮಟ್ಟಕ್ಕೆ ಏರುತ್ತವೆ. ಹಾಗಾಗಿಯೇ ಸವಿತಾ ಅವರ ಪದ್ಯಗಳನ್ನು ಸ್ತ್ರೀವಾದಿ/ ಮಹಿಳಾ ಕಾವ್ಯದ ಪ್ರಭೇದಕ್ಕೆ ಸುಲಭವಾಗಿ ಬಗ್ಗಿಸಿ ಓದಬಹುದಾದ ರಚನೆಗಳು ಎನ್ನಲಾಗದಿದ್ದರೂ ಅವು ಸೂಸುವ ಅಂತಃಕರಣದ ಭಾವದಿಂದ ಸ್ತ್ರೀಸಂವೇದನೆಯ ಬರಹಗಳೆಂದು ಗುರುತಿಸಬಹುದು.

ಸ್ತ್ರೀವಾದಿ ಚಿಂತನೆಯಲ್ಲಿ ಮಹಿಳೆ ತನ್ನನ್ನು ತಾನಿರುವ ಹಾಗೆ ಚಿತ್ರಿಸಬೇಕೋ ಇಲ್ಲವೋ ಎಂಬ ಬಗ್ಗೆ ಮತ್ತು ಸ್ತ್ರೀಸಹಜವೆಂದು ಗುರುತಿಸಲಾಗುವ ಮಾತೃವಾತ್ಸಲ್ಯ, ಸಂತಾನಶಕ್ತಿ, ದಾಂಪತ್ಯನಿಷ್ಠೆ

ಲೈಂಗಿಕತೆ ಮತ್ತು ಇತರ ಸಂರಕ್ಷಕ ಗುಣಗಳ ಬಗ್ಗೆ ವಿವರವಾದ ಚರ್ಚೆ ನಡೆದಿದೆ. ಈ ಗುಣಗಳನ್ನು ಹೊಂದಿರುವುದು ಸ್ತ್ರೀತ್ವದ- femininityಯ ದ್ಯೋತಕವಾಗಿದೆ ಎಂದು ಕೆಲವು ಚಿಂತಕರು ನಂಬುತ್ತಾರೆ. ಜೊತೆಗೆ ತಾಳ್ಮೆ, ಕ್ಷಮೆ, ತ್ಯಾಗ, ನಿಸ್ವಾರ್ಥತೆ ಮುಂತಾದ ಗುಣಗಳು ಸ್ತ್ರೀಯ ವ್ಯಕ್ತಿತ್ವವನ್ನು ನಿರ್ಧರಿಸುವ ಮೌಲ್ಯಗಳಾಗಿ ಪರಿಣಮಿಸಿರುವುದನ್ನು ಸ್ತ್ರೀವಾದಿ ಮೀಮಾಂಸೆ ವಿಮರ್ಶಾತ್ಮಕವಾಗಿ ಚರ್ಚಿಸಿದೆ.ಸವಿತಾ ಅವರ ಸಂಕಲನದ ಪದ್ಯಗಳನ್ನು ಈ ವಾದಗಳ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಬದುಕಿನ ಹಲವು ಅನುಭವಗಳನ್ನು ಕುರಿತ ಇಲ್ಲಿನ ಅನೇಕ ಪದ್ಯಗಳ ಹಿಂದಿನ ಕರುಣೆ, ಪ್ರೀತಿ, ಮಮಕಾರ, ಮಾತೃತ್ವದ ಭಾವಗಳು, ಬದುಕಿನ ಎಂಥ ಕರಾಳ ಮುಖವನ್ನೂ ಅಪರೂಪದ ಸಹನಶೀಲತೆಯಿಂದ ಎದುರುಗೊಳ್ಳುವಷ್ಟು ಗಾಢವಾಗಿವೆ. ಮೊದಲ ಪದ್ಯ 'ತಂಗಿ ಹುಟ್ಟಿದಳು' ನಲ್ಲಿ ಹೆಣ್ಣು ಹುಟ್ಟಿದ ಕಾರಣಕ್ಕೆ ಕುಟುಂಬದಲ್ಲಿ ಮಿಠಾಯಿ ಇದ್ದಕ್ಕಿದ್ದಂತೆ ತುಟ್ಟಿಯಾಗಿದೆ. 'ಸಾಕು' 'ಸಾಕಮ್ಮ'ನೆಂಬ ನಿಟ್ಟುಸಿರೇ ಹೆಸರಾಗಿ, ಬದುಕಿನ ಚಲನಶೀಲತೆಯೇ ಬತ್ತಿಹೋಗಿದೆ ಎಂಬ ಸಂದರ್ಭದಲ್ಲಿ-

ಹಿಡಿಯಷ್ಟಿರುವ ತಂಗಿಯನು
ಮುಡಿಯಷ್ಟಿರುವ ಅಕ್ಕ
ಅಕ್ಕರೆಯಿಂದ ಅಪ್ಪುವಳು
ಅಭಯ ನೀಡುವಳು

– ಎಂಬ ಸಾಲಿನಲ್ಲಿರುವ ಪ್ರೀತಿ-ಮಮಕಾರಗಳು ಉಸಿರಾಡುವ ಚೈತನ್ಯ ತಂದುಕೊಟ್ಟಿವೆ. ಹೆಣ್ಣನ್ನು ಕೀಳೆನ್ನುವ ಅಸಮಾನತೆಯ ಧೋರಣೆಯನ್ನು ಪುರುಷ ಪ್ರಧಾನ ಮೌಲ್ಯವೆಂದು ಧಿಕ್ಕರಿಸುವ ಏಕಮಾತ್ರ ಮಾದರಿಯನ್ನು ತಿರಸ್ಕರಿಸಿ, ಪದ್ಯ ಲಿಂಗತಾರತಮ್ಯವನ್ನು ಬೇರೊಂದು ಬಗೆಯಲ್ಲಿ ಮುಖಾಮುಖಿಯಾಗಿದೆ. ಅಸ್ತಿತ್ವವನ್ನೇ ನಿರಾಕರಿಸುವ ಧೋರಣೆಯನ್ನು ವಾತ್ಸಲ್ಯ-ಮಮಕಾರದ ಮೂಲಕ ನಿರ್ವಹಿಸಿರುವುದು ವಿಶೇಷವಾಗಿದೆ. 'ಕೊಂಡ ಹಾಯುವಳು' ಪದ್ಯದಲ್ಲಿ ಬರುವ ಅಕ್ಕ-ತಂಗಿಯರು, ನೆರೆಮನೆಯ ಲಕುಮಿ ಇತ್ಯಾದಿ ಎಲ್ಲ ಹೆಂಗಸರೂ ನೋವು ಸಂಕಟಗಳೆಂಬ ಕೊಂಡ ಹಾಯುತ್ತಲೇ ಇದ್ದಾರೆ. ಇಂಥ ಸಂದರ್ಭದಲ್ಲಿ ಲಕುಮಿಯ ಕುಡುಕಗಂಡ, ಸವತಿ-ಸಾಲ-ಮಕ್ಕಳು, ಹಸಿವುಗಳೆಂಬ ನಿತ್ಯ ಕರ್ಮಕಾಂಡದಿಂದ ಪಾರಾಗಲು ಮತ್ತೊಮ್ಮೆ ಕೊಂಡಹಾಯುವ ಹರಕೆ ಹೊತ್ತಿದ್ದಾಳೆ.

ಒಮ್ಮೆ ಮತ್ತೊಮ್ಮೆ
ಮಗದೊಮ್ಮೆ
ಹಾಯುವಳು ಕೊಂಡ
ನೋಡುವನವಳ ಗಂಡ
ದೂರದಿಂದಲೇ ಮಂಕಾಗಿ

ಎಂದು ಮುಗಿಯುವ ಪದ್ಯದಲ್ಲಿ ಬದುಕಿನ ನಿರಂತರ ಅಗ್ನಿಕುಂಡದಲ್ಲಿ ದಹಿಸಿಹೋಗುವ ಹೆಣ್ಣಿನ ಸಹನಶೀಲತೆಯನ್ನು ಕಟ್ಟಿಕೊಡುವುದರಲ್ಲೇ ಕವಯತ್ರಿಗೆ ಹೆಚ್ಚಿನ ಆಸಕ್ತಿ ಇದ್ದಂತಿದೆ.

ಕೌಟುಂಬಿಕ ಅಸಮಾನತೆ-ಶೋಷಣೆಗಳನ್ನು ನಿಗ್ರಹಿಸಲು ಮಾತೃತ್ವ-ಮಮಕಾರಗಳನ್ನು ಮದ್ದೆಂಬಂತೆ ಬಳಸುವ ಸವಿತಾ ಸಾಮಾಜಿಕ ಬದುಕಿನ ವಿಕೃತ ಸಂದರ್ಭಗಳಲ್ಲೂ ಅತ್ಯಂತ

ಸಂಯಮದಿಂದ ಪ್ರತಿಕ್ರಿಯಿಸುತ್ತಾರೆ. ಬುದ್ಧ ಪ್ರತಿಮೆಗಳನ್ನು ತಾಲಿಬಾನ್‌ಗಳು ಧ್ವಂಸಗೊಳಿಸಿದ ಸಂದರ್ಭದಲ್ಲಿ ಬರೆದ ಕವಿತೆಗಳ ಸರಣಿಯಲ್ಲಿಯೂ ಸಹ ಅಸಹನೆಯಾಗಲಿ, ಕಳವಳವಾಗಲೀ ಕಾಣುವುದಿಲ್ಲ.

ಮೊದಲು ಬಮಿಯಾನಿನ
ಬೆಟ್ಟದಲ್ಲಿ ಬುದ್ಧ ನಿಂತಿದ್ದ
ನೆಲಕ್ಕುರುಳಿದ ಮೇಲೆ
ನೆಲ,ನೀರು,ಆಕಾಶದ
ಕಣಕಣದಲ್ಲೂ
ಹಂಚಿಹೋಗಿದ್ದಾನೆ ಬುದ್ಧ *(ಆಗ-ಈಗ)*

ತಾಲಿಬಾನಿನ ಯೋಧನಿಗೆ ಅನಿಸಿದ್ದು:

ಮಂಡಿಯೂರಿ ಕೈ ಜೋಡಿಸಿ
ಕಣ್ಮುಚ್ಚಿ ಪ್ರಾರ್ಥಿಸಿದರೆ
ಕಣ್ಮುಂದೆ ಮೂಡುವವನು ಬುದ್ಧ
ಒಡೆದ ತುಟಿ,ಹರಿದ ಮೂಗು
ಯಾ ಅಲ್ಲಾ !
ಬುದ್ಧ ಬುದ್ಧ ಬುದ್ಧ *(ಅಲ್ಲೂ ಬುದ್ಧ-ಇಲ್ಲೂ ಬುದ್ಧ)*

ಎಂಬ ಸಾಲುಗಳಲ್ಲಿ ನಾಶಗೊಂಡ ಪ್ರತಿಮೆಗಿಂತ ಅವನ ಮಾನವೀಯತೆ-ಪ್ರೀತಿ-ತಾಳ್ಮೆಯ ತತ್ವಗಳು ಹೆಚ್ಚು ಕಾಲ ಬಾಳುವಂಥವು ಎಂಬ ಸೂಚನೆಯಿದೆ. ಹೋರಾಟಗಾರನೊಬ್ಬನ ಮಾತಿನಲ್ಲಿ ಘೋಷಣೆಯಾಗಿಬಿಡಬಹುದಾಗಿದ್ದ ಸಂದರ್ಭವೊಂದು ಕವಯತ್ರಿ ಎಂದಿನ ಹಾಗೆ ನೆಮ್ಮದ ತತ್ವದ ಕಾರಣದಿಂದ ಅಂತಃಕರಣದ ಸಂಗತಿಯಾಗಿ ರೂಪುಗೊಂಡಿದೆ. ಆದರೂ ನಡುವೆ-

ಉನ್ನತಿಯಲ್ಲಿದ್ದುದು
ಅಧೋಗತಿಗೆ ಬರುವುದು ನಿಶ್ಚಿತ
ಹಾಗಂದಿದ್ದನಲ್ಲವೆ ತಥಾಗತ (ನಶ್ವರ)

ಎಂಬ ಸಾಲುಗಳು ಬರುತ್ತವೆ. ಮತ್ತು ಇಂಥ ಪಾಪದೂತರು-

ಎಷ್ಟು ದಿನ ಇದ್ದಾರು?
ತಿರುಗುತ್ತಿರಲು ನಿರಂತರ ಭವಚಕ್ರ
ಕಟ್ಟಿದವರೂ ಇಲ್ಲ
ಕೆಡವಿದವರೂ ಇಲ್ಲ (ಕ್ಷಣಿಕ)

ಎಂಬಂಥ ಸಾಲುಗಳನ್ನು ಓದುವಾಗ ಚರಿತ್ರೆಯ ವಿಕಾಸಗತಿಯಲ್ಲಿ ಇದೆಲ್ಲ ಅನಿವಾರ್ಯವೆಂಬ ತಟಸ್ಥ ಒಪ್ಪಿಗೆಯನ್ನೂ ಸೂಚಿಸುತ್ತಿರಬಹುದೆಂಬ ಅನುಮಾನವೂ ಮೂಡುತ್ತದೆ.

ಸವಿತಾ ಅವರದು ಮೂಲಭೂತವಾಗಿ ಅಪಾರ ಸಂಯಮದ ಸಂವೇದನೆಯಾಗಿರುವುದರಿಂದ ಅದು ಬೇರೆ ಬೇರೆ ಅನುಭವದ ಸಂದರ್ಭಗಳಲ್ಲಿ ಭರವಸೆಯಾಗಿ, ಮುಗ್ಧ ಆದರ್ಶವಾಗಿ-ಭಿನ್ನ ರೂಪಗಳಲ್ಲಿ ವ್ಯಕ್ತವಾಗುತ್ತದೆ. ಬಾಳ ಸಂಜೆ ಪದ್ಯದಲ್ಲಿ ವಯಸ್ಸಾದ ತಂದೆ ತಾಯಿಯರನ್ನು ಮೂಲೆಯ ಹಳ್ಳಿಯೊಂದರಲ್ಲಿ ಬಿಟ್ಟು ನಗರದಲ್ಲಿ ವಾಸಿಸುವ ಮಕ್ಕಳು ಕಾಗದ ಬರೆದು,ಫೋನು

ಮಾಡಿ, ಮನಿಯಾರ್ಡರು ಕಳಿಸಿ ಕಾಳಜಿ ತೋರಿದರೂ ಕೊನೆಯಲ್ಲಿ 'ಮನೆ ಕಡೆ ಹುಶಾರು/ ಕೊಡಿ ತೆಂಗು ಅಡಿಕೆಗೆ ನೀರು' ಎಂಬ ಸಂದೇಶವನ್ನೂ ತಪ್ಪದೆ ನೀಡುತ್ತಾರೆ. ಮಕ್ಕಳ ಸ್ವಾರ್ಥ ಲಾಲಸೆಯನ್ನು ಒಂದಿಷ್ಟೂ ಕೊಂಕಿಲ್ಲದೆ ತಣ್ಣಗೆ ಹೇಳಲು ಸಾಧ್ಯವಾಗಿರುವುದು ಅವರ ಸಂಯಮಕೇಂದ್ರಿತ ದೃಷ್ಟಿಕೋನದಿಂದ. 'ಮಹಮದನ ಪ್ರೇಮಪತ್ರ' ಎಂಬ ಇನ್ನೊಂದು ಪದ್ಯದಲ್ಲಿ ಧರ್ಮಗಳ ನಡುವಿನ ಕಂದರ ಇಬ್ಬರು ಪ್ರೇಮಿಗಳ ಪ್ರೇಮವನ್ನು ನಾಶಮಾಡುವ ಕ್ರೂರ ಸನ್ನಿವೇಶದ ನಡುವೆಯೂ-

ಉರಿಯೊಳಗೆ ಬಿರಿಯುತಿತ್ತು
ಬಿರಿದು ತಾನೇ ಬೆಳಗುತಿತ್ತು
ಪ್ರೇಮಪುಷ್ಪ ಅರಳುತಿತ್ತು

ಎಂದು ಹೇಳುವಾಗ ಅಲ್ಲಿನ ಆದಮ್ಯ ಭರವಸೆ ಹುಟ್ಟಿರುವುದು ತಾಳಿಕೆಯ ಗುಣದಿಂದಲೇ. ಇಂಥ ಭರವಸೆ ಕೆಲವೊಮ್ಮೆ ಸಮಯವಿದೆಯೇ ಪಪ್ಪಾ ಎಂಬಂಥ ಪದ್ಯಗಳಲ್ಲಿ ಮುಗ್ಧ ಆದರ್ಶವಾಗಿಯೂ ವ್ಯಕ್ತವಾಗುವುದು. ಇಲ್ಲಿ ಸಂತೋಷದಿಂದ ಬದುಕಲೂ ಸರಿಯಾಗಿ ಸಮಯ ಹೊಂದಿಸಲಾಗದೆ ಇರುವ ಪಪ್ಪನಿಗೆ ಗುಡ್ಡದಾಚೆಯ ನದಿ, ಗುಬ್ಬಿಯ ಗೂಡು-ಅದರೊಳಗಿನ ಮೊಟ್ಟೆ, ಆಕಾಶವನ್ನು ತೋರಿಸುವ ಮಗಳಿದ್ದಾಳೆ. ಅವಳು ತನ್ನ ತಂಗಿ ಅಣ್ಣಂದಿರಂತೆ ಕಂಪ್ಯೂಟರ್‌ಸೈನ್ಸ್, ಗಣಿತದ ಹಿಂದೆ ಬಿದ್ದಿಲ್ಲ. ಅಜ್ಜನ ತುಂಡು ಭೂಮಿಯನ್ನು ಉತ್ತು, ತುತ್ತು ಅನ್ನ ಗಳಿಸಬೇಕೆನ್ನುವವಳು. ಇಂಥ ಆದರ್ಶದ ಅವಳು ಪಪ್ಪನಿಗೆ ಹೇಳುವುದು ಹೀಗೆ-

ನೋಡುತ್ತಾ ......ಇರು
ನಿನ್ನ ಮೇಲೆಯೇ ಒಂದು
ಕವಿತೆ ಕಟ್ಟುವೆನು
ಕವಿತೆಯ ಬಲದಿಂದಲೇ
ಕೊನೆತನಕ ಬಾಳುವೆನು

ಮಾತೃತ್ವ, ಸಹಿಷ್ಣುತೆಗಳ ಅಂಚಿನಲ್ಲೇ ಕುಡಿಯೊಡೆಯುವ ಮನುಷ್ಯ ಸಹಜ ಪ್ರವೃತ್ತಿಗಳಾದ ಪ್ರೇಮ, ಸಾಂಗತ್ಯವನ್ನು ಕುರಿತ ಭಿನ್ನ ಬಗೆಯ ಪದ್ಯಗಳೂ ಸಂಕಲನದಲ್ಲಿವೆ.ಅದಕ್ಕೂ ಮೊದಲು ಸವಿತಾರವರ ಅತ್ಯುತ್ತಮ ಕವಿತೆಗಳಲ್ಲಿ ಒಂದಾದ ಚಂದ್ರನನ್ನು ಕರೆಯಿರಿ ಭೂಮಿಗೆ(ಆಕಾಶ ಮಲ್ಲಿಗೆ-ಸವಿತಾ ನಾಗಭೂಷಣರ ಆಯ್ದ ನೂರೊಂದು ಕವಿತೆಗಳ ಸಂಗ್ರಹ)ಕುರಿತು ಒಂದೆರಡು ಮಾತು. ಅವರ ಕವಿತೆಗಳಲ್ಲಿ ಆಕಾಶ, ಚಂದ್ರ, ನದಿ ಇತ್ಯಾದಿಗಳು ಮತ್ತೆ ಮತ್ತೆ ಕಾಣುವುದನ್ನು ನೋಡಿದರೆ ಪ್ರಕೃತಿಯೇ ಕವಿಯ ಭಾವಕೋಶದಲ್ಲಿ ವ್ಯಕ್ತವಾಗುವ ಸ್ಥಾಯೀ ಅನುಭವವಾಗಿದೆ ಅನಿಸುತ್ತದೆ. ಚಂದ್ರನನ್ನು ಕರೆಯಿರಿ... ಪದ್ಯದಲ್ಲಿ ಚಂದ್ರನೆಂದರೆ ಕನಸಿನಂತೆ; ಪ್ರೇಮ, ಹಂಬಲಗಳ ಸಾಕಾರ ರೂಪದಂತೆ; ಸಂವೇದನೆಯ ಅನೂಹ್ಯ ಪ್ರಪಂಚದ ಸಂಕೇತದಂತೆ. ಕವಿಯಂತೆ ಎಲ್ಲರೂ ಎಲ್ಲ ಕಾಲಗಳಲ್ಲಿ ಅವನನ್ನು ತಮ್ಮ ಅಂತರಂಗದ ರಂಗಕೇಂದ್ರಕ್ಕೆ ಕರೆಯುತ್ತಲೇ ಇದ್ದಾರೆ. ಬಾಲ್ಯದಲ್ಲಿ 'ಮೊಗ್ಗಿನ ಬೆರಳುಗಳನ್ನು' ಅರಳಿಸಿ ಕರೆದಂತೆ ಈಗ ಅವನನ್ನು ಕರೆಯಲಾಗುತ್ತಿಲ್ಲ. ಯಾಕೆಂದರೆ ಮೊಗ್ಗಿನ ಬೆರಳುಗಳು ಭೂಗೋಳ ವಿಜ್ಞಾನದ ಪುಸ್ತಕ ತಿರುವಿ ಒರಟಾಗಿವೆ.ಆದರೂ ಚಂದ್ರನ ಕಾತರದಿಂದ ಮನಸ್ಸು ಮುಕ್ತವಾಗಿಲ್ಲ. ಆಸೆ, ದುಃಖ, ಹರ್ಷ, ವಿಷಾದದ ಎಲೆಗಳನ್ನು ಕಳಚಿಕೊಂಡು ಧ್ಯಾನದಲ್ಲಿರುವ ಮರದಂತಿದ್ದರೂ ಮನಸ್ಸು ಚಂದ್ರನನ್ನು ಕರೆಯದೇ ಇರಲು

ಸಾಧ್ಯವೇ? ಆ ಹಂಬಲ ನಿರಂತರವಾಗಿರಲೆಂಬಂತೆ ನಿರೂಪಕಿ ತನ್ನ ಕಂದಮ್ಮಗಳನ್ನೂ ಇದಕ್ಕೆ ಪ್ರೇರೇಪಿಸುವುದನ್ನು ನೋಡಿದರೆ ಇಂಥ ನಿರೀಕ್ಷೆಗಳು ನಿಲ್ಲುವಂಥವಲ್ಲ-ನಿಲ್ಲಬೇಕಾದದ್ದೂ ಅಲ್ಲ ಎಂಬುದನ್ನು ಸೂಚಿಸುತ್ತದೆ. ಆದರೆ ಇವುಗಳ ನಡುವೆ ನಮ್ಮ ಆದ್ಯತೆಗಳ ಪ್ರಪಂಚವೂ ಇರುತ್ತದೆಯಲ್ಲ? ಅದಕ್ಕಾಗಿಯೇ ಕಂದಮ್ಮಗಳನ್ನು ಚಂದ್ರನನ್ನು ಕರೆಯಲು ಹುರಿದುಂಬಿಸುತ್ತಾ ನಿರೂಪಕಿ ಹೇಳುವುದು ಹೀಗೆ-

ನಾನು ನಾನಿರುವಂತೆಯೇ
ನೋಡುವೆ ಒಂದು ಘಳಿಗೆ.

ಬದುಕಿನ ಸಹಜ ಬಯಕೆಗಳು ಮತ್ತು ಪ್ರೇಮದ ತೀವ್ರತೆಯನ್ನು ಗೃಹಿಣಿಯ ಎಚ್ಚರದಲ್ಲಿ ನಿಭಾಯಿಸುವ ಪದ್ಯವಿದು. ಇಂಥ ಆಶಯಗಳ ಕವಯತ್ರಿಯ ಚಂದ್ರನ ಕುರಿತ ಈ ಸಂಕಲನದ ಪದ್ಯಗಳು ಬೇರೆಯ ನಿಲುವನ್ನು ಸೂಚಿಸುತ್ತವೆ. ಕಿಟಕಿಯಲ್ಲಿ ಚಂದ್ರ ಪದ್ಯದ ಹೆಸರೇ ಸೂಚಿಸುವಂತೆ ಇಲ್ಲಿನ ಚಂದ್ರ ಮನುಷ್ಯ ಜೀವದ ಹಂಬಲಗಳ ಜೀವತರಂಗವನ್ನು ಮೀಟುವ ಪ್ರೇರಣೆಯಾಗಿರದೆ 'ಕಿಟಕಿ'ಯಲ್ಲಿ ಮಾತ್ರ ಕಾಣುವ ದಾರಿಹೋಕನಂತಿದ್ದಾನೆ. ಅವನನ್ನು ಕಂಡಾಗ ಕವಯತ್ರಿಗೆ ನೆನಪಾಗುವುದು-

ಪಕ್ಕದಲ್ಲಿ ಗಂಡನಿರುವ
ತೊಟ್ಟಿಲಲ್ಲಿ ಕಂದನಿರುವ
ಅಕ್ಕ ಪಕ್ಕ ನೋಡಿಯಾರು
ನೂರು ಕತೆ ಕಟ್ಟಿಯಾರು

ಎಂಬ ತೀರಾ ಸಾಮಾನ್ಯವೆನ್ನಬಹುದಾದ ವಾಸ್ತವ ಪ್ರಪಂಚದ ಬಂಧನಗಳೇ. ನೇರವಾಗಿ ಹೇಳುವುದಾದರೆ ಮಧ್ಯಮ ವರ್ಗದ ಮೌಲ್ಯಗಳಿಗೆ ಸಿಕ್ಕು ತೀವ್ರ ಸಂವೇದನೆಗಳ ಜಗತ್ತೊಂದು ಸದ್ದಿಲ್ಲದೆ ಮುಳುಗಿಹೋಗುವುದಕ್ಕೆ ಇದೊಂದು ಉದಾಹರಣೆ. ಕವಯತ್ರಿ ತನ್ನ ಸಂವೇದನೆಗಳನ್ನು ಸಮಾಜದ ಸ್ಥಾಪಿತ ಮೌಲ್ಯಗಳಿಗಾಗಿ ಹೆಚ್ಚು ತಳಮಳವಿಲ್ಲದೆ, ಬಲಿಕೊಡುವುದನ್ನು ನೋಡಿ ಕಸಿವಿಸಿಯಾಗುತ್ತದೆ. ಹೀಗಿದ್ದರೂ ಹೇಗೆ ಪ್ರೀತಿಸದೆ ಇರಲಿ ಚಂದ್ರನನ್ನು ಪದ್ಯದಲ್ಲಿ ಚಂದ್ರನನ್ನು ಕುರಿತ ಆಕಾಂಕ್ಷೆ 'ಸಿದ್ಧಾರ್ಥನ ಪ್ರಿಯ ಮಿತ್ರ, ಮೈತ್ರಿಯ ಮಹಾ ಸೂತ್ರ' ಎಂಬ ಹೊಸ ಅರ್ಥ ಸಾಧ್ಯತೆಗಳನ್ನು ಒಳಗೊಳ್ಳುವುದರಿಂದ ಚಂದ್ರನ ಹಂಬಲಕ್ಕೆ ಹೊಸ ಆಯಾಮಗಳು ಸೇರುತ್ತವೆ. ಆದರೆ ಒಟ್ಟಾಗಿ ಅವು ಹಳಹಳಿಕೆಯ ಧಾಟಿಯನ್ನು ಮೀರುವುದಿಲ್ಲ.

೨

ಇನ್ನು ಈ ಪದ್ಯಗಳು ಸೂಚಿಸುವ ನಿಲುವುಗಳನ್ನು ಸ್ತ್ರೀವಾದಿ ಚಿಂತನೆಯ ನೆಲೆಯಲ್ಲಿ, ಅವು ನೇರವಾಗಿ ಇಂಥ ವರ್ಗೀಕೃತ ಪ್ರಕಾರಕ್ಕೆ ಸೇರದಿದ್ದರೂ, ಚರ್ಚಿಸಬಹುದು. ಮೇರಿ ಎಲ್‌ಮನ್ ಎಂಬ ಸ್ತ್ರೀವಾದಿ ಚಿಂತಕಿಯ ಪ್ರಕಾರ ಪುರುಷ ಲೇಖಕ ಮತ್ತು ಮಹಿಳಾ ಲೇಖಕಿಯರ ಅಭಿವ್ಯಕ್ತಿಯ ಸ್ವರೂಪದಲ್ಲಿ ಹಲವು ಭಿನ್ನತೆಗಳಿವೆ. ಪುರುಷ ಬರಹಗಾರರ ಬರಹಗಳಲ್ಲಿ ಆತ್ಮವಿಶ್ವಾಸ-ಸಮರ್ಥನೆಯ ಧಾಟಿ ಬಲವಾಗಿ ಕಂಡರೆ, ತೀವ್ರ ಸಂವೇದನಾಶೀಲತೆಯೇ ಸ್ತ್ರೀಬರಹಗಳ ಮುಖ್ಯ ಲಕ್ಷಣ ಎಂದು ಆಕೆ ಗುರ್ತಿಸುತ್ತಾಳೆ. ಅದು ಸವಿತಾ ಅವರ ಬರಹಗಳ ಲಕ್ಷಣವೂ ಹೌದು. ಈ

ಸಂವೇದನಾಶೀಲತೆಯೇ ಅವರ ಕಾವ್ಯಕ್ಕೆ ಘೋಷಿತ ಸ್ತ್ರೀವಾದಿ ಕಾಳಜಿಗಳಿಗಿಂತ ಭಿನ್ನ ಆಯಾಮವನ್ನು ತಂದುಕೊಟ್ಟಿದೆ. ಇದು ಸಹನೆ,ಮಾರ್ದವತೆಗಳಿಂದ ಇನ್ನಷ್ಟು ತೀವ್ರಗೊಂಡು ಸ್ತ್ರೀಯ ವ್ಯಕ್ತಿತ್ವ-ಸ್ವಭಾವದ ಬಗ್ಗೆಯೇ ಒಂದು stereotype ಅನ್ನು ಬೆಳೆಸುವುದನ್ನು ಸಹ ನಾವಿಲ್ಲಿ ನೋಡಬಹುದು.

ಶೋಷಿತ ಸಮುದಾಯಗಳಾದ ದಲಿತ ಹಾಗೂ ಸ್ತ್ರೀಯರ ಶಕ್ತಿ ಆಳುವ ವರ್ಗಗಳ ವಿರೋಧಕ್ಕೆ ಸೀಮಿತಗೊಂಡಲ್ಲಿ, ಆಳುವ ವರ್ಗ-ಶೋಷಿತರ ಅಧಿಕಾರ ಸಂಬಂಧಗಳ ಸೀಮಿತ ಪರಿಧಿಯಲ್ಲಿ ಮಾತ್ರ ಶೋಷಿತರ ಶಕ್ತಿಯ ನಿರ್ವಚನ ಸಾಧ್ಯವಾಗುತ್ತದೆ. ಇದರಿಂದ ಶೋಷಿತರ ಅಂತಃವಿಸ್ತಾರದ ಕಲ್ಪನೆಯೇ ಸೀಮಿತವಾಗುತ್ತದೆ ಎಂದು ಡಿ.ಆರ್.ನಾಗರಾಜ್ ಅಭಿಪ್ರಾಯಪಡುತ್ತಾರೆ.(ಸಾಹಿತ್ಯ ಕಥನ ಪು.೧೪೩). ಈ ಹಿನ್ನೆಲೆಯಲ್ಲಿ ಸವಿತಾ ಅವರ ಕಾವ್ಯ ಘೋಷಿತ ಸ್ತ್ರೀವಾದಿ ಸಿದ್ಧಾಂತಗಳ ಇಕ್ಕಟ್ಟಿಗೆ ಸಿಕ್ಕಿಬೀಳದೆ ಭಿನ್ನ ಸಂವೇದನಾಶೀಲ ವಿಸ್ತಾರವನ್ನು ಪಡೆದುಕೊಂಡರೂ ಅದರಿಂದಾಗುವ ಸಮಸ್ಯೆಗಳಿಂದ ದೂರವಾಗಿಲ್ಲ.

ಸ್ತ್ರೀವಾದಿ ಚಿಂತನೆಯಲ್ಲಿ ಮಹಿಳೆ ತನ್ನನ್ನು ತಾನಿರುವಂತೆಯೇ ಚಿತ್ರಿಸಬೇಕೋ ಇಲ್ಲವೋ ಎಂಬ ಬಗ್ಗೆ ಮತ್ತು ಅವಳ ಮಾತೃತ್ವ, ಕರುಣೆಯ ಗುಣಗಳ ಬಗ್ಗೆ ವಿಪುಲವಾದ ಚರ್ಚೆ ನಡೆದಿದೆ ಎಂದು ಆರಂಭದಲ್ಲೇ ಸೂಚಿಸಿದೆ. ಸಿಮೋನ್ ದಿ ಬೋವಾ ತನ್ನ ದಿ ಸೆಕೆಂಡ್ ಸೆಕ್ಸ್(೧೯೪೯) ಪುಸ್ತಕದಲ್ಲಿ ಲೇಖಕಿಯರ ಅಭಿವ್ಯಕ್ತಿಯ ಸಮಸ್ಯೆಗಳನ್ನು ಚರ್ಚಿಸುವಾಗ ಮಹಿಳೆಯರು ಅಭಿವ್ಯಕ್ತಿಯನ್ನು 'ತಮ್ಮನ್ನು ತಾವಿರುವಂತೆಯೇ ಪ್ರದರ್ಶಿಸಿಕೊಳ್ಳುವುದು' ಎಂದು ಭಾವಿಸಿದ್ದಾರೆ ಎನ್ನುತ್ತಾಳೆ. ಅಭಿವ್ಯಕ್ತಿಯ ಕ್ರಮ ತಮ್ಮ ಕೂದಲು, ಬಣ್ಣ ರೂಪಗಳ ವಿಸ್ತರಣೆಯಂಬಂತೆ ಕಾಣುವುದರಿಂದ ಅನೇಕ ಸಲ ಹೆಣ್ಣಿಗೆ ತನಗೆ ತಾನೇ ಆಸಕ್ತಿಯ ವಿಷಯವಾಗಿಬಿಡುವ ಸಾಧ್ಯತೆ ಇದೆ ಎನ್ನುತ್ತಾಳೆ. ಹೀಗಾಗಿ ಬರಹಗಾರ್ತಿ ಸ್ವಪ್ರೇಮದ ಬಲೆಯಲ್ಲಿ ಸಿಕ್ಕಿಕೊಂಡು ಸಮಾಜವನ್ನು ಯಥಾಸ್ಥಿತಿಯಲ್ಲಿ ಒಪ್ಪುವ ಮನಸ್ಥಿತಿಯವಳಾಗಿಬಿಡುತ್ತಾಳೆ. ಸಿಮೋನ್ ಮಧ್ಯಮ ವರ್ಗದ ಕವಯತ್ರಿಯರ ಬಗ್ಗೆ ಬರೆಯುತ್ತಾ ಅವರು ಸಂಕುಚಿತ ಮನೋಧರ್ಮವನ್ನು, ನಾಗರಿಕತೆಯ ಪೊಳ್ಳು ನಯವಂತಿಕೆಯನ್ನು ಕಾವ್ಯದ ಬಣ್ಣಗಳಲ್ಲಿ ಅದ್ದಿ ಅಲಂಕರಿಸುತ್ತಾರೆ ಎನ್ನುತ್ತಾಳೆ. ಮಧ್ಯಮವರ್ಗದ ಸುಖೀ ಆದರ್ಶಗಳಾದ ಹಳೆಯ ಮನೆಗಳು, ಕೊಟ್ಟಿಗೆ ದೊಡ್ಡಿಗಳು, ಅಡುಗೆಮನೆಗಳು, ಪುಂಡಮಕ್ಕಳು, ಪಾರ್ಟಿ-ಬಾಲ್‌ಗಳು, ಶುಚಿತ್ವ, ಶೃಂಗಾರಸಾಧನಗಳು, ಹಬ್ಬಹರಿದಿನಗಳು, ದಾಂಪತ್ಯದ ಮಹಾಸಂತೋಷಗಳು, ವಿರಸ-ಭಕ್ತಿ ತ್ಯಾಗದ ಆದರ್ಶಗಳು ಇತ್ಯಾದಿಗಳನ್ನು ಹಾಡಿ ಹೊಗಳುವುದು ಮಧ್ಯಮವರ್ಗದ ಕವಯತ್ರಿಯರೇ ಎಂದು ಆಕ್ಷೇಪಿಸುತ್ತಾಳೆ.(ಪು.೭೧೫-೭೨೦). ಇಂಥ ಸುಖಾನುಭವಗಳನ್ನು ಅಭಿವ್ಯಕ್ತಿಸುವವರು ಪ್ರಪಂಚವನ್ನು ಅರ್ಥಮಾಡಿಕೊಳ್ಳುವ ಜೀವನದೃಷ್ಟಿಯನ್ನು ಕಿಂಚಿತ್ತೂ ಸಮೃದ್ಧಿಗೊಳಿಸಿಲ್ಲ. (ಕನ್ನಡದಲ್ಲಿ ಸಿಮೋನ್ ದಿ ಬೋವಾ ವಿಚಾರಗಳ ಚರ್ಚೆಗೆ ಸುಮಿತ್ರಾ ಬಾಯಿಯವರ ವಿಚಯ ಮತ್ತು ಸಿ.ಎನ್.ರಾಮಚಂದ್ರನ್‌ರ ಆಶಯ-ಆಕೃತಿ ಕೃತಿಗಳ ಲೇಖನಗಳನ್ನು ನೋಡಬಹುದು). ಆದ್ದರಿಂದಲೇ ಅವರು ತಮ್ಮ ಬರಹಗಳಲ್ಲಿ ಸುತ್ತಲಿನ ಜಗತ್ತನ್ನು ಜಗ್ಗಿಸಿ ಪ್ರಶ್ನಿಸುವುದಿಲ್ಲ. ಅದರ ಒಳವಿರೋಧಗಳನ್ನು ಬಯಲಿಗೆಳೆಯುವುದಿಲ್ಲ ಎಂದು ಸಿಮೋನ್ ಸೂಚಿಸುತ್ತಾಳೆ.

ಹಾಗೆಯೇ ಸ್ತ್ರೀವಾದಿ ಚಿಂತನೆಯ ಮುಖ್ಯ ಕವಲಾದ ಸಾಂಸ್ಕೃತಿಕ ಸ್ತ್ರೀವಾದ(Cultural

Feminism)ದಲ್ಲಿ ಹೆಣ್ಣಿನ ಅಂತಸ್ಸತ್ವವನ್ನು ನಿರ್ಧರಿಸುವ ಅಂಶಗಳೆನ್ನಲಾಗುವ ಲೈಂಗಿಕತೆ, ಋತುಚಕ್ರ, ಸ್ತನ್ಯಪಾನ, ಮಾತೃತ್ವ, ಸಂರಕ್ಷಕ ಪ್ರವೃತ್ತಿ, ಸಂತಾನೋತ್ಪತ್ತಿ ಶಕ್ತಿ ಇತ್ಯಾದಿಗಳನ್ನು ಮಹತ್ವಪೂರ್ಣವೆಂದು ನಂಬಲಾಗಿದೆ. ಮೇಲೆ ಸೂಚಿಸಿದ ಎಲ್ಲ ಗುಣಗಳಿಗೆ ಮೂಲ ನೆಲೆಯಾದ ಕುಟುಂಬ ವ್ಯವಸ್ಥೆಯೇ ಮೂಲಭೂತವಾಗಿ ಸ್ತ್ರೀಶೋಷಣೆಯ ಕೇಂದ್ರಸ್ಥಾನ ಎಂದು ನಂಬುವ ರ್‍ಯಾಡಿಕಲ್ ಸ್ತ್ರೀವಾದಿಗಳ ನಿಲುವಿಗಿಂತ ಈ ವಾದ ಭಿನ್ನವಾದುದಾಗಿದೆ. ಸಾರಾಂಶದಲ್ಲಿ ಹೇಳುವುದಾದರೆ ಸಾಂಸ್ಕೃತಿಕ ಸ್ತ್ರೀವಾದಿಗಳು ಸ್ವಭಾವ-ಆಚರಣೆಗಳಿಂದ ಬಂದೊದಗುವ ಎಲ್ಲ ಸ್ತ್ರೀ ಗುಣಗಳನ್ನು ವೈಭವೀಕರಿಸುತ್ತಾರೆ. ಇದರಿಂದ ಆಕೆಯ ಒಟ್ಟು ವ್ಯಕ್ತಿತ್ವ ನಿರ್ಮಾಣ ಮೇಲಿನ ಗುಣಸ್ವಭಾವಗಳನ್ನು ಅವಲಂಬಿಸಿದಂತಾಗುತ್ತದೆ. ಹೆಣ್ಣನ್ನು ಹೆಣ್ಣಾಗಿ ಮಾತ್ರ ಚಿತ್ರಿಸುವುದರ ಸಮಸ್ಯೆಯೆಂದರೆ ಅವಳನ್ನು ನಿರ್ದಿಷ್ಟ ಜೈವಿಕ-ಸಾಂಸ್ಕೃತಿಕ ಸ್ವಭಾವಗಳ ಇಕ್ಕಟ್ಟಿನಲ್ಲಿ ಸಿಕ್ಕಿಸಿ ಒಟ್ಟು ವ್ಯಕ್ತಿತ್ವವನ್ನು ಮಿತಿಗೊಳಿಸಿದಂತಾಗುತ್ತದೆ.

ಈ ಹಿನ್ನೆಲೆಯಲ್ಲಿ ಸವಿತಾ ಅವರ ಪದ್ಯಗಳನ್ನು ವಿಶ್ಲೇಷಿಸಿದರೆ ಭಿನ್ನ ಆಯಾಮವೊಂದು ಕಾಣುತ್ತದೆ.ಅವರ ಕಾವ್ಯದಲ್ಲಿ ಕಾರುಣ್ಯಪೂರ್ಣ ಭಾವವೊಂದು ಸದಾ ಮಿಡಿಯುತ್ತದೆಯೆಂದು ಲಕ್ಷ್ಮೀಶ ತೋಳ್ಪಾಡಿ ಸಹ ಗುರುತಿಸುತ್ತಾರೆ. (ಆಕಾಶ ಮಲ್ಲಿಗೆ ಸಂಗ್ರಹದ ಮುನ್ನುಡಿ).ಆದರೆ ಸಮಸ್ಯೆಯಿರುವುದು ಇದು ಅನುಭವದ ಸಂಕೀರ್ಣತೆಯನ್ನು ಒರೆಸಿಹಾಕುವುದರಲ್ಲಿ. ಮೊದಲ ಪದ್ಯ 'ತಂಗಿ ಹುಟ್ಟಿದಳು'ನಲ್ಲಿ ಹೆಣ್ಣು ಹುಟ್ಟಿದ ಕಾರಣಕ್ಕೆ ಉಂಟಾಗಿರುವ ದಿಗಿಲನ್ನು ವಾತ್ಸಲ್ಯದ ಮೂಲಕ ಎದುರಿಸುವುದನ್ನು ಕಂಡರೂ ಪದ್ಯದ ಹಿಂದಿನ ಜೀವವಿರೋಧಿ ಸ್ಥಿತಿಯನ್ನು ನಿರುಮ್ಮಳವಾಗಿ ಅಭಿವ್ಯಕ್ತಿಸುವುದು ಅನೇಕ ಪ್ರಶ್ನೆಗಳಿಗೆ ಎಡೆಮಾಡಿಕೊಡುತ್ತದೆ. ಹಾಗಂತ ನಿರೂಪಕಿ ಹೆಣ್ಣಿನ ಅಸ್ತಿತ್ವವನ್ನು ನಿರಾಕರಿಸುವ ಸ್ಥಿತಿಯನ್ನು ಚೀರುತ್ತ ಪ್ರತಿಭಟಿಸಬೇಕಾಗಿಲ್ಲ. ಕವಿತೆಯ ಸಂಯಮ ಯಥಾಸ್ಥಿತಿಯನ್ನು ಅನುಮೋದಿಸುತ್ತದೆಯೆ ಎಂಬುದು ಮುಖ್ಯ ಪ್ರಶ್ನೆ. 'ಕೊಂಡ ಹಾಯುವಳು' ಪದ್ಯದಲ್ಲಿ ಗಂಡನ ಶೋಷಣೆಯಿಂದ ಬೆಂದ ಲಕುಮಿ ಅಪಾರ ಸಹನೆಯಿಂದ ಮತ್ತೊಮ್ಮೆ ಕೊಂಡ ಹಾಯಲು ಸಿದ್ಧವಾಗುವುದನ್ನು ನೋಡಿದರೂ ಇವೇ ಪ್ರಶ್ನೆಗಳು ಕಾಡುತ್ತವೆ. ಸುಧೀರ್ ಕಾಕರ್ ಅವರು Indian Childhood(೧೯೭೯)ಎಂಬ ಪುಸ್ತಕದಲ್ಲಿ ಭಾರತದಲ್ಲಿ ಮಾತೃತ್ವ, ತಾಯಿ-ಮಕ್ಕಳ ಸಂಬಂಧಗಳ ಪರಿಕಲ್ಪನೆಗಳು ಎಷ್ಟು ಬಲವಾಗಿವೆ ಎಂದರೆ ಈ ಗುಣಗಳೇ ಹೆಣ್ಣಿನ ವ್ಯಕ್ತಿತ್ವವನ್ನು ನಿರ್ಮಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತವೆ. ಇದರಿಂದಲೇ ಅವಳ ವ್ಯಕ್ತಿತ್ವದ ಆದರ್ಶೀಕರಣ ಉಂಟಾಗಿದೆ ಎನ್ನುತ್ತಾರೆ. ತಾಯಿ-ಮಕ್ಕಳ ಸಂಬಂಧದ Archetype ಬಲವಾಗಿರುವುದರಿಂದಲೇ ನಮ್ಮ ಸಂಸ್ಕೃತಿಯ ಸಂದರ್ಭದಲ್ಲಿ ಸ್ತ್ರೀ ಪುರುಷರ ಸಮಾನತೆಯ ಕಲ್ಪನೆ ಸಾಕಾರಗೊಳ್ಳಲು ಸಾಧ್ಯವಿಲ್ಲ, ಹೀಗಾಗಿಯೇ ಮಗುವಿನ ಸ್ವತಂತ್ರ ವ್ಯಕ್ತಿತ್ವ ನಿರ್ಮಾಣ ಸಮಸ್ಯಾತ್ಮಕವಾಗಿ ಪರಿಣಮಿಸುತ್ತದೆ. ಆದಕ್ಕಾಗಿ ಇಲ್ಲಿ ಸ್ತ್ರೀ ತನ್ನ ಗೆಳೆಯ-ಗೆಳತಿಯರೊಂದಿಗೆ ಸಮಾನತೆಗಾಗಿ ಒತ್ತಾಯಿಸಬಹುದೇ ಹೊರತು, ಕುಟುಂಬದ ಸಂದರ್ಭದಲ್ಲಿ ಸಾಧ್ಯವಿಲ್ಲ ಎನ್ನುತ್ತಾರೆ. ವ್ಯವಸ್ಥೆಯ ಪಲ್ಲಟಕ್ಕೆ ಸವಿತಾ ಅವರ ಮಾತೃತ್ವ ತತ್ಕಾಲದ ಉಪಶಮನ ನೀಡಬಹುದೇ ಹೊರತು ಸಮಗ್ರ ಪರಿವರ್ತನೆಗೆ ಸಹಾಯಕವಾಗುವುದಿಲ್ಲ.

ಹಾಗೆಯೇ ಆಫ್ಘಾನಿಸ್ತಾನದ ಬುದ್ಧ ಪ್ರತಿಮೆಗಳ ನಾಶದ ಕುರಿತ ಪದ್ಯಗಳೂ ಮೇಲಿನ ಸಮಸ್ಯೆಯಿಂದ ಮುಕ್ತವಾಗಿಲ್ಲ. ಪದ್ಯದ ಹಿಂದಿರುವ ತಟಸ್ಥವೆನ್ನಬಹುದಾದ ಸಂಯಮ ಅಮಾನುಷ ಪ್ರವೃತ್ತಿಯೊಂದನ್ನು ನಿರೂಪಿಸುವಾಗ ಎಲ್ಲಿ ನಿಂತು ಮಾತಾಡುತ್ತಿದೆ ಎಂಬುದು ಮುಖ್ಯವಾಗುತ್ತದೆ.

ಹಾಗೇ 'ಬಾಳಸಂಜೆ' ಪದ್ಯದ ಮಕ್ಕಳ ಸ್ವಾರ್ಥ ನಿರೂಪಣೆ, 'ಮಹಮದನ ಪ್ರೇಮ ಪತ್ರ'ದಲ್ಲಿನ ತಾಳಿಕೆಯ ಗುಣವನ್ನು ಗಮನಿಸಿದರೆ ಸಹನೆ ಹಾಗೂ ಮಾತೃತ್ವದ ಮೌಲ್ಯಗಳು ಒಂದು ಜೀವನದೃಷ್ಟಿಯ ರೂಪದಲ್ಲಿ ಪ್ರಕಟವಾಗಿವೆಯೆನ್ನಬಹುದು. ಆದರೆ ಅವು ಅಂತಿಮವಾಗಿ ಪುರುಷ ಪ್ರಧಾನ ವ್ಯವಸ್ಥೆ ತನ್ನ ಅನುಕೂಲಕ್ಕೆ ರೂಪಿಸಿಕೊಂಡ ಮೌಲ್ಯಗಳೆಂಬುದನ್ನು ನಾವು ಮರೆಯುವಂತಿಲ್ಲ. ಇಂಥ ಮೌಲ್ಯಗಳಿಂದ ಕಾವ್ಯದ ಅನುಭವ ಪ್ರಪಂಚ ತನ್ನೆಲ್ಲ ಸಂಕೀರ್ಣತೆಯನ್ನು ಕಳೆದುಕೊಳ್ಳುತ್ತದೆ. ಆದ್ದರಿಂದ ಸವಿತಾ ಅವರ ಬಹುಪಾಲು ಪದ್ಯಗಳು ಪ್ರಾಮಾಣಿಕವಾಗಿದ್ದೂ ಒಟ್ಟಾಗಿ ಸರಳ ನಿರೂಪಣೆಗಳಂತೆ ಕಂಡರೆ ಆಶ್ಚರ್ಯವಿಲ್ಲ.

ಮೇಲಾಗಿ ಈ ಮೌಲ್ಯಗಳು ಸ್ತ್ರೀವ್ಯಕ್ತಿತ್ವದ ಬಗ್ಗೆ ಸಿದ್ಧಮಾದರಿಯೊಂದನ್ನು ಕಟ್ಟಿಕೊಡುವ ಅಪಾಯವೂ ಇದೆ. ಸಾಂಸ್ಕೃತಿಕ ಸ್ತ್ರೀವಾದಿಗಳ ಸಮಸ್ಯೆಯೆಂದರೆ ಅವರು ಆರಾಧಿಸುವ ಮೌಲ್ಯಗಳು ಸ್ತ್ರೀಯರಲ್ಲಿ ಮಾತ್ರ ಇರಬಲ್ಲವೆಂಬ ಸೀಮಿತ ನಂಬಿಕೆಯನ್ನು ಬೆಳೆಸುತ್ತವೆ. ಇಂಥ ಗುಣಗಳು ಸ್ತ್ರೀಗೆ ಮಾತ್ರ ಸೀಮಿತವಾಗಿರದೆ ಸ್ತ್ರೀಪುರುಷರಿಬ್ಬರಲ್ಲೂ ಇರಲು ಸಾಧ್ಯ. ಕೆಲವು ನಿರ್ದಿಷ್ಟ ಗುಣಸ್ವಭಾವಗಳನ್ನು ನಿರ್ದಿಷ್ಟ ಲಿಂಗಪ್ರಭೇದಕ್ಕೆ ಸೀಮಿತಗೊಳಿಸುವ essentialist ಧೋರಣೆಯಿಂದ ಸ್ತ್ರೀ-ಪುರುಷರಿಬ್ಬರಲ್ಲೂ ಇವೆಲ್ಲ ಗುಣಸ್ವಭಾವಗಳನ್ನು ಹೊಂದಿದ ಅಥವಾ ಹೊರತುಪಡಿಸಿದ ಸಮಗ್ರ ವ್ಯಕ್ತಿತ್ವವೊಂದು ಇರುತ್ತದೆ ಎಂಬುದು ಅರಿವಿಗೆ ಬರುವುದಿಲ್ಲ. ಸ್ತ್ರೀಯ ಗುಣಗಳು ಸ್ತ್ರೀಯರಲ್ಲಿ ಮತ್ತು ಪುರುಷ ಗುಣಗಳು ಪುರುಷರಲ್ಲಿ ಮಾತ್ರ ಇರುತ್ತವೆ ಎಂದು ನಂಬಿಸುವುದು ಪುರುಷ ಪ್ರಧಾನ ವ್ಯವಸ್ಥೆಯ ಮೂಲತತ್ವಗಳಲ್ಲೊಂದು ಎಂಬುದನ್ನು ಮತ್ತೆ ಇಲ್ಲಿ ನೆನಪಿಸುವ ಅಗತ್ಯವಿಲ್ಲ.

ಸಹನೆಯೇ ಪದ್ಯಗಳ ಪೋಷಕ ಶಕ್ತಿಯಾಗಿರುವುದರಿಂದ ಬದುಕಿನ ವಿಸಂಗತಿಗಳನ್ನು ಚಿತ್ರಿಸುವಾಗ ಕನಿಷ್ಠ ತಲ್ಲಣವೂ ಕಾಣದೆ ಎಲ್ಲವುಗಳಿಗೆ ತಟಸ್ಥ ಅನುಮೋದನೆ ದೊರೆತಿದೆಯೇ ಎಂಬ ಪ್ರಶ್ನೆ ಕಾಡುತ್ತದೆ. ಹಾಗಾಗಿ 'ಜಾಗತೀಕರಣದ ಹೊಸ್ತಿಲಲ್ಲಿ ನಿಂತ ರೈತನಿಗೊಂದು ಕಿವಿಮಾತು' ಪದ್ಯದಲ್ಲಿನ ವ್ಯಂಗ್ಯ ಆತ್ಮಹತ್ಯೆಯಂಥ ಸರ್ವನಾಶದ ಸ್ಥಿತಿಯನ್ನು ತಲುಪಿರುವ ರೈತನ ಹತಾಶೆಯನ್ನು ಹೆಚ್ಚಿಸುವಂತಿದೆಯೇ ವಿನಾ ಕಡಿಮೆಮಾಡುವಂತಿಲ್ಲ. 'ಮುಂದೆ ಸಾಗುವ ಮುನ್ನ' ಪದ್ಯದಲ್ಲೂ-

ಹಿಟ್ಟು ರೊಟ್ಟಿಯ ಸುಡುತ
ಹರಕೆ ಮುಡುಪುಗಳನಿಡುತ
ತಿಳಿದ ಹಾಡುಗಳ ಹಾಡಿ

ನೂರು ದೇವರ ಕಾಡಿ ಹೇಗೋ ಜೀವನ ಸಾಗಿಸಿದ ತನ್ನನ್ನು ಸಹಾನುಭೂತಿಯಿಂದ ಕಾಣುವಂತೆ ತಾಯಿ ಮಗಳನ್ನು ಕೋರುತ್ತಿರುವ ಚಿತ್ರವಿದೆ. ಹೀಗಾಗಿಯೇ 'ಕಿಟಕಿಯಲ್ಲಿ ಚಂದ್ರ'ದಂಥ ಪದ್ಯ ಎಲ್ಲ ಬಗೆಯ ಜೀವಪರ ಹಂಬಲಗಳನ್ನು ಬದಿಗಿರಿಸಿ ಮಧ್ಯಮವರ್ಗದ ಹೆಣ್ಣಿನ ಇಕ್ಕಟ್ಟುಗಳನ್ನೇ ಸ್ತುತಿಸುವಂತಿದೆ. ಇದರಿಂದ ಬದುಕಿನ ನಾನಾ ಸಂಕಷ್ಟಗಳಿಗೆ ಕಾರಣವಾಗಿರುವ ವ್ಯವಸ್ಥೆಯನ್ನು ಕುರಿತು ಕನಿಷ್ಠ ಆತ್ಮಾವಲೋಕನ ಸಾಧ್ಯವಾಗುವ ಪ್ರಶ್ನೆಗಳನ್ನು ಕೇಳಲು ಪದ್ಯಗಳು ಪ್ರೇರೇಪಿಸುವುದಿಲ್ಲ. ಇದನ್ನು ಸ್ತ್ರೀವಾದಿ ಚೌಕಟ್ಟಿನಲ್ಲಿ ಹೇಳುವುದಾದರೆ ಸಮಾಜದ ಪ್ರಜ್ಞೆಯನ್ನು ಕಲಕುವಂಥ ಪ್ರಶ್ನೆಗಳನ್ನು ಕೇಳದಿದ್ದರೆ ಬರಹದ ಮೂಲಕ ಸಮಾನತೆ-ನ್ಯಾಯೋಚಿತ ಅವಕಾಶಗಳನ್ನು ಪಡೆಯಲು ಯತ್ನಿಸುತ್ತಿರುವ ಮಹಿಳಾ ಬರಹಗಾರರಿಗೆ ಯಾವ ಫಲಿತಾಂಶವೂ ಸಿಕ್ಕಲಾರದು. ಪ್ರಶ್ನೆ ಕೇಳದವರಿಗೆ ಪಾಲುದಾರಿಕೆ ಇಲ್ಲ. ನ್ಯಾಯ ಸಿಕ್ಕುವುದು ಸುಲಭವಲ್ಲ.


ಆದರೂ ಸಂಕಲನದ 'ಜಾತ್ರೆಯಲ್ಲಿ ಶಿವ' ಪದ್ಯ ಈ ಮಿತಿಗಳನ್ನು ಮೀರುವಂತಿದೆ. ಜಾತ್ರೆಯಲ್ಲಿನ ಶಿವ ವೇಷಧಾರಿ ಎಲ್ಲ ಸಾಮಾನ್ಯರಂತೆ ಪುಗ್ಗೆಯಂಗಡಿಗೆ, ಕೆಂಪುನೀರಿನ ಶರಬತ್ತಿಗೆ, ಗಿಲೀಟಿನ ಒಡವೆಯಂಗಡಿಗೆ ಎಡತಾಕಿದ್ದಾನೆ. ಪದ್ಯದ ನಿಜವಾದ ವಿಶೇಷತೆ ಇರುವುದು ಹಸಿದ ಮಗುವಿಗೆ, ಕಾಯಿಲೆಯ ಹೆಂಡತಿಗೆ ಒದ್ದಾಡುವ ಶಿವ ವೇಷಧಾರಿಯ ಪರಿತಾಪವನ್ನು ಚಿತ್ರಿಸುವುದರಲ್ಲಿ.

ಗಣಪ ಹಸಿದಿದ್ದಾನೆ
ಗಿರಿಜೆಗೆ ಕಾಯಿಲೆ
ಹೆಂಡತಿ ಮಕ್ಕಳಿಗಾಗಿ
ಶಿವನಲ್ಲದೆ ಭವಿ ಅಳುವನೆ

ಎಂಬ ಮಾತುಗಳಲ್ಲಿ ಶಿವ ಗಂಡು ಹೆಣ್ಣಿನ ಸೀಮಿತ ವರ್ಗೀಕರಣವನ್ನು ಮೀರಿದ ಅಂತಃಕರಣ, ಪ್ರೀತಿಯನ್ನು ಹೊಂದಿದವನು ಎಂಬ ಅರ್ಥ ವ್ಯಕ್ತವಾಗುತ್ತದೆ. ಶಿವನ ಕಲ್ಪನೆಯೇ ಗಂಡು-ಹೆಣ್ಣಿನ ವರ್ಗೀಕರಣವನ್ನು ಮೀರಿದ ಅರ್ಧನಾರೀಶ್ವರನನ್ನು ಒಳಗೊಂಡಿರುವಂಥದ್ದು. ಎಷ್ಟಾದರೂ ಅಂತಃಕರಣ, ವಾತ್ಸಲ್ಯದಂಥ ಗುಣಸ್ವಭಾವಗಳು ಲಿಂಗಕಾಲ ದೇಶಗಳನ್ನು ಮೀರಿದ ಆದಿಮ ಪ್ರವೃತ್ತಿಯ ಭಾಗಗಳೇ ಆಗಿರುತ್ತವೆ ಎಂಬುದನ್ನು ಪದ್ಯ ಧ್ವನಿಸಲು ಯತ್ನಿಸುತ್ತಿರುವುದರಿಂದ ಉಳಿದ ಕವನಗಳಿಗಿಂತ ವಿಶಿಷ್ಟ ಸ್ಥಾನ ಈ ಪದ್ಯಕ್ಕಿದೆ.ಅದು ಒಂದು ಬಗೆಯಲ್ಲಿ ಕವಯತ್ರಿ ತನ್ನೆಲ್ಲ ಮಿತಿಗಳನ್ನು ಮೀರುವ ಸೂಚನೆಯನ್ನೂ ನೀಡುತ್ತದೆ.

ಇಂಗ್ಲಿಷ್ ಅಧ್ಯಾಪಕ,ಸಹ್ಯಾದ್ರಿ ಕಲಾ ಕಾಲೇಜು
ಎಸ್.ಎಲ್.-೮, ಸ್ಯಾಂಡಲ್ ಕಾರ್ಖಾನೆ ಮನೆಗಳು
ವಿದ್ಯಾನಗರ,ಶಿವಮೊಗ್ಗ-೫೭೭೨೦೩
sirajahmeds@gmail.com

ಗ್ರಂಥ ಋಣ: ದಿ ಸೆಕೆಂಡ್ ಸೆಕ್ಸ್ ; ಸಿಮೊನ್ ದಿ ಬೋವಾ
ವಿಚಯ: ಬಿ.ಎನ್.ಸುಮಿತ್ರಾ ಬಾಯಿ
ಆಶಯ-ಆಕೃತಿ ; ಸಿ.ಎನ್.ರಾಮಚಂದ್ರನ್
ಇಂಡಿಯನ್ ಚೈಲ್ಡ್‌ಹುಡ್: ಸುಧೀರ್ ಕಾಕರ್
ಸಾಹಿತ್ಯ ಕಥನ : ಡಿ.ಆರ್.ನಾಗರಾಜ್.



ಕಾಡು ಲಿಲ್ಲಿಯ ಹೂವುಗಳು ಕೆಲವು ತಾತ್ವಿಕ ಟಿಪ್ಪಣಿಗಳು

◆ ಡಾ. ಬಿ.ಆರ್. ಕವಿತಾ ರೈ

'ಕಾಡು ಲಿಲ್ಲಿಯ ಹೂವುಗಳು' ಬಂದ ಸಂದರ್ಭ, ಸಮಕಾಲೀನ ಸಮಾಜ ಜೀವನವನ್ನೂ, ಕಾವ್ಯವನ್ನೂ ಮುಖಾಮುಖಿಗೊಳಿಸಿ ನೋಡಬೇಕಾದ ಒತ್ತಡವೊಂದನ್ನು ನಿರ್ಮಿಸಿದೆ. ಜಾಗತೀಕರಣದ ಈ ಸಂದರ್ಭವೆನ್ನುವುದು ನಿದ್ರೆಯನ್ನು, ಕನಸನ್ನು ಕಾಣಲಾರದ ಮ್ಯಾಕ್‌ಬೆತ್‌ನ ಸ್ಥಿತಿ. ಶೇಕ್ಸ್‌ಪಿಯರ್ ನಿದ್ರೆ ಮತ್ತು ಕನಸು ಎರಡೂ ಸಾಧ್ಯವಾಗದ ಮ್ಯಾಕ್‌ಬೆತ್‌ನನ್ನು ಕಡು ಪಾಪಿಯ ಹಾಗೆ ಚಿತ್ರಿಸುತ್ತಾನೆ. ಕವಿತೆ ಎನ್ನುವುದು ಈ ಸ್ಥಿತಿಯನ್ನು ಆಧುನಿಕ ಯಾಂತ್ರಿಕ ಲೋಕವನ್ನು ಮರೆಯಬೇಕೆನ್ನುವ ಕನಸು. ಬೆಳಕಿಲ್ಲದ ದಾರಿಯಲ್ಲಿ ಹೋಗಬಹುದು, ಆದರೆ ಕನಸುಗಳಿಲ್ಲದ ದಾರಿಯಲ್ಲಿ ಹೋಗಲಾಗದು. ಇದೇ ಕವಿಯ ಬಾಳ ರಹಸ್ಯ. ಜಾಗತೀಕರಣದ ಪ್ರಸ್ತುತ ಕಾವ್ಯ ಸಂದರ್ಭವು ಸೃಜನಶೀಲ ಬಿಕ್ಕಟ್ಟಿನ ಸಂದರ್ಭವೂ ಹೌದು. ಇಲ್ಲಿ ಯಾವುದೇ ಬರಹಗಾರ ಸೃಜನಶೀಲತೆಯ ಮೂಲದ್ರವ್ಯವನ್ನು ಕಾಪಾಡಲು ಹೊಸ ಬಗೆಯ ಭಾಷೆ, ನುಡಿಗಟ್ಟು, ರೂಪಕ, ಸಂವೇದನಾ ಕ್ರಮಗಳನ್ನು ಶೋಧಿಸುವುದು ರೂಢಿಸಿಕೊಳ್ಳಬೇಕಾಗಿರುವುದು ಅನಿವಾರ್ಯ.

ಸವಿತಾ ನಾಗಭೂಷಣ ಅವರ 'ಕಾಡು ಲಿಲ್ಲಿಯ ಹೂವುಗಳು' ಸಮಗ್ರ ಕವಿತೆಗಳ ಸಂಕಲನದ ಈ ಓದುವಿಕೆಯ ಕ್ರಮದಲ್ಲಿ ಮುಖ್ಯವಾಗಿ ಎರಡು ಆಯಾಮಗಳಿಗೆ ಒತ್ತು ನೀಡಲಾಗಿದೆ.

೧. ಇಲ್ಲಿನ ಕವನಗಳನ್ನು ತಾತ್ವಿಕವಾಗಿ ವಿವರಿಸಿಕೊಳ್ಳುವ ಪ್ರಯತ್ನ ನಡೆಸಿರುವುದು. ಅಂದರೆ, ಇಲ್ಲಿನ ಕವನಗಳಿಗೆ ಸ್ಪಂದಿಸಲು ಅಗತ್ಯವಾಗಬಹುದಾದ 'ಚೌಕಟ್ಟ'ನ ಕುರಿತು ವಿವೇಚಿಸುವುದು.

೨. ಕನ್ನಡ ಮಹಿಳಾ ಕವಿಗಳ ಕವನ ಸಂಕಲನಗಳ ಜೊತೆಗೆ ಸವಿತಾ ನಾಗಭೂಷಣ ಅವರ 'ಕಾಡು ಲಿಲ್ಲಿ ಹೂವುಗಳು' ಯಾವ ಬಗೆಯಲ್ಲಿ ಕಾಣಿಸಿಕೊಳ್ಳುತ್ತದೆ? ಎಂಬುದನ್ನು ಸ್ಪಷ್ಟಪಡಿಸಿಕೊಳ್ಳುವುದು.

ಸವಿತಾ ನಾಗಭೂಷಣ ಅವರ ಕವನಗಳನ್ನು ಓದುತ್ತಾ ಹೋದಂತೆಲ್ಲ ಮುಖ್ಯವಾಗಿ ಅನಿಸುವ ವಿಚಾರವೆಂದರೆ, ನಿರಂತರವಾಗಿ ಹರಿಯುತ್ತಿರುವ ಕಾಲ ಪ್ರವಾಹದೊಳಗೆ ಕೆಲವು ನಿರ್ದಿಷ್ಟ ಅವಧಿಯ ಅನುಭವಗಳನ್ನು, ಭಾವನಾ ತೀವ್ರತೆಯನ್ನು ಹಿಡಿದು-ತಡೆದು-ನಿಲ್ಲಿಸುವ ಕ್ರಿಯೆಯೇ ಕಾವ್ಯವೆನ್ನುವ ಅಂಶ. ಅಲ್ಲದೆ ಇಲ್ಲಿ ಅನುಭವದ ಅಭಿವ್ಯಕ್ತಿಯು ಪೂರ್ಣತೆಯನ್ನು ಪಡೆಯುವುದೇ ಅದರ ಅನುಭೂತಿಯಲ್ಲಿ. ಎಂದರೆ ಒಂದು ನಿರ್ದಿಷ್ಟ ಕಾಲಾವಧಿಯ ಸೆರೆಹಿಡಿಯುವ ಅನುಭವವು ಅದರ ವಾಸ್ತವದ ಸೃಜತೆಯನ್ನು ಮೀರಿ ನಿಲ್ಲುವುದೇ ಅದರ 'ಸೌಂದರ್ಯ'ದ ಅನುಭೂತಿಯಿಂದ. ಹೀಗಾಗಿ ಮನಃಸ್ಥಿತಿಯ ಪುನರ್ ನಿರ್ಮಾಣದಲ್ಲಿ ಆ ಬದುಕಿನ ಸುಸಂಗತೆಯ, ಅರ್ಥವಂತಿಕೆಯ ಸಂಕೇತವಾಗಿ ಸೌಂದರ್ಯದ ಅನುಭೂತಿ ಕಾಣಿಸಿಕೊಳ್ಳುತ್ತದೆ. 'ಕಾಡು ಲಿಲ್ಲಿಯ ಹೂವುಗಳ' ಕಾವ್ಯಾನುಭವವೇ ಈ ಬಗೆಯದಾಗಿದೆ. ವಿವಿಧ ಬಗೆಯ ಮನಃಸ್ಥಿತಿಗಳು, ಭಾವನಾತೀವ್ರತೆಗಳು ಪ್ರಕೃತಿಯ ಸಮೀಕರಣದಲ್ಲಿ ಪ್ರಕೃತಿಯ ಪ್ರತಿಮೆಗಳಲ್ಲಿ ಅರ್ಥಪೂರ್ಣ ಚೌಕಟ್ಟಿನೊಳಗೆ ಕಾಣಿಸಿಕೊಳ್ಳುತ್ತದೆ. ಸವಿತಾ ಅವರ ಕವನಗಳ ಕೇಂದ್ರ ಸೆಲೆಯೇ ನಿಸರ್ಗ. ಅನುಭವವು ನಿಸರ್ಗದ ಪ್ರತಿಮೆಗಳ ಮೂಲಕ ಮೈದಾಳುವಾಗಲೆಲ್ಲ, ನಿಸರ್ಗವೆಂಬುದು ಬರೀ ಲಯವಾಗಿ, ಅಲೆಯಾಗಿ ತೋರದೆ ಹೆಣ್ಣಿನ ಮನಸ್ಸು ಮತ್ತು ಪ್ರಕೃತಿಯ ಜೊತೆಜೊತೆಗೆ ಅನುಸಂಧಾನ ನಡೆಸುತ್ತದೆ. ಹೀಗಾಗಿ ಪ್ರಕೃತಿ ಎನ್ನುವುದು ಶುದ್ಧ ಐಂದ್ರಿಕ ಅನುಭವ ಮತ್ತು ಲೌಕಿಕ ಅನುಭವದ ಜೊತೆ ತಳುಕು ಹಾಕಿಕೊಂಡಿದೆ. ಕಾಡು ಲಿಲ್ಲಿಯ ಸತ್ವವಿರುವುದು ಇಲ್ಲಿಯೇ. ಎಲ್ಲ ಸಮಾಜಗಳಲ್ಲೂ ಹೆಣ್ಣು ಮತ್ತು ಪ್ರಕೃತಿಗೆ ಒಂದು ಅವಿನಾ ಸಂಬಂಧ ಇದ್ದೇ ಇದೆ. (ಯಾವುದೇ ಸಮಾಜದ ಜನಪದ ಸಾಹಿತ್ಯವನ್ನು ಅವಲೋಕಿಸಿದಾಗ ಇದು ಹೊರನೋಟಕ್ಕೆ ವ್ಯಕ್ತವಾಗುತ್ತದೆ.) 'ಇಕೋ ಫೆಮಿನಿಸಮ್' ಹೇಳುವಂತೆ ಭಾರತದಲ್ಲಿ ಮಹಿಳೆಯರ ಕಲ್ಪನೆ ಮತ್ತು ಆಚರಣೆ ಎರಡರಲ್ಲೂ ಪ್ರಕೃತಿಯು ಬಿಡಿಸಲಾಗದ ಭಾಗವಾಗಿದೆ. ಒಂದು ಮಟ್ಟದಲ್ಲಿ ಪ್ರಕೃತಿ ಮಹಿಳೆಯ ತದ್ರೂಪವಾಗಿದ್ದರೆ, ಹೆಣ್ಣು ಪ್ರಕೃತಿಯನ್ನು ಜೀವ ಉತ್ಪಾದಿಸಲು ಮತ್ತು ಉಳಿಸಲು ಸಾಕಿದ್ದಾಳೆ. ಪ್ರಕೃತಿಯ ಸ್ವಭಾವ ಕ್ರಿಯಾಶೀಲತೆ ಮತ್ತು ವೈವಿಧ್ಯ. ಆಕೆ ಕಲ್ಲು, ಹಣ್ಣು ಪ್ರಾಣಿ ಎಲ್ಲದರಲ್ಲೂ ಜೀವಿಸುತ್ತಾಳೆ, ತನ್ನನ್ನು ಗುರುತಿಸಿಕೊಳ್ಳುತ್ತಾಳೆ. ಸವಿತಾ ಅವರ ಕವನಗಳನ್ನು ಸಾರರೂಪಿಯಾಗಿ ಅರ್ಥಮಾಡಿಕೊಳ್ಳಲು ಈ ಪ್ರವೇಶವೊಂದು ಮುಖ್ಯವೆಂದೆನಿಸುತ್ತದೆ.

'ನನ್ನೆಲ್ಲಾ ಪದ್ಯಗಳಲ್ಲಿರುವಂತೆ
ಇಲ್ಲೂ ತಾರೆ, ಮೋಡ, ಗಾಳಿ, ಕಡಲು ಸೂರ್ಯರಿದ್ದಾರೆ
ನಿನಗಿಷ್ಟವಾದರೆ ಓದು ಒತ್ತಾಯವಿಲ್ಲ
ಇಷ್ಟವಾಗದಿದ್ದರೆ ಬೇಡ
ಕಿಂಚಿತ್ತೂ ಕೋಪವಿಲ್ಲ
ಆದರೆ ನಾನು ಪ್ರೀತಿಸುವ

ಗಾಳಿ, ಮೋಡ, ತಾರೆಯರನ್ನು
ನಿಂದಿಸಬೇಡ
ಅವರ ಬಗ್ಗೆ ಯಾಕೆ ಬರೆಯುತ್ತಿ?
ಎಂದು ಕೇಳಬೇಡ
ಅವರ ಬಗ್ಗೆ ಎಷ್ಟು ಬರೆಯುತ್ತಿ
ಎಂದು ಕಾಡಬೇಡ' *(ಈ ಗೆಳೆತನ ....೪೪)*

ಎಂದು ದೃಢವಾಗಿಯೇ ಸಾರುವ ಸವಿತಾ ಪ್ರಕೃತಿಯನ್ನು ಶುದ್ಧ ಈಸ್ತೆಟಿಕ್ ಆದ ದೃಷ್ಟಿಕೋನದಿಂದ ನೋಡುತ್ತಾರೆ. ಮಾತ್ರವಲ್ಲ ತನ್ನನ್ನು ಸ್ವತಃ ಅದರ ಭಾಗವಾಗಿಯೇ ಕಾಣುತ್ತಾರೆ. ಸೂರ್ಯ, ಚಂದ್ರ, ತಾರೆ, ಆಕಾಶ, ಮೋಡ, ಮರ, ಗಿಡ, ಬೆಟ್ಟ, ನೀರು, ಹೂಗಳು ತಮ್ಮ ಭೌತಿಕ ಅಸ್ತಿತ್ವವನ್ನು ಕಳೆದುಕೊಳ್ಳುತ್ತವೆ. ಉತ್ಕಟ ಕಾವ್ಯಾತ್ಮಕತೆಯ ವಿಶಿಷ್ಟ ರೂಪಕಗಳಾಗುತ್ತವೆ. 'ಕಾಡು ಲಿಲ್ಲಿಯ ಹೂವುಗಳ'ಲ್ಲಿನ ಪ್ರಕೃತಿ ದರ್ಶನದ ಹಿಂದೆ ಇರುವ ಪ್ರೇರಣೆಗಳ, ಮೌಲ್ಯಗಳ ಮೂಲ ಸೆಲೆ ಮಾತ್ರ ಅಪ್ಪಟ ಹೆಣ್ಣಿನ ಉತ್ಕಟ ಆಸೆ, ಆಕಾಂಕ್ಷೆ, ಹಂಬಲಗಳಾಗಿವೆ. ಹೆಣ್ಣಿನ ಆತ್ಮವಿಶ್ವಾಸದ ಅಭಿವ್ಯಕ್ತಿ ಅವರ ಕಾವ್ಯ, ಬುದ್ಧಿ ಮತ್ತು ಭಾವಗಳ ನಡುವೆ ಯಾವ ಘರ್ಷಣೆಯೂ ತೋರದೆ ಹೆಣ್ಣಿನ ಆತ್ಮವಿಶ್ವಾಸದ ಅಭಿವ್ಯಕ್ತಿಯು ಅಪೂರ್ವವಾದ ಸಾಮರಸ್ಯದಲ್ಲಿ ಪ್ರಕಟವಾಗುತ್ತದೆ.

ಮುಲ್ಲ ಅಲ್ಲಾನಿಗಾಗಿ
ತುಟಿ ಬಿಚ್ಚಿದಾನೆ
ಮೈಕಾಸುರ ಮಂಜುನಾಥ
ಎಂದು ಕಿವಿ ಕಚ್ಚುತ್ತಿದ್ದಾನೆ
ಬಂಗಾರದ ರಥ
ರಿಪೇರಿಗೆ ಹೋಗಿದೆ
ಬರಿಗಾಲಲ್ಲೆ ನಡೆದು ಬಂದ
ಸೂರ್ಯನ ಮುಖ ಕೆಂಪಾಗಿದೆ
ಮತ್ತೆ ಬೆಳಗಾಗಿದೆ
ಬೆಳಕಿನ ಸಮುದ್ರದಲ್ಲಿ
ಜಗತ್ತು ಮುಖ
ತೊಳೆದುಕೊಳ್ಳುತ್ತಿದೆ
ಸೂರ್ಯ ಮೈ ಮುರಿಯುತ್ತಿದ್ದಾನೆ
ಪೇಪರು ಕೊಡುವ
ಪುಟ್ಟ ಹುಡುಗನಿಗೆ
ಕರೆಗಂಟೆ ಎಟುಕುತ್ತಿಲ್ಲ
ಹಾಲು ಕೊಡುವ ಮುದುಕ
ಸಾವಿನ ಸುಖದಲ್ಲಿ
ಮೈಮರೆತಿರುವ
ಹೆಂಗಸರನ್ನು ಬದುಕಿನ
ಬಾಗಿಲಿಗೆ ಎಳೆಯುತ್ತಿದ್ದಾನೆ... (ಇರುಳಲ್ಲಿ ಬೆಳಗು - ೩.೩)

ಇಲ್ಲಿ ಪ್ರತಿನಿಧಿತವಾಗುವುದು ಬದುಕಿನಲ್ಲಿ ಎದುರಾಗುವ ಭಿನ್ನ ಭಿನ್ನ ಮುಖಗಳು, ಬವಣೆಗಳು. ಆದರೆ ಅದನ್ನು ಸವಿತಾ ಮುಂದಿಡುವ ರೀತಿ ಕಾವ್ಯಲೋಕದಲ್ಲಿ ಹೊಸಬಗೆಯಾಗಿದೆ.

ಈ ವಿಶಿಷ್ಟ ಅನುಸಂಧಾನದಲ್ಲಿ ಸಹಜ ಎಂಬಂತೆ ಪ್ರೀತಿಯ ಪದರ, ಭಾವನಾತ್ಮಕ ಮಿಡಿತ ಇದೆ. ಕಾವ್ಯ ವಸ್ತು ಮತ್ತು ಅಭಿವ್ಯಕ್ತಿ ಒಂದರೊಳಗೊಂದು ಬೆಸೆದು ರೂಪುಗೊಳ್ಳುವುದು ಇಲ್ಲಿನ ಕವನಗಳಲ್ಲಿ ಸಹಜವಾಗಿದೆ. ಅಂದರೆ ಹೊಸದಾಗಿ ರೂಪುಗೊಳ್ಳುವ ಹೆಣ್ಣಿನ ವಿಶಿಷ್ಟಾನುಭವಕ್ಕೆ ಆಕಾರ ಕೊಡುವಲ್ಲಿ ಚಾರಿತ್ರಿಕ ಸವಾಲುಗಳನ್ನು ಇದರ ಕವನಗಳು ಸೂಚಿಸುತ್ತವೆ. ಸಬ್ಜೆಕ್ಟಿವ್ ಮತ್ತು ಆಬ್ಜೆಕ್ಟಿವ್‌ಗಳ ನಡುವಣ ಭೇದವಿರದ ಕಾವ್ಯ ಪರಂಪರೆಗೆ ಸೇರಿದ ಭಾಷಿಕ ಆಕೃತಿಗಳಿವು. ಅಂದರೆ ಪ್ರಕೃತಿಯನ್ನು ಮಾಧ್ಯಮವನ್ನಾಗಿ ಬಳಸಿ ತನ್ನ ಅಂತರ್ ವಿಸ್ತಾರವನ್ನು ಸಂವಹನ ಮಾಡಬಯಸುವ ಮಾದರಿಯವು. ಮಾತ್ರವಲ್ಲ ಹೊಸಬಗೆಯ ಭಾಷಿಕ ಲಯಗಳನ್ನು ಸಿದ್ಧ ಮಾಡುವ ಸೃಜನಶೀಲ ಹಠವನ್ನು ನಾವು ಈ ಸಂಕಲನದ ಉದ್ದಕ್ಕೂ ಕಾಣಬಹುದು. ಹೀಗಾಗಿಯೇ ಸಿದ್ಧ ಪ್ರಕೃತಿಯ ಪ್ರತಿಮೆಗಳನ್ನು ಮುರಿದು ಹೊಸದಾಗಿ ಕಟ್ಟುವ ಮತ್ತು ಅದರ ಜೊತೆಗೆ ಅರ್ಥವ್ಯಾಪ್ತಿಯನ್ನು ವಿಸ್ತರಿಸುವ ಹೊಸ ಸಾಧ್ಯತೆಯ ಕಡೆಗೆ ಸರಿಯುವ ಪ್ರಯತ್ನ ವ್ಯಕ್ತವಾಗುತ್ತದೆ.

ಕರೆ ಮನುಷ್ಯಾ ದಿಗಿಲು ಯಾಕೆ?
ಮಲ್ಲಿಗೆ ಹುಡುಗಿ ಒಲಿದಾಳ ನಿನಗೆ
ಕಣ್ಣನಾಗ ಚಿಕ್ಕಿ ಬಳಗ
ಸುರಗಿ ಕ್ಯಾದಗಿ ಎದೆಯಾ ಒಳಗೆ
ಹಾಡೋ ಕೋಗಿಲ ಕೊಳ್ಳಿನ ಕೆಳಗೆ
ಆಡೋ ನವಿಲು ಹೆಜ್ಜಯ ತಳಗ
ಬೆಂಕಿಯ ದೇಹಾ! ಮಣ್ಣಿನ ಜೀವಾ ।
ನದಿಯ ಭಾವಾ ಕಲ ಕಲ ಕಲ ಕಲ...

– ಕರೆ ಮನುಷ್ಯಾ ದಿಗಿಲು ಯಾಕ – ೧೯೨

ಒಮ್ಮೊಮ್ಮೆ ಅನಿಸುತ್ತೆ
ಎಲ್ಲ ಮರೆತು
ಎಲ್ಲಾದರೊಂದು ಕಡೆ
ದೂರ ಒಂಟಿಯಾಗಿ
ಮರುಭೂಮಿಯ ಹಾಗೆ
ನಿಂತುಬಿಡಬೇಕೆಂದು –ಮೃತ್ಯು ೮೩.

'ನಾ ಬರುತ್ತೇನೆ ಕೇಳು', 'ಚಂದ್ರನನ್ನು ಕರೆಯಿರಿ ಭೂಮಿಗೆ', 'ಹೊಳೆ ಮಗಳು', 'ಜಾತ್ರೆಯಲ್ಲಿ ಶಿವ' — ಈ ನಾಲ್ಕು ಕವನಗಳ ಸಂಕಲನಗಳಲ್ಲಿ ಉತ್ಕಟವಾದ ಭಾವನಾ ತೀವ್ರತೆಯು ಪ್ರಕೃತಿ, ಪ್ರತಿಮೆಗಳ ಮೂಲಕ ಇಂದ್ರಿಯಗಮ್ಯ ಅನುಭವಗಳಾಗಿ ಕಾಣಿಸುತ್ತವೆ. ಇಂದ್ರಿಯಗಮ್ಯ ಅನುಭವಗಳನ್ನು ಕುರಿತಂತೆ ಅಪಾರ ಶ್ರದ್ಧೆ ಪ್ರೀತಿ ಇದ್ದೂ ಅವನ್ನು ದಾಟಿ ಹೋಗಬಯಸುವ ಮನಸ್ಸಿನ ಮುನ್‌ಚಾಚು ಇಲ್ಲಿನ ವೈಶಿಷ್ಟ್ಯ.

ಸವಿತಾ ಅವರ ಪ್ರಕೃತಿ ಅನುಭವದ ಸ್ವರೂಪವನ್ನು ಕುರಿತು ಮಹತ್ವದ ಚರ್ಚೆ ಪ್ರಾರಂಭವಾಗುವುದು ಇಲ್ಲಿಂದಲೇ.

ಹಸಿವಾಯಿತು
ಶರಣಾದೆ ಮರಗಳಿಗೆ
ಬಾಯಾರಿತು
ತಲೆ ಬಾಗಿದೆ ನದಿಗಳಿಗೆ
ಮನಸೊಪ್ಪಿತು
ಸುಲಿಪಲ್ಲ ಗೊರವಂಗೆ ಒಲಿದೆ
ಗಿರಿಗಳಿಗೆ ಗವಿಗಳಿಗೆ
ಗಿಳಿ ಕೋಗಿಲೆ ನವಿಲುಗಳಿಗೆ
ಮಂದ ಮಾರುತಗಳಿಗೆ
ಕೈಯ ಮುಗಿದೆ
ನಡೆವವಳಿಗೆ ನುಡಿಯ ಹಂಗೇಕೆ?
ಕಡೆಯ ನುಡಿಯನೂ ಕೊಡವಿ
ಮುನ್ನಡೆದೆ
ಕೂಡಿ ಬಂದಿರಲು ಗಳಿಗೆ
ಕಾಲುದಾರಿಯೆ ಸಾಕು
ಕರೆದೊಯ್ಯಲು ಕದಳಿಗೆ... -ಕಾಲು ದಾರಿಯೇ ಸಾಕು - ೧೮೪

ಇಂದ್ರಿಯಗಳ ನೆಲೆಯಲ್ಲಿ ಕಣ್ಣಿಗೆ, ಕಿವಿಗೆ, ಚರ್ಮಕ್ಕೆ ಮೂಗಿಗೆ ಮೂರ್ತವಾಗಿ ದಕ್ಕುವ ಅನುಭವಗಳ ಅನಾವರಣ ಇಲ್ಲಿವೆ. 'ಮಾತನಾಡಿಸಬೇಕು', 'ಎಲ್ಲಿ ಹೋದವ್ರೋ..., ವ್ಯತ್ಯಾಸ, ಎಲ್ಲಿದೆ ದಂಡೆ, ಯಾರನ್ನು ಕಂಡೆ, ಕಾಡಲ್ಲಿ ಕಿಟಕಿಯಲ್ಲಿ ಚಂದ್ರ, ಅಲ್ಲದೆ ಚಂದ್ರನನ್ನು ಕುರಿತ, ಹಾವುಗಳನ್ನು ಕುರಿತ ಹಲವು ಪದ್ಯಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದರೆ ಅನುಭವಗಳ ಎರಡು ನೆಲೆಗಳು ಮುಖ್ಯವಾಗಿ ಕಂಡುಬರುತ್ತವೆ. ಒಂದು – ಪ್ರಕೃತಿಯನ್ನು ಶುದ್ಧವಾಗಿ ಗ್ರಹಿಸುವ ತನ್ಮಯತೆ, ಎರಡು – ಹೆಣ್ಣಿನ ಲೋಕವನ್ನು ಪ್ರಕೃತಿಯ ಒಳಗೆ ವಿಲೀನಗೊಳಿಸುವ ಉನ್ನತತೆ. ಈ ಎರಡೂ ಸ್ಥಾಯೀ ಅಂಶಗಳು ನಿಸರ್ಗ ಕವನಗಳಲ್ಲಿ ಗಾಢವಾಗಿ ಪ್ರಕಟವಾಗುತ್ತವೆ. ಮಾತ್ರವಲ್ಲ ಪ್ರಕೃತಿ ಅನುಭವದ ವ್ಯಾಪ್ತಿಯೊಳಗೆ ಬೇರೆ ಯಾವ ಬಗೆಯ ಹಂಗೂ ಇಲ್ಲದೆ ತನ್ಮಯತೆ ಸಾಧಿಸುತ್ತವೆ.

ಹೇಗೆ ಪ್ರೀತಿಸದೆ ಇರಲಿ ಚಂದ್ರನನ್ನು
ಮಗುವಾಗಿದ್ದಾಗಿನಿಂದಲೂ ಬಲ್ಲೆ ಅವನನ್ನು
ಯಾವ ಲೋಕದಲ್ಲಿ ಯಾವ ಎರಕದಲ್ಲಿ
ರೂಪುಗೊಂಡವನೋ ಏನೋ
ಯಾವ ಕಾಲದವನೋ ಏನವನ ಜಾತಿ?
ಮಾತಿನ ಹಂಗಿಲ್ಲದೆ ನನ್ನಯ ಮುಟ್ಟಹನು
ಹೇಳಿ ಹೇಗೆ ಪ್ರೀತಿಸದೆ ಇರಲಿ ಚಂದ್ರನನ್ನು

ಚಂದ್ರನ ಪ್ರತಿಮೆಗೆ ಸವಿತಾ ಅವರ ಕವಿತೆಗಳಲ್ಲಿ ಆಶ್ಚರ್ಯಕರವಾದ ನಿರಂತರತೆ ಇದೆ. ಅದು ಸ್ವಸ್ವರೂಪವನ್ನು ತ್ಯಜಿಸದೆಯೇ ಅನ್ಯ ಸ್ವರೂಪವನ್ನು ಧರಿಸಿದಂತೆ ತೋರುತ್ತದೆ. ಹೀಗಾಗಿ ಕನಸು, ನಂಬಿಕೆ, ವಾಸ್ತವದ ಜೊತೆಗೆ ಗಾಢ ಸಂಬಂಧ ಸಾಧ್ಯವಾಗಿದೆ. ಚಂದ್ರನ ಪ್ರತಿಮೆಯ ಮೂಲಕ ಬದುಕಿನ ಸಮೃದ್ಧತೆ, ಅಲೌಕಿಕತೆ, ಇವೆರಡೂ ಒಂದು ಸೌಂದರ್ಯದ ಚೌಕಟ್ಟಾಗಿ

ರೂಪು ಪಡೆಯುತ್ತದೆ. ಮಾನಸಿಕವಾಗಿ ಬಾಹ್ಯ ಮತ್ತು ಆಂತರಿಕ ಜಗತ್ತಿನ ರಾಯಭಾರಿ ಇಲ್ಲಿನ ಚಂದ್ರ. ಚಂದ್ರನ ಮೂಲಕ ಎದುರಾಗುವ ಇಲ್ಲಿನ ಕಲಾತ್ಮಕ ಶೋಧನೆ ತೀವ್ರತೆಯನ್ನು ಪಡೆದ ಕಾರಣ ಅದರ ಸೌಂದರ್ಯಾನುಭವ ಗಾಢವಾಗುತ್ತಾ ಸಾಗಿದೆ. 'ಕಿಟಕಿಯಲ್ಲಿ ಚಂದ್ರ' ಇದಕ್ಕೆ ಉತ್ತಮ ಉದಾಹರಣೆ.

ಆರಂಭದ ಕವನ ಸಂಕಲನದಿಂದ ಈ ತನಕದ ಕವನಗಳಲ್ಲಿ ಸಮೃದ್ಧವಾಗಿ ಬೆಳೆಯುವ ನಿಸರ್ಗಾನುಭವದ ಪ್ರೇರಣೆ, ಈ ಮೂಲಕ ಅಂತಿಮ ಗುರಿ ಸಾಂಸ್ಥಿಕ ರಚನೆಗಳ ನಿರಾಕರಣೆ, ಸಾಂಸ್ಥಿಕವಾದ ಧರ್ಮ, ದೇವರು, ಪುರುಷ ಸಂರಚನೆಗಳನ್ನು ಒಡೆಯುವುದು ಅಲ್ಲದೆ ಅದನ್ನು ಪ್ರಕೃತಿಯ ಜೊತೆಗೆ ಕರಗಿಸುವುದು. ಇದು ಸವಿತಾ ಅವರ ವೈಚಾರಿಕ ನಿಲುವುಗಳಲ್ಲಿ ಪ್ರಮುಖವಾದದ್ದು. ಇದನ್ನು 'ಕಾಡು ಲಿಲ್ಲಿಯ ಹೂವುಗಳು' ಯಾವ ಬಗೆಯ ರಾಜಿ ದ್ವಂದ್ವಗಳಿಲ್ಲದೆ ಪ್ರಕಟಿಸುತ್ತದೆ. "ನಾನು ಹಡೆದ ಧರ್ಮಗಳನ್ನೂ ಸಾಕಿ ಸಲುಹಿದ ದೇವರುಗಳನ್ನೂ ಗೌರವಿಸಿದ್ದೇನೆ" ಇಂಥ ಸಾಲುಗಳು ಬಿಟ್ಟು ಕೊಡುವ ಅರ್ಥಗಳು ಮುಖ್ಯವಾಗುತ್ತವೆ. 'ದೇವರು' ಸಖನಾಗುವ, ವ್ಯಕ್ತಿಯಾಗುವ; ಧರ್ಮ ಜೀವನಪರವಾಗುವ, ಅನುಭವಗಳಲ್ಲಿ ಮುಕ್ತಿಗೊಳಿಸುವ ಅಂಶ ಇಲ್ಲಿ ಎದ್ದು ತೋರುತ್ತದೆ. ಗಂಡಿನ ಕುರಿತ ಪ್ರೀತಿಯೂ ಸಮಾಜದ ನೈಜತೆಗಿಂತ ಭಿನ್ನವಾದ ಅಲ್ಲದೆ ಪರ್ಯಾಯವಾದ ಆಶಯ ಹೊಂದಿದೆ. ಹೀಗಾಗಿ ಗಂಡು ಕೂಡ ಇಲ್ಲಿ ಸಖ, ಗೆಳೆಯ, ಒಡನಾಡಿಯಾಗಿ ಕಾಣಿಸುವುದಿದೆ. ಇವು ಅಕ್ಕನ ಹಾದಿಯಲ್ಲಿ, ಬುದ್ಧನ ಧ್ಯಾನದಲ್ಲಿ, ಚೆಲುವನಾರಾಯಣ, ಶಿವನ ದಟ್ಟವಾದ ಛಾಯೆಯಲ್ಲಿ ಪ್ರಕಟವಾಗುತ್ತದೆ. ಈ ಕವನಗಳ ಅನ್ವೇಷಣೆ ಇರುವುದು 'ದೈವ'ದ, ಶಿವನ ಅಭಿವ್ಯಕ್ತಿಯಾಗಿ ನಿಸರ್ಗವನ್ನು ಬೆರೆಯುವುದರಲ್ಲಿ.

ಸಾಮಾನ್ಯವಾಗಿ ಎಲ್ಲ ಕವಿಗಳೂ ಮಹತ್ತ್ವದ ಬೆಳವಣಿಗೆಯನ್ನು ಪ್ರಕಟಿಸುವುದು ಎತ್ತರದ ತಾತ್ವಿಕ ಕಾಳಜಿಗಳನ್ನು ತಮ್ಮ ಕಾವ್ಯದಲ್ಲಿ ಅಳವಡಿಸಿಕೊಂಡಾಗಲೇ. ಚಿಂತನಾ ಹರಿವನ್ನು ನಿರಂತರೆಯ ಪ್ರತೀಕವಾಗಿಸಿಕೊಂಡಾಗಲೇ. ಮಹಿಳೆಯರಿಂದ ರಚಿತವಾದ ಕಾವ್ಯ ಪರಂಪರೆಯಲ್ಲಿ ಸವಿತಾ ಅಪ್ಪಟ ನಿಸರ್ಗದ ಕವಿ. ಮಹಾದೇವಿಯಕ್ಕನಿಂದ ಅಭಿವ್ಯಕ್ತಿಗೊಳ್ಳುವ ಹೆಣ್ಣು ಮತ್ತು ನಿಸರ್ಗದ ಅನುಸಂಧಾನ ಎಲ್ಲ ಮಹಿಳಾ ಕವಿಗಳೊಳಗೆ ಮಿಂಚಿದಂತೆಯೂ, ಸವಿತಾ ಅವರಲ್ಲಿ ಅದು ಘನೀಭವಿಸಿದಂತೆಯೂ ವ್ಯಕ್ತವಾಗುತ್ತದೆ.

ಇದು –
ಮರದ ಹಾಗೆ ಬೆಳೆಯಿತು
ಜೀವ;
ನದಿಯ ಹಾಗೆ ಹರಿಯಿತು
ಭಾವ
ಫಳ ಫಳ ಫಳ...
ಹೊಳೆದು ಹೋಯಿತು ಕಾಲ
ಅವರವರ ಮನೆಯಲಿ
ಗೊತ್ತಾದ ಸಮಯದಲಿ
ಯಾರೂ ಬಂದ ಹಾಗಿರಲಿಲ್ಲ
ಯಾರೂ ಹೋದ ಹಾಗಿರಲಿಲ್ಲ

ಆ ಕ್ಷಣವದು ತಲ್ಲಣವೋ
ಆ ಕ್ಷಣವದು ರೋಮಾಂಚನವೋ?
ಹೇಳಲವರು
ಇದ್ದಂತೆ ಇರಲಿಲ್ಲ ಸಾವು : ೧೮೯-೧೯೦

ಅನುಭವ ಅದರ ಸೂಕ್ಷ್ಮವಾದ ಹೊಳಪುಗಳಲ್ಲಿ ಬಿಂಬಿಸುವ ಧ್ವನಿಯು ಬಹುಮುಖ್ಯ. ಕವಿಯ ಚೈತನ್ಯಪರ ನಿಲುವು ಅವರ ಸಂವೇದನೆಯ ಎಲ್ಲ ಭಾಗಗಳಿಗೂ ಆವರಿಸುತ್ತದೆ. ಇದು 'ಸ್ತ್ರೀ ಲೋಕ' ಕಾದಂಬರಿಗಿಂತ ಹೆಚ್ಚು ಪ್ರತಿಫಲನಾತ್ಮಕವಾಗಿ ಕಾವ್ಯದ ಒಳಗೆ ಪ್ರಕಟವಾಗುತ್ತದೆ. ಸೂಕ್ಷ್ಮ ಅನುಭವಗಳೆಲ್ಲ ಪ್ರಕೃತಿಗೆ ಭಾಷಾಂತರವಾಗುವುದರ ಜೊತೆಗೆ ಎಲ್ಲ ಬಗೆಯ ಸಾಂಸ್ಥಿಕತೆಯನ್ನು ಮೀರುವ ಮೆಟಾಫಿಸಿಕಲ್ ಛಾಯೆ ಸವಿತಾ ಅವರ ಕವನಗಳಲ್ಲಿವೆ.

ಗಂಡು-ಹೆಣ್ಣಿನ ಸಂಬಂಧವನ್ನು ಬಿಂಬಿಸುವ ಹಲವು ಕವನಗಳಲ್ಲಿ ನಿಸರ್ಗ ಸಮೀಕೃತ ರೂಪಗಳೇ ಪೇಟ್ರಿಯಾರ್ಕಲ್ ಪ್ರತಿಮಾವಳಿಗಳನ್ನು ಅತಿಶಕ್ತವಾಗಿ ನಿರಾಕರಿಸುತ್ತವೆ. ಆದರೆ ಪ್ರೇಮಕ್ಕೆ ಬಹಳ ಮಹತ್ತ್ವದ ಸೃಜನಶೀಲ ಸ್ಥಾನವಿದೆ. ಹೀಗಾಗಿಯೇ ಗಂಡು-ಹೆಣ್ಣಿನ ಸಂಬಂಧವು ಕೂಡ ಒಂದರ್ಥದಲ್ಲಿ ಮೆಟಾಫಿಸಿಕಲ್ ಛಾಯೆಯ ಒಳಗೆ ವಿಲೀನಗೊಂಡಂತೆ ತೋರುತ್ತದೆ.

ಅಬ್ಬಬ್ಬಾ...
ಏನೆಲ್ಲಾ ಕಲ್ಪನೆಗಳು ಒಂದು
ಸಮಾಗಮದ ಹಿಂದೆ...
ಓ ಪ್ರೇಮ ಪುಷ್ಪವೇ
ವಿವಶಳಾಗಿಹೆನು
ನಿನಗೆ ನನ್ನನ್ನೇ
ಕೊಟ್ಟು- ಕೊಳ್ಳುವೆನು - ಪ್ರೇಮಪುಷ್ಪ ೨೨೧

ಹೆಚ್ಚಿನ ಕವನಗಳಲ್ಲಿ, ಗಂಡು-ಹೆಣ್ಣಿನ ಸಂಬಂಧವು ಮೆಟಾಫಿಸಿಕಲ್ ತಾತ್ವಿಕತೆಯಿಂದಲೇ ಪರಿಷ್ಕೃತವಾಗಿದೆ.

ನೀನೆಂಬುದಿಲ್ಲದಿದ್ದರೆ
ನಾನೆಂಬುದೂ ಇಲ್ಲ
ದುಃಖ, ದುಗುಡ, ದುಮ್ಮಾನವಿಲ್ಲ
ಆಸೆ, ಅಕ್ಕರೆ ಅಹಂಕಾರಗಳಿಲ್ಲ
ಆತ್ಮನೂ ಇಲ್ಲ ಪರಮಾತ್ಮನೂ ಇಲ್ಲ
ಧ್ಯಾನ, ಮೋಕ್ಷ ಮರಣ,
ಸಮಾಧಿ, ಸ್ಮಾರಕಗಳಿಲ್ಲ
ಅಣುವೂ ಇಲ್ಲ
ಬ್ರಹ್ಮಾಂಡವೂ ಇಲ್ಲ
ಇಲ್ಲಿ...
ನಾನು ನೀನು
ಏನೇನೂ ಅಲ್ಲ
ನೀನೆಂಬುದಿಲ್ಲದಿದ್ದರೆ ನಾನೆಂಬುದೂ ಇಲ್ಲ ೧೧೨

ನೋಡುತ್ತಾ... ಇರು
ನಿನ್ನ ಮೇಲೆಯೇ ಒಂದು
ಕವಿತೆ ಕಟ್ಟುವೆನು
ಕವಿತೆಯ ಬಲದಿಂದಲೇ
ಕೊನೆ ತನಕ ಬಾಳುವೆನು ಸಮಯವಿದೆಯೆ ಪಪ್ಪ? ೨೧೬


ಸಹಜ ಪ್ರೀತಿಯ ಹಲವು ಕವನಗಳು ಜೀವನಪರವಾದ ವೈಚಾರಿಕ ದೃಷ್ಟಿಕೋನಕ್ಕೆ ಅನುಗುಣವಾಗಿಯೇ ಇದೆ. ಈ ಪ್ರೀತಿಯ ಸತ್ತ್ವ ಹಲವು ಕವನಗಳಲ್ಲಿ ಒಡಲು ಪಡೆದಿದೆ. ಇವೆಲ್ಲವುಗಳಲ್ಲಿ ಅರ್ಥಪೂರ್ಣವಾಗಿ ಕಾಣುವ ಹೆಣ್ಣಿನ ಅಸ್ತಿತ್ವವು ಪ್ರಕೃತಿಯನ್ನು, ಪ್ರೇಮವನ್ನು ಚೆಲುವನ್ನು ಶುಭ್ರ ವಿಸ್ಮಯದಿಂದ ಒಳಗೊಳ್ಳುತ್ತವೆ.

ಕಾವ್ಯ ಶಿಲ್ಪದ ಹಿನ್ನೆಲೆಯಿಂದ 'ಜಾತ್ರೆಯಲ್ಲಿ ಶಿವ", 'ಕನಕ ಕೃಷ್ಣ' ಇಂಥ ಕವನಗಳು ಆಶ್ಚರ್ಯಕರ ಪ್ರಬುದ್ಧತೆಯನ್ನು ಸಾಧಿಸಿವೆ. ಸವಿತಾ ಅವರ ಜೀವನದರ್ಶನದ ದೃಷ್ಟಿಗೆ ಈ ಕವನಗಳು ಸಾಕ್ಷಿ. ಮಾತ್ರವಲ್ಲದೆ ಇವು ಅರ್ಥಪೂರ್ಣವಾದ ತಿಳಿವಿನ ಘಟ್ಟ, ವ್ಯಕ್ತಿಯೊಳಗೆ ದೇವರು, ದೇವರೊಳಗೆ ವ್ಯಕ್ತಿ ಬಿಂಬಿತಗೊಳ್ಳುವ ಪರಿಣಾಮಕಾರಿ ಕವನಗಳಾದ ಇವು ಕಾವ್ಯದ ಬಗ್ಗೆ ಕವಿಗೆ ಇರುವ ಆಳವಾದ ಎಚ್ಚರ ಮತ್ತು ಸಾಧಕ ಪ್ರಜ್ಞೆಯನ್ನು ಬಿಂಬಿಸುತ್ತವೆ. ಅಲ್ಲದೆ ಈ ಕಾರಣದಿಂದಾಗಿಯೇ ಓದುಗರಲ್ಲಿ ಬಹುಕಾಲ ಉಳಿದುಬಿಡುತ್ತವೆ.

(ಕಾಡು ಲಿಲ್ಲಿ ಹೂವುಗಳು ಕೃತಿ ಬಿಡುಗಡೆಗೆ ಮಂಡಿಸಿದ ಪ್ರಬಂಧ)

ಅರ್ಕ, ಶಾರದನಗರ, ಮಾಡೂರು,
ಕೋಟೆಕಾರು ಅಂಚೆ, ಮಂಗಳೂರು - ೫೭೫ ೦೨೨





ಕವನ ಸಂಭವಿಸುವ ಗಳಿಗೆ...

◆ ಪ್ರತಿಭಾ ನಂದಕುಮಾರ್

ಒಂದೇ ಕಾಲದಲ್ಲಿ ಬರೆಯುತ್ತಿರುವ ಸಾಹಿತಿಗಳು ಯಾವಾಗಲೂ ಪರಸ್ಪರರನ್ನು ಚೆಕ್ ಔಟ್ ಮಾಡುತ್ತಿರುತ್ತಾರೆ. ಸಾಹಿತಿಗಳು ಮಾತ್ರ ಯಾಕೆ, ಎಲ್ಲಾ ಸಮಕಾಲೀನ ಸೃಜನಾತ್ಮಕ ವ್ಯಕ್ತಿಗಳೂ ಹಾಗೆ ಮಾಡುತ್ತಿರುತ್ತಾರೆ. ನೃತ್ಯಕಲಾವಿದರು, ಹಾಡುಗಾರರು, ನಾಟಕದವರು, ಚಿತ್ರಕಲಾವಿದರು ಹೀಗೇ ಎಲ್ಲರೂ ತಮ್ಮ ಸರೀಕರ ಕೃತಿಗಳನ್ನು ಪರಿಶೀಲಿಸುತ್ತಿರುತ್ತಾರೆ. ಅದಕ್ಕೆ ಅನೇಕ ಕಾರಣಗಳಲ್ಲಿ ಕುತೂಹಲ ಭರಿತ ಈರ್ಷ್ಯೆಯೂ ಒಂದಿರಬಹುದು. ಜೊತೆಯವರು ಏನು ಮಾಡುತ್ತಿದ್ದಾರೆ ಅದು ತನ್ನದಕ್ಕಿಂತ ಹೆಚ್ಚು ಉತ್ತಮವೋ ಎಂದು ತಿಳಿಯುವ ಸಹಜ ಚಡಪಡಿಕೆಯೂ ಇರಬಹುದು.

ಬಾಂಗ್ಲಾದೇಶದಿಂದ ರೂನಾ ಲೈಲಾ ಎನ್ನುವ ಹಾಡುಗಾರ್ತಿ ಭಾರತಕ್ಕೆ ಬಂದಾಗ ಅವಳ ಮೊದಲ ಸಂಗೀತ ಕಾರ್ಯಕ್ರಮಕ್ಕೆ ಲತಾ ಮಂಗೇಶ್ಕರ್ ಬಂದಿದ್ದಳು. ಎರಡು ಹಾಡು ಕೇಳಿದ ಕೂಡಲೇ 'ಇವಳು ತನಗೆ ಸಾಟಿಯಲ್ಲ' ಅಂತ ಹೊರಟುಹೋದಳು.

ಅಕಸ್ಮಾತ್ ಅವಳು ಲತಾಗೆ ಸಾಟಿಯಾಗಿದ್ದಿದ್ದರೆ? ಆಗ ಕಥೆ ಬೇರೆಯದೇ ಆಗಿರುತ್ತಿತ್ತು.

ಒಂದು ಸಲ ಗೆಳೆಯರು ಕೆಲವರು ಯಾರು ಉತ್ತಮರು ಸವಿತಾನೋ ಪ್ರತಿಭಾನೋ ಅಂತ ಚರ್ಚಿಸುತ್ತಿದ್ದರಂತೆ. ಅದನ್ನು ಕೇಳಿ ಸಂಭ್ರಮವಾಗಿತ್ತು. ಯಾಕಂದರೆ ನಾವು ಕೆಲವು ಗೆಳತಿಯರು ಯಾವಾಗಲು ಜಯಂತ ಕಾಯ್ಕಿಣಿ

ಮತ್ತು ವಿವೇಕ ಶಾನಭಾಗ ಇಬ್ಬರಲ್ಲಿ ಯಾರು ಉತ್ತಮ ಕಥೆಗಾರ ಅಂತ ಗಂಟೆಗಟ್ಟಲೆ ಚರ್ಚಿಸುತ್ತಿದ್ದವು. ಅದಕ್ಕೆ ತೀರ್ಪು, ಅಂತ್ಯ ಯಾವುದೂ ಇರುತ್ತಿರಲಿಲ್ಲ. ಕೊನೆಗೆ ಇಬ್ಬರು ಹೇಗೆ ಏಕ ಹಾಗೂ ಭಿನ್ನ ಅಂತ ಹೇಳಿಕೊಳ್ಳುತ್ತಾ ಚರ್ಚೆ ಮರೆಯುತ್ತಿದ್ದವು. ಆದರೆ ಚರ್ಚೆಗೆ ಗ್ರಾಸವಾಗುವುದೆಂದರೆ ನಮ್ಮನ್ನೂ ಗಂಭೀರವಾಗಿ ಪರಿಗಣಿಸಿದ್ದಾರೆ ಅನ್ನುವುದರ ಕುರುಹು ಅಂತ ಅನ್ನಿಸಿತ್ತು.

ಆಗೆಲ್ಲಾ ಕವನ ಹುಟ್ಟುವುದು ತಿಪ್ಪೆಯಲ್ಲಿ, ಮಹಲುಗಳಲ್ಲಿ ಕವನ ಹುಟ್ಟುವುದಿಲ್ಲ ಅನ್ನುತ್ತಿದ್ದ ಕಾಲ. ಆಗಲೇ ಸವಿತಾ ನಾಗಭೂಷಣ 'ನಾ... ಬರುತ್ತೇನೆ ಕೇಳು' ಸಂಕಲನದಲ್ಲಿ (ಪ್ರಕಟವಾಗಿದ್ದು ೧೯೮೭ ರಲ್ಲಿ) ಒಂದು ಕವನ 'ನನ್ನ ಕವಿತೆ'ಯಲ್ಲಿ ಇದನ್ನು ವ್ಯಂಗ್ಯ ಮಾಡಿ —

ಕವಿತೆ ಹುಟ್ಟುವುದು ಬಿಗಿದ ಕೊರಳಿನಲ್ಲಿ
ನಿರಾಶೆಯ ನರಳಿನಲ್ಲಿ, ಅಸಹಾಯಕರ ಆಕ್ರಂದನದಲ್ಲಿ
ಇವೆಲ್ಲ ಅಲ್ಲಿ ಇಲ್ಲಿ ಹೆಕ್ಕಿ ಪಟ್ಟಿ ಮಾಡಿದ
ನುಡಿಮುತ್ತುಗಳು. ಹೋದಲ್ಲೆಲ್ಲ ಹಿಂಬಾಲಿಸಿ
ಕಾಡುವ ಮಾತಿನ ಭೂತಗಳು.

ಆದರೆ ನನ್ನ ಕವಿತೆ ಹುಟ್ಟಿದ್ದು ಮಹಲಿನಲ್ಲಿ
ಬಿಳಿಬಿಳಿ ಕಣ್ಣು ಬಿಟ್ಟಿದ್ದು ಝಗಝಗಿಸುವ
ದೀಪಗಳ ಬೆಳಕಿನಲ್ಲಿ, ಬೆಳೆದದ್ದು ಕಲ್ಪನೆಯ
ಮೂಸೆಯಲ್ಲಿ, ಅರಳಿದ್ದು ಕನಸಿನಲ್ಲಿ...

ಅಂತ ಘೋಷಿಸಿಕೊಂಡು ಬರೆದುಬಿಟ್ಟರು. ಅದು ಯಾವ ಮಹಲು ಎಂತಹ ಬೆಳಕು ಅನ್ನುವುದರ ವಿಶ್ಲೇಷಣೆ ಬೇರೆಯದೇ ವಿಷಯ. ಆದರೂ ಹಲವರ ದೃಷ್ಟಿಯಲ್ಲಿ ತಮ್ಮ ಕವನ ಹುಟ್ಟುವುದಕ್ಕೆ ಮುಂಚೆ ಸತ್ತ ಕವಿತೆ, ಕೆಲವರ ದೃಷ್ಟಿಯಲ್ಲಿ ಬದುಕಿದರೂ ಸತ್ತ ಕವಿತೆ ಅಂತ ವ್ಯಂಗ್ಯ ಆಡಿದರೂ ಅದರಲ್ಲಿ ಆತ್ಮವಿಶ್ವಾಸದ, ಅವರ ಎಂದಿನ ಮುಗುಳ್ನಗೆಯ ಏನಾದ್ರೂ ಅಂದುಕೊಳ್ಳಿ, ಹೋಗ್ರಲೇ ಎನ್ನುವ ಗಟ್ಟಿತನ ಆಕರ್ಷಕವಾಗಿತ್ತು. ಯಾರೋ ವಿಮರ್ಶಕರು ಮಹಿಳೆಯರು ತಮ್ಮ ಕಾವ್ಯದಲ್ಲಿ ಯಾಚನೆ, ಬೇಡುವ ದನಿ ಅಂತ ಏನೇನೋ ಹೇಳುವುದು ನೋಡಿ ನಗು ಬರುತ್ತದೆ. ಎಂಭತ್ತರಲ್ಲಿ ಬರೆದ ಯಾವ ಮಹಿಳಾ ಕವಿಯೂ ಹಾಗೆ ಬರೆಯಲೇ ಇಲ್ಲ. ಸವಿತಾ ಎರಡೂ ಕೈ ಚಾಚಿ 'ಬಾ' ಎಂದು ಕರೆದರೂ ಬರುವವಳಲ್ಲ ನಾನು ಎಂದು ಬರೆಯುವ ಕಾಲದ ಆಸುಪಾಸಿನಲ್ಲೇ ಬಂದ ಒಂದು ಮಹಿಳಾ ಕಾವ್ಯ ಸಂಕಲದಲ್ಲಿ ಸಂಪಾದಕರ ಪ್ರಸ್ತಾವನೆಯಲ್ಲಿ ಕಾವ್ಯ ರಚನೆಯ ಕಸುಬು ಸಲೀಸಾಗಿಬಿಡುವ ಅಪಾಯವನ್ನು ನಾವು ಕಾಣಬಹುದಾಗಿದೆ ಎಂದು ಬರೆದರು. (ಹೊಸ ಹೆಜ್ಜೆ ಕನ್ನಡ ಸಾಹಿತ್ಯ ಪರಿಷತ್ತು, ೧೯೯೦, ಸಂ: ನರಹಳ್ಳಿ ಬಾಲಸುಬ್ರಹ್ಮಣ್ಯ ಮತ್ತು ವೀಣಾ ಶಾಂತೇಶ್ವರ). ಹಾಗಾದರೆ ಕಾವ್ಯ ರಚನೆ 'ಕಷ್ಟಕರವಾದ' ಕಸುಬಾಗಿದ್ದರೆ ನಿರಪಾಯಕರವೇ? ಅವರು ಕನ್ನಡದ ಮಹಿಳಾ ಕವಿಗಳಿಗೆ ಆದರ್ಶಗಳಂತೆ ತೋರಿ ಹೆಸರಿಸಿದ ಇತರ ಭಾಷೆಯ ಕವಿಗಳು - ಅಸ್ಸಾಮೀ ನಿರ್ಮಲಪ್ರಭಾ ಬಾರ್ದೋಲಿ, ಡೋಗ್ರಿಯ ಪದ್ಮಾ ಸಚ್‌ದೇವ್ ಮತ್ತು ಮರಾಠಿಯ ಇಂದಿರಾ ಸಂತ. ಇವರೆಲ್ಲರನ್ನೂ ನೋಡಿದಾಗ ಕನ್ನಡದ ಮಹಿಳಾ ಕವಿಗಳು ಸಾಗಬೇಕಾದ ದಾರಿ ಇನ್ನೂ ಬಹಳಷ್ಟಿದೆ ಅನ್ನಿಸಿತಂತೆ! ಅದೇ ಸಂಕಲನದಲ್ಲಿ ಅವರೇ ಆರಿಸಿಕೊಂಡ ಸವಿತಾ ಅವರ ಕವನ 'ನಾ... ಬರುತ್ತೇನೆ ಕೇಳು'ನಲ್ಲಿ ಅವರು— ನೋಡು, ನಾಳಿನ ದಿನ ಕಣ್ಣ ಪೊರೆ ಕಳಚಿ, ನೆನಪು ನಿಚ್ಚಳವಾಗಿ, ಮಸುಕು ಹೆಜ್ಜೆಯನ್ನಪ್ಪಿ ನೀ.. ಬಿಕ್ಕಳಿಸುವಾಗ ಸಾವಿರ

ಮೈಲುಗಳಾಚೆ ಸಮಶ್ರುತಿಯಲ್ಲಿ ನುಡಿಯಬಹುದು ನನ್ನ ಗೆಜ್ಜೆಯ ಗುನುಗು' ಅಂತ ಆ ಮೂವರು ಮಹಿಳಾ ಕವಿಗಳಿಗಿಂತ ಗಟ್ಟಿಯಾಗಿ ಹೇಳಿದ್ದರು! ಅದು ಪಾಪ ಆ ಸಂಪಾದಕ ವಿಮರ್ಶಕರು ನಿರ್ಮಲ, ಪದ್ಮ ಮತ್ತು ಇಂದಿರಾ ಅವರಲ್ಲಿ ಗುರುತಿಸಿದ ಭಾವನೆಗಳ ತೀಕ್ಷ್ಣತೆ, ಸೂಕ್ಷ್ಮತೆ, ಮುಕ್ತ ವಿಚಾರ, ಸಾಮಾಜಿಕ ಪ್ರಜ್ಞೆ, ತೀವ್ರ ನೋವಿನ ಅಭಿವ್ಯಕ್ತಿಗಳೇ ಅಂತ ಅವರಿಗೆ (ಸಂಪಾದಕರಿಗೆ) ಅರ್ಥವಾಗಿರಲೇ ಇಲ್ಲ!. ಇದು ಕನ್ನಡಕ್ಕಂಟಿದ ಶಾಪ. ನಮ್ಮವರ ಘನತೆ ನಮಗೆ ಎಂದಿಗೂ ಕಾಣುವುದೇ ಇಲ್ಲ.

ಬಹುಷಃ ಇಪ್ಪತ್ತು ವರ್ಷದ ಹಿಂದೆ, ಸವಿತಾರನ್ನು ಮೊದಲ ಬಾರಿಗೆ ಭೇಟಿಯಾದಾಗ ನಾನು ಅವರ ಜೊತೆ ಅವರ ಕಾವ್ಯ ಆಸಕ್ತಿಯ ಬಗ್ಗೆ ಮಾತಾಡಿದೆ. ಅವರು ತಮ್ಮ ಕಾವ್ಯದ ಕೇಂದ್ರ ಭಕ್ತಿ ಅಂತ ಹೇಳಿದಾಗ, ಆಗಿನ್ನೂ ಲೌಕಿಕದಲ್ಲಿ ತೇಲಿ ಮುಳುಗುತ್ತಿದ್ದ ನಾನು ಅಯ್ಯೋ ಅದೇನದು ಅಂದುಕೊಂಡೆ. ನಾವು ಕಿತ್ತಳೆ ಮತ್ತು ಸೇಬುಗಳ ಹಾಗೆ ತುಲನೆ ಮಾಡುವುದು ಸಾಧ್ಯವಿಲ್ಲ ಅಂತ ಸಮಾಧಾನಗೊಂಡಿದ್ದೆ.

ಅದಾಗಿ ಎಷ್ಟೋ ವರ್ಷಗಳ ನಂತರ ಸೂಫಿ ಸಂತರು, ಅವರ ಕಾವ್ಯಾಭಿವ್ಯಕ್ತಿ, ಕವಿ ಅಕ್ಕ ಪಕ್ಕಕ್ಕೆ ಸರಿದು ಭಕ್ತೆ ಮಹಾದೇವಿಯ ಪರಿಚಯವಾಗಿ, ತಮಿಳು ಸಂಗಂ ಕವಿಗಳು, ತೆಲುಗಿನ ಕೂಚುಪುಡಿ ಹಾಡುಗಳು, ಜಯದೇವನ ಗೀತಗೋವಿಂದ ಅರ್ಥವಾಗತೊಡಗಿದ ನಂತರ, ಮಧುರ ಭಕ್ತಿ ಅನ್ನುವುದರ ಅನುಭವವಾದ ನಂತರ ಹಟಾತ್ತಾಗಿ ಸವಿತಾ ಮಾತು ಕೂಡ ತಲೆಯೊಳಗೆ ನುಸುಳಿತು. ಸದಾ ಮುಗುಳ್ನಗೆಯ ಮುಸುಕು ತೊಡಿಸಿ ಎಂತಹ ದುರಂತವನ್ನೂ ಒಂದು ರೀತಿಯ ನಿರ್ಲಿಪ್ತತೆಯಲ್ಲಿ ಹೇಳಿಬಿಡುವ ಸಲೀಸಿನಲ್ಲೇ ರೋಮಾಂಚನ ಉಂಟುಮಾಡುವ ಭಕ್ತೆ ಅಪೂರ್ವವಾದ ಜೀವನಾನುಭವವನ್ನು ತಮ್ಮ ಕವನಗಳಲ್ಲಿ ಹೇಳುತ್ತಿದ್ದರು. ಆ ಅರಿವಿನ ಆಸುಪಾಸಿನಲ್ಲೇ ಒಂದು ಸಂದರ್ಭದಲ್ಲಿ ನಾಗಭೂಷಣರ ಕಾಲಿನ ಕಥೆ, ಅದಕ್ಕೆ ಸವಿತಾ ಮಾಡಿದ ಹಸಿರೌಷಧಿಯ ಮಾಂತ್ರಿಕ ಉಪಚಾರ, ಗರಿಕೆಯ ಚಿಕಿತ್ಸಾ ಗುಣದ ಬಗ್ಗೆ ತಿಳಿಸಿದ ಮಾಹಿತಿ ಎಲ್ಲ ಸೇರಿ ಸವಿತಾ ಬರೆದ ಕಾವ್ಯಕ್ಕಿಂತ ಬರೆಯದ ಕಾವ್ಯ ದೊಡ್ಡದು ಅನ್ನುವ ಅರಿವು ಒಳಗಿಳಿಯಿತು. ಅಲ್ಲಿಂದ ಮುಂದೆ ಸವಿತಾ ಚಿಂತನೆಯ ಬಗ್ಗೆ ಚಕಿತಗೊಳ್ಳುವ ಕಾರಣವಿರಲಿಲ್ಲ. ಅದು ಸಮಾನಮನಸ್ಕರ ಇನ್ನೊಂದು ರೀತಿಯ ಕಾಮ್ರಾಡರಿ.

ಹಾಗಾಗಿ ಸವಿತಾ ಏನನ್ನು ಹೇಳುತ್ತಿದ್ದಾರೆ ಅನ್ನುವುದಕ್ಕಿಂತ ಹೇಗೆ ಹೇಳುತ್ತಿದ್ದಾರೆ ಅನ್ನುವ ಕುತೂಹಲವೇ ಮುಖ್ಯವಾಯಿತು. ಸವಿತಾ ಕವನದ ಆವರಣ ಕಟ್ಟುವ ರೀತಿ ಗಮನಿಸಿದ್ದೀರಾ? ಅಲ್ಲಿ ಅವರು ಚಿತ್ರಿಸುವ ವಾತಾವರಣ? ನೀವೊಂದು ಕ್ಲಾಸಿಕ್ ಚಿತ್ರ ನೋಡುತ್ತಿದ್ದಂತೆ ಭಾಸವಾಗುವ ಹಾಗೆ ಚಿತ್ರಗಳು ಕವಿಯ ಮನಸ್ಸಿನಲ್ಲಿ ಅಚ್ಚುಮೂಡಿದ ವಾತಾವರಣವನ್ನು ನಿಮ್ಮ ಮುಂದೆ ಬಿಚ್ಚುತ್ತಾ ಹೋಗುತ್ತಾರೆ. ಅದರೊಳಗೆ ನೀವು ಲಿಟರಲಿ ನಡೆದಾಡಬಹುದು, ಸುತ್ತಾಡಬಹುದು.

ಯಾವುದೇ ಅದ್ಭುತ ಬರಹಕ್ಕೆ ನಮ್ಮನ್ನು ಚಕಿತಗೊಳಿಸುವ ಗುಣ ಇರುತ್ತದೆ. ಅದು ನಮ್ಮನ್ನು ಚಕಿತಗೊಳಿಸದಿದ್ದರೆ ಅದು ಸಾಧಾರಣ ಬರಹ ಎಂದರ್ಥ. ಬರಿ ಉತ್ತಮ ಅನ್ನಿಸಿಕೊಂಡ ಬರಹ ಆಹಾ ಚೆನ್ನಾಗಿದೆ ಅನ್ನಿಸುವಂತೆ ಮಾಡಿದರೂ, ಅದ್ಭುತ ಬರಹ ಒಂದು ಗಳಿಗೆಯಲ್ಲಿ ಚೆನ್ನಾಗಿದೆ ಅನ್ನುವುದನ್ನೂ ಮೀರಿ ಕತ್ತಿನ ಹಿಂದಿನ ಕೂದಲು ನಿಮಿರಿ ನಿಲ್ಲುವಂತೆ ಮಾಡಿ ಬೆನ್ನ ಹುರಿಯಲ್ಲಿ ಚಳುಕು ಹುಟ್ಟಿಸಿ, ಒಂದು ರೀತಿಯ ಸ್ಖಲನದಂತಹ ಸುಖವನ್ನು ಕೊಡುತ್ತದೆ. ಅದು ಅನಿರೀಕ್ಷಿತ. ಬೇಕು ಅಂದುಕೊಂಡಾಗ ಬರುವಂತಹದ್ದಲ್ಲ. ಆದರೆ ಹಾಗಾದಾಗ ಮಾತ್ರ ಆ ಸುಖದ ಅನುಭವ ಮತ್ತು ನೆನಪು ಸಾಯುವವರೆಗೂ ಇರುತ್ತದೆ. ಅದು ವರ್ಣನಾತೀತ. ಹಾಗೆ ಅಂತಹ ಒಂದು ಅನುಭವ ನೀಡಿದ ಕವಿ ತನ್ನ ಎಲ್ಲಾ ಬರಹಗಳಲ್ಲೂ ಅದನ್ನು ನೀಡಬೇಕು ಅಂತಲೂ ನಿರೀಕ್ಷಿಸಲಾಗುವುದಿಲ್ಲ. ಒಂದು ಅನುಭವಕ್ಕೇ ಜಗತ್ತು ಕವಿಗೆ ಋಣಿಯಾಗಬೇಕು.

ಸವಿತಾ ನಾಗಭೂಷಣ ಅವರ 'ಜಾತ್ರೆಯಲ್ಲಿ ಶಿವ' ನನಗೆ ಅಂತಹ ಅನುಭವ ಕೊಟ್ಟ ಕವನ. ಶಬ್ದಾಡಂಬರ, ಅನಗತ್ಯ ಕುಸುರಿ ಕೆಲಸದ ಕೆತ್ತನೆ ಹೇರದ ಮಿತ ಬಳಕೆಯಲ್ಲೇ ಅದ್ಭುತ ಚಿತ್ರ ಕೊಡುವ ಕೌಶಲ್ಯ. ಅವರ ವರ್ಣನೆಗಳು ಆವರಣ ಕಟ್ಟಿಕೊಡಲು ಬೇಕಾದಷ್ಟು ಮಾತ್ರ ಇರುತ್ತದೆ. ಜಾತ್ರೆಗೆ ಹೊರಟ ಬಸ್ಸಿನಲ್ಲಿ ಶಿವ ಬರುತ್ತಾನೆ. ಅವನ ವರ್ಣನೆ ನಮ್ಮ ಮನಸ್ಸಿನಲ್ಲಿ ಅವನ ಚಿತ್ರ ಕೊರೆಯಲು ಬೇಕಾದಷ್ಟು ಮಾತ್ರ. ಕವಿ ಮತ್ತು ಶಿವನ ಜೊತೆಯೇ ನಾವೂ ಬಸ್ಸು ಹತ್ತಿ ಜಾತ್ರೆಗೆ ಹೋಗುತ್ತೇವೆ. ಅಲ್ಲಿ ಇಲ್ಲಿ ಗಿಲೀಟು ಮೂಗುತಿ, ಫುಗ್ಗೆ, ಬತ್ತಾಸು, ಕರಡಿ ಮಜಲು ಎಲ್ಲಕಡೆ ಅಲೆದಾಡುತ್ತೇವೆ. ಹಳೆಯ ಹವಾಯಿ ಚಪ್ಪಲಿ ತೊಟ್ಟ ಶಿವ ಅಲ್ಲೆಲ್ಲೂ ಭಿಕ್ಷೆಯ ಮಾತೇ ಎತ್ತುವುದಿಲ್ಲ, ಎತ್ತಿದ್ದರೆ ವಾಚ್ಯವಾಗಿಬಿಡುತ್ತಿತ್ತು. ಹಸಿದ ಗಣಪ, ಕಾಯಿಲೆಯ ಗಿರಿಜೆ ಯ ಪ್ರಸ್ತಾಪವಾಗುತ್ತಿದ್ದಂತೆ ಮುಂದೆ ಕಾಣಿಸಿಕೊಳ್ಳುವ ಅವನ ಅವತಾರದ ಮಿಂಚಿನ ಸೂಚನೆ ಸಣ್ಣಗೆ ಸಿಗುತ್ತದೆ. ಪರ್ಸಿನ ಮೂಲೆ ತಡಕಿ ಐದು ರೂಪಾಯಿ ಕೊಟ್ಟು ಇಷ್ಟೇ ಅಂದ ತಕ್ಷಣ ದಿಢೀರನೆ ಅಲ್ಲಿ ಕೈಲಾಸವೇ ಆವಾಹನೆಯಾಗಿ ತಧಿಗಿಣತೋಂ ಎಂದು ಹೆಜ್ಜೆ ಹಾಕಿ ನಿಂತ ಭಂಗಿಯಲ್ಲಿ ಸವಿತಾ ಜೊತೆಗೆ ನಮಗೂ ಸಾಕ್ಷಾತ್ ಶಿವ ಫಳಾರನೆ ಮಿಂಚಿನಂತೆ ಕಾಣಿಸಿಬಿಡುತ್ತಾನೆ.

ಅದು ಆ ರೋಮಾಂಚನದ ಗಳಿಗೆ.
ಅದು ಲೌಕಿಕ ಮತ್ತು ಪಾರಮಾರ್ಥಿಕಗಳು ಒಂದಾಗುವ ಗಳಿಗೆ.
ಅದು ಕವನ ಸಂಭವಿಸುವ ಗಳಿಗೆ.





ಕೈಕಾಲು ಮೂಡುವುದು, ಜೀವ ಆಡುವುದು, ಯಾಕೆ ತಿಳಿಯದು!

◆ ಸವಿತಾ ನಾಗಭೂಷಣ

ನನಗಾಗ ಐದರ ಪ್ರಾಯ. ನನ್ನ ಅಜ್ಜಿಯ ಊರಾದ ಕಾರ್ಕಳದ ಮನೆಯ ಹಿತ್ತಿಲಿನಲ್ಲಿ ನನ್ನ ಗೆಳತಿಯೊಂದಿಗೆ ಸೇರಿಕೊಂಡು ಹಲಸಿನ ಮರದ ಬುಡದಲ್ಲಿ ತೂಗುತ್ತಿದ್ದ ಮಿಡಿಗಳನ್ನೆಲ್ಲಾ ಕಿತ್ತು ರಾಶಿ ಹಾಕಿ ತರಕಾರಿ ಮಾರುವವಳ ಆಟ ಆಡುತ್ತಿದ್ದೆ. ಯಾಕೋ ಅಲ್ಲಿಗೆ ಬಂದ ನನ್ನ ತಾಯಿ ಒಂದು ಚಣ ಹೌಹಾರಿ ಏನೂ ಮಾಡಲಾಗದೆ ಅಪಾರ ಅಸಹಾಯಕತೆಯಿಂದ ಆ ಮಿಡಿಗಳ ರಾಶಿ ನೋಡಿ, ಮಿಡುಕಿ, ಮಿಡಿಗೊಂದರಂತೆ ಏಟನ್ನು ನನಗೆ ನೀಡಿದರು! ನಾನು ಅಳುತ್ತಾ ''ನನಗೇನೂ ಈ ಮಿಡಿಗಳು ಬೇಕಾಗಿಲ್ಲ, ಬೇಕಾದರೆ ವಾಪಸ್ಸು ಮರಕ್ಕೇ ಅಂಟಿಸು'' ಎಂದು ಅಮ್ಮನಿಗೆ ಹೇಳಿದೆ. ನನ್ನ ಮಾತಿನಿಂದ ಪಿತ್ತ ನೆತ್ತಿಗೇರಿ ನನ್ನ ತಾಯಿ ಮುಳ್ಳುಕಂಟಿಯಿಂದ ಮತ್ತೆ ನಾಲ್ಕು ಬಾರಿಸಿದರು. ಯಾವತ್ತೂ ನನ್ನ ನೆರವಿಗೆ ಬರುತ್ತಿದ್ದ ಅಜ್ಜಿಯೂ 'ಸಮಾ ಆಯಿತು, ಹಾಕು ಇನ್ನೂ ನಾಲ್ಕು' ಎಂದು ಗುಟುರು ಹಾಕಿದರು. 'ಒಂದೊಂದು ಮಿಡಿಯೂ ಎಷ್ಟು ದೊಡ್ಡದಾಗಿ, ಎಷ್ಟು ಸಿಹಿಯಾಗಿ, ಎಷ್ಟು ಜನ ಹಣ್ಣು ತಿನ್ನಬಹುದಿತ್ತು... ನಿನಗೇಕೆ ಈ ಕೆಟ್ಟ ಬುದ್ಧಿ ಬಂತು' ಎಂದು ಬಯ್ದರು. ನಾನು ಅದೆಷ್ಟೋ ಹೊತ್ತು ಅನಾಥವಾಗಿ ಬಿದ್ದಿದ್ದ ಹಲಸಿನ ಮಿಡಿಗಳ ಬಳಿ ಕುಳಿತು ಕಣ್ಣೀರು ಸುರಿಸುತ್ತಲೇ ಇದ್ದೆ. ಎತ್ತರದಲ್ಲಿ ತೂಗುತ್ತಿದ್ದ ದೊಡ್ಡ ದೊಡ್ಡ ಕಾಯಿಗಳನ್ನು ನೋಡುತ್ತಲೇ

ನಾನು ಮಾಡಿದ ತಪ್ಪು ಎಂದೂ ಅನಿಸುತ್ತಿತ್ತು. ಈ ಗಲಾಟೆಯಲ್ಲಿ ನನ್ನ ಗೆಳತಿ ಅದ್ಯಾವಾಗಲೋ ಜಾಗ ಖಾಲಿ ಮಾಡಿದ್ದಳು. ಕತ್ತಲು ಕವಿದು, ಕೊನೆಗೆ ನನ್ನ ಅಜ್ಜ ಬಂದು ಕರೆದುಕೊಂಡು ಹೋಗುವ ತನಕ ಅಲ್ಲಿಯೇ ಕುಳಿತಿದ್ದೆ. ಒಂಟಿತನವನ್ನು ಜೀವನದಲ್ಲಿ ಮೊಟ್ಟಮೊದಲಿಗೆ ಎದುರುಗೊಳ್ಳುವಂತಾಗಿತ್ತು. ಎಲ್ಲರ ಸಿಟ್ಟು ಇಳಿದ ಮೇಲೆ, ಮೆಲ್ಲನೆ ಅಜ್ಜಿಯ ಕಿವಿಯಲ್ಲಿ ಪಿಸುಗುಟ್ಟಿದೆ. 'ಅಲ್ಲಾ... ಅಷ್ಟು ದೊಡ್ಡ ಮರದಲ್ಲಿ ಅಷ್ಟು ಬುಡದಲ್ಲಿ... ನನ್ನ ಕೈಗೂ ಎಟಕುವಂತೆ ಮಿಡಿಗಳೇಕೆ ಬಿಡಬೇಕು? ನನಗೇನೋ ಬುದ್ಧಿಯಿಲ್ಲ. ನಾನು ಚಿಕ್ಕವಳು, ಮರಕ್ಕೆ ಬುದ್ಧಿ ಬೇಡವೇ? ಅಷ್ಟು ಎತ್ತರ ಬೆಳೆದಿದೆಯಲ್ಲ... ದಂಡಕ್ಕೆ...' ಎಂದೆ.

'ಸಾಕು ಮಾಡು ಕಾನೂನು, ಮಲಗು' ಎಂದರು ಅಮ್ಮ.

ಅಜ್ಜಿ ಏನೂ ಹೇಳದೆ ಸುಮ್ಮನೆ ಬೆನ್ನು ತಟ್ಟಿ, ನಾಳೆ ರಾಮಫಲ ತಿನ್ನುವಿಯಂತೆ ಮಲಗಿಕೋ ಎಂದರು.

ಇವತ್ತಿಗೂ ನನಗೆ ಕೀಳುವುದೆಂದರೆ ಹಿಂಸೆ. ಹಣ್ಣು ಮರದಲ್ಲೇ ಇರಲಿ, ಹೂವು ಗಿಡದಲ್ಲೇ ಇರಲಿ ಎಂದು ಅನಿಸುವುದು.

ಆ ಮರ ಮಿಡಿ, ಕತ್ತಲು, ಒಂಟಿತನ, ಅಳು, ತಪ್ಪಿತಸ್ಥ ಭಾವನೆ ಇನ್ನೂ ನನ್ನಲ್ಲಿದೆ... ಇದೀಗ ಈಗಷ್ಟೇ ನಡೆದಿದೆ ಅನ್ನುವಂತೆ... ಯಾಕೆ??

ನನಗಾಗ ಆರು ವರುಷಗಳಿರಬಹುದು. ಶಿವಮೊಗ್ಗೆಯ, ಜಯನಗರದ ಬಾಡಿಗೆ ಮನೆಗೆ ಹೊಸದಾಗಿ ಬಂದಿದ್ದೆವು. ಪುಟ್ಟ ಹೆಂಚಿನಮನೆ. ಮನೆಯಲ್ಲಿ ಅಟ್ಟವಿತ್ತು. ಅದಕ್ಕೆ ಹೊಂದಿಕೊಂಡು ಮರದ ಏಣಿ. ಸುಲಭವಾಗಿ ಹತ್ತಬಹುದಿತ್ತು. ನಾನು ಹಿರಿಯರ ಕಣ್ಣುತಪ್ಪಿಸಿ ಅಟ್ಟ ಹತ್ತಿದೆ. ಅಟ್ಟದ ಮೇಲೆ ಪುಟ್ಟ ಕಿಟಕಿ. ಕಿಟಕಿಯಲ್ಲಿ ಕಣ್ಣುಹಾಕಿದೆ. ಘಮ್ಮೆನ್ನುವ ರಾತ್ರಿರಾಣಿ ಗಿಡ. ಅಬ್ಬಾ... ಎಷ್ಟು ಚಂದ, ಈ ಗಂಧ, ಸುಗಂಧ ಎಂದು ಪರಿಮಳ ಹೀರುತ್ತಾ ಧಡಧಡ ಇಳಿದು ಬಂದು, 'ಅಜ್ಜಿ... ಕಿಟಕಿಯ ಬಳಿ ಚಂದದ ಗಿಡವಿದೆ. ಹೂವಿದೆ' ಅಂದೆ. ಅಜ್ಜಿ ಹೂವಿನ ವಾಸನೆ ಹಿಡಿದು 'ರಾತ್ರಿ ರಾಣಿ' ಸರ್ಪದ ಕಾಟ ಇರಲಿಕ್ಕೂ ಸಾಕು ಅಂದರು. ಸರ್ಪದ ಹೆಸರು ಕೇಳಿ ನಾನು ನಡುಗಿದೆ. ನನ್ನ ಉತ್ಸಾಹ, ಆನಂದ ಜರ್‍ರೆಂದು ಅಟ್ಟದಿಂದ ಇಳಿದು ನೆಲಕ್ಕೆ ಬಿದ್ದಿತು.

ಆ ಅಟ್ಟ ಆ ಹೂವು, ಆ ಗಂಧ, ಆ ಭಯ, ಆ ನಿರಾಶೆ ಇನ್ನೂ ನನ್ನಲ್ಲಿದೆ ಯಾಕೆ?

ನನಗಾಗ ಎಂಟು ವರುಷಗಳಿರಬಹುದು. ನಾನು, ನನ್ನ ಗೆಳತಿ ಹೊಂಡದ ಮೀನುಗಳನ್ನು ಎಣಿಸುತ್ತಾ, ಕಬ್ಬು ಜಗಿಯುತ್ತಾ, ಶಿವಮೊಗ್ಗೆಯ ರೈಲ್ವೆ ಹಳಿಯ ಪಕ್ಕ ತಾಗಿದಂತೆ ಹರಿದುಹೋಗುತ್ತಿದ್ದ ಹಳ್ಳವನ್ನೇ ಅನುಸರಿಸುತ್ತಾ ಅದೆಷ್ಟೋ ದೂರ ಸಾಗಿದ್ದೆವು. ಒಂದು ಮೈಲು ಸವೆದಿರಬಹುದು. ತೋಟದ ಗುಂಡಿಯೊಂದರ ಬಳಿ ನಾಲ್ಕಾರು ಜನ ಜಾಲಾಡುತ್ತಿದ್ದರು. ಕೊನೆಗೆ ಜುಟ್ಟು ಹಿಡಿದು ನಾಲ್ಕು ವರುಷದ ಮಗುವಿನ ಹೆಣ ಹೊರತೆಗೆದರು. ತೋಟದ ತುಂಬಾ ಮಗುವಿನ ತಾಯಿಯ ರೋದನ ಅನುರಣಿಸುತ್ತಿತ್ತು.

ರೈಲು, ಹಳ್ಳ, ಮೀನು, ಕಬ್ಬಿನ ಸಿಹಿ ಎಲ್ಲವನ್ನೂ ಆ ಅಳು ನುಂಗಿಹಾಕಿತ್ತು. ಅನಿರೀಕ್ಷಿತವಾಗಿ ಸಾವಿನ ಪರಿಚಯವಾಗಿತ್ತು.

ಆ ಹಳ್ಳಿ, ಆ ಮಗುವಿನ ಹೆಣ, ಆ ರೋದನ ಎಲ್ಲವೂ ಈಗಲೂ ನನ್ನಲ್ಲಿದೆ. ಯಾಕೆ?

ನನಗಾಗ ಹತ್ತು ವರುಷವಿರಬಹುದು. ನಾನೂ, ನನ್ನ ಅಕ್ಕ ಶಿವಮೊಗ್ಗೆಯ ಸರ್ಕೀಟ್ ಹೌಸ್ ರಸ್ತೆಯಲ್ಲಿ ಸಾಲು ಮರಗಳಿಂದ ಅಂಟು ಕಿತ್ತು ಬಾಟಲು ತುಂಬಿಸುತ್ತಾ ಮುನ್ನಡೆದಿದ್ದೆವು. ಅಂಟು ಸಾಕಷ್ಟು ತೆಗೆದಾಗಿತ್ತು. ಮನೆಯ ದಾರಿ ದೂರವಿತ್ತು. ನನ್ನಕ್ಕ, 'ನಡೀ... ಹಗಲು ಕನಸು ಕಾಣುತ್ತಾ ಹೋಗುವ... ಮನೆ ತಲುಪಿದ ಮೇಲೆ ಪರಸ್ಪರ ಕನಸು ಹಂಚಿಕೊಳ್ಳುವ...' ಅಂದಳು. ಅವಳಿಗಾಗ ಹದಿನಾಲ್ಕು. ಕಂಡಾಬಟ್ಟೆ ಕಥೆ ಪುಸ್ತಕ ಓದುತ್ತಿದ್ದ ಅವಳು ಅದೇನು ಕಲ್ಪಿಸಿ ಹೇಳಿದಳೋ... ನಾನು ಬರಿದೇ ಹೂಂಗುಟ್ಟಿದೆ. ಹಗಲುಗನಸು ಎಂಬ ಪದವನ್ನು ಎದುರುಗೊಂಡಿದ್ದೇ... ಮೊದಲು. ಇಬ್ಬರೂ ಮಾತಿಲ್ಲದೆ ಮರಗಳನ್ನು ದಾಟಿಕೊಂಡು ಮನೆ ತಲುಪಿದೆವು. ಅವಳ ಕನಸಿನಲ್ಲಿ ತೋಟವಿತ್ತು. ಜೋಕಾಲಿಯಲ್ಲಿ ಜೀಕಿಕೊಂಡು ಬೂಂದಿ ತಿನ್ನುತ್ತಿದ್ದಳು. ಆನೆ, ಮೊಲ ಇತ್ಯಾದಿಗಳು ಕಾಣಿಸಿಕೊಂಡವು. ಬಗೆಬಗೆಯ ಹೂವುಗಳು. ಮೊದಲೇ ಹೇಳಿದ ಹಾಗೆ... ಹಗಲುಗನಸು ನಮಗೆ ಹೊಸದು. ಕನಸು ಕಾಣಲಾಗಲಿಲ್ಲ ಎಂದರೆ ಅಭಿಮಾನಕ್ಕೆ ಪೆಟ್ಟು. ಅವಳ ಕನಸನ್ನೇ ಆಧರಿಸಿ ಬಣ್ಣ ಬಣ್ಣ ಕಟ್ಟಿ ನಾನೂ ರೀಲು ಬಿಟ್ಟೆ.

ಆ ಕನಸು, ಕಲ್ಪನೆ... ನೆನೆದರೆ ನಗು ಬರುವುದಾದರೂ ಈಗಲೂ ನನ್ನಲ್ಲಿದೆ ಯಾಕೆ?

ನನಗಾಗ ಹತ್ತು ಹನ್ನೊಂದರ ಆಸುಪಾಸು. ನಾವು ನಾಲ್ವರು ಮಕ್ಕಳು. ಹೊಟ್ಟೆಗೂ ಬಟ್ಟೆಗೂ ಪರದಾಟ. ಮನೆವಾರ್ತೆ ತೂಗಿಸಲು ಅಮ್ಮ ಹೆಣಗುತ್ತಿದ್ದುದು ನನಗೆ ಅರ್ಥವಾಗುತ್ತಿತ್ತು. ತಮ್ಮಂದಿರು, ತಂಗಿ ಚಿಕ್ಕವರು ನಿರಾಳವಾಗಿರುತ್ತಿದ್ದರು. ನನಗೆ ಅರ್ಥವಾದರೂ ಏನೂ ಮಾಡಲಾಗದ ಅಸಹಾಯಕತೆ. ಕಳವಳ, ಅಭದ್ರತೆ ನಿವಾರಿಸಿಕೊಳ್ಳಲು ಪುಸ್ತಕಗಳನ್ನು ಆರಿಸಿಕೊಂಡು ಎರಡು-ಮೂರು ಮೈಲಿ ದೂರವಿದ್ದ ಗೆಳತಿಯ ಮನೆಗೆ ಹೋಗುತ್ತಿದ್ದೆ. ಆ ಗೆಳತಿ ಶ್ರೀಮಂತಳು, ವೈದ್ಯರ ಮಗಳು. ಆ ಬಂಗಲೆ, ಆ ಕಾರು, ನಾಯಿ, ತಟ್ಟೆಯಲ್ಲಿ ಜೋಡಿಸಿಟ್ಟ ಬಿಸ್ಕತ್ತುಗಳು, ಟೀ ಕೆಟಲ್, ಅವಳ ಮನೆಯ ಆಯಾ ಎಲ್ಲವೂ ನನಗೆ ಅಚ್ಚರಿಯ ಸಂಗತಿಗಳು. ಅವಳಿಗೆ ಪ್ರತ್ಯೇಕ ಕೊಠಡಿ ಬೇರೆ ಇತ್ತು. ಅಲ್ಲಿ ಕುಳಿತು ಪುಟ್ಟ ಕೆಂಚವ್ವ, ನಿದ್ರಾಸುಂದರಿ, ಸಿಂಡ್ರೆಲ್ಲಾ, ಪಿನೋಕಿಯೋ, ರಾಮು ಮತ್ತು ಅವರೆ ಗಿಡ ಮುಂತಾದ ಸಚಿತ್ರ ಮಾಲಿಕೆಗಳನ್ನು ಓದಿ ಮೈಮರೆಯುತ್ತಿದ್ದೆ.

ಕಷ್ಟವನ್ನು ದಾಟಬಹುದು ಎಂದು ಪುಟ್ಟಕೆಂಚವ್ವ, ಸಿಂಡ್ರೆಲ್ಲಾ... ಅಂದು ಭರವಸೆ ಮೂಡಿಸಿದರು.

ಅವರು ಈಗಲೂ ನನ್ನಲ್ಲಿದ್ದಾರೆ... ಯಾಕೆ?

ನನಗಾಗ ಹದಿನಾಲ್ಕರ ವಯಸ್ಸು. ಒಂದು ದಿನ ಶಾಲೆಯಿಂದ ಹಿಂದಿರುಗಿ ಬಂದಾಗ ಅಡಿಗೆ ಮನೆಯಲ್ಲಿ ಮೌನವಾಗಿ ಕೂತು ಉಣ್ಣುತ್ತಿದ್ದ ಹೆಂಗಸೊಬ್ಬಳನ್ನು ನೋಡಿದೆ. ಆಕೆ ದೂರದ ಸಂಬಂಧಿ ಎಂದು ಗೊತ್ತಾದ ಮೇಲೆ ಗೊತ್ತಾಯಿತು. ಒಂದು ಕಾಲದಲ್ಲಿ ೫೦೦ ಮುಡಿ ಅಕ್ಕಿ ಗೇಣಿ ಪಡೆಯುತ್ತಿದ್ದವಳೆಂದೂ ಈಗ ಒಂದು ಹಿಡಿ ಅನ್ನಕ್ಕೂ ಗತಿಯಿಲ್ಲವೆಂದೂ ಅಜ್ಜಿ ಅವಳ ಕರುಣಕಥೆ ಹೇಳಿದರು. ಒಂದು ವಾರ ಹೇಗೋ ಹೊಂದಿಸಿ ಒಂದು ಹೊತ್ತು ಅವಳಿಗೆ ಊಟ ಹಾಕುವುದಕ್ಕೆ ಅಜ್ಜಿ-ಅಮ್ಮನ ನಡುವೆ ಒಪ್ಪಂದವಾಯಿತು. ಅಜ್ಜಿ ಅಮ್ಮ ಅವರ ಊಟದ ಪಾಲಿನಲ್ಲಿ ಎರಡು ತುತ್ತು ತ್ಯಾಗ ಮಾಡಿರಲಿಕ್ಕೂ ಸಾಕು!

ಶ್ರೀಮಂತರಿಗೆ ಕಷ್ಟ ಬರಬಾರದು! ಹೇಗಿದ್ದವಳು ಹೇಗಾದಳು?! ಒಂದು ಹಿಡಿ ಅನ್ನಕ್ಕಾಗಿ

ನಾನು ಮಾಡಿದ ತಪ್ಪು ಎಂದೂ ಅನಿಸುತ್ತಿತ್ತು. ಈ ಗಲಾಟೆಯಲ್ಲಿ ನನ್ನ ಗೆಳತಿ ಅದ್ಯಾವಾಗಲೋ ಜಾಗ ಖಾಲಿ ಮಾಡಿದ್ದಳು. ಕತ್ತಲು ಕವಿದು, ಕೊನೆಗೆ ನನ್ನ ಅಜ್ಜಿ ಬಂದು ಕರೆದುಕೊಂಡು ಹೋಗುವ ತನಕ ಅಲ್ಲಿಯೇ ಕುಳಿತಿದ್ದೆ. ಒಂಟಿತನವನ್ನು ಜೀವನದಲ್ಲಿ ಮೊಟ್ಟಮೊದಲಿಗೆ ಎದುರುಗೊಳ್ಳುವಂತಾಗಿತ್ತು. ಎಲ್ಲರ ಸಿಟ್ಟು ಇಳಿದ ಮೇಲೆ, ಮೆಲ್ಲನೆ ಅಜ್ಜಿಯ ಕಿವಿಯಲ್ಲಿ ಪಿಸುಗುಟ್ಟಿದೆ. 'ಅಲ್ಲಾ... ಅಷ್ಟು ದೊಡ್ಡ ಮರದಲ್ಲಿ ಅಷ್ಟು ಬುಡದಲ್ಲಿ... ನನ್ನ ಕೈಗೂ ಎಟಕುವಂತೆ ಮಿಡಿಗಳೇಕೆ ಬಿಡಬೇಕು? ನನಗೇನೋ ಬುದ್ಧಿಯಿಲ್ಲ. ನಾನು ಚಿಕ್ಕವಳು, ಮರಕ್ಕೆ ಬುದ್ಧಿ ಬೇಡವೇ? ಅಷ್ಟು ಎತ್ತರ ಬೆಳೆದಿದೆಯಲ್ಲ... ದಂಡಕ್ಕೆ...' ಎಂದೆ.

'ಸಾಕು ಮಾಡು ಕಾನೂನು, ಮಲಗು' ಎಂದರು ಅಮ್ಮ.

ಅಜ್ಜಿ ಏನೂ ಹೇಳದೆ ಸುಮ್ಮನೆ ಬೆನ್ನು ತಟ್ಟಿ ನಾಳೆ ರಾಮಫಲ ತಿನ್ನುವಿಯಂತೆ ಮಲಗಿಕೋ ಎಂದರು.

ಇವತ್ತಿಗೂ ನನಗೆ ಕೀಳುವುದೆಂದರೆ ಹಿಂಸೆ. ಹಣ್ಣು ಮರದಲ್ಲೇ ಇರಲಿ, ಹೂವು ಗಿಡದಲ್ಲೇ ಇರಲಿ ಎಂದು ಅನಿಸುವುದು.

ಆ ಮರ ಮಿಡಿ, ಕತ್ತಲು, ಒಂಟಿತನ, ಅಳು, ತಪ್ಪಿತಸ್ಥ ಭಾವನೆ ಇನ್ನೂ ನನ್ನಲ್ಲಿದೆ... ಇದೀಗ ಈಗಷ್ಟೇ ನಡೆದಿದೆ ಅನ್ನುವಂತೆ... ಯಾಕೆ??

ನನಗಾಗ ಆರು ವರುಷಗಳಿರಬಹುದು. ಶಿವಮೊಗ್ಗೆಯ, ಜಯನಗರದ ಬಾಡಿಗೆ ಮನೆಗೆ ಹೊಸದಾಗಿ ಬಂದಿದ್ದೆವು. ಪುಟ್ಟ ಹೆಂಚಿನಮನೆ. ಮನೆಯಲ್ಲಿ ಅಟ್ಟವಿತ್ತು. ಅದಕ್ಕೆ ಹೊಂದಿಕೊಂಡು ಮರದ ಏಣಿ. ಸುಲಭವಾಗಿ ಹತ್ತಬಹುದಿತ್ತು. ನಾನು ಹಿರಿಯರ ಕಣ್ಣುತಪ್ಪಿಸಿ ಅಟ್ಟ ಹತ್ತಿದೆ. ಅಟ್ಟದ ಮೇಲೆ ಪುಟ್ಟ ಕಿಟಕಿ. ಕಿಟಕಿಯಲ್ಲಿ ಕಣ್ಣುಹಾಕಿದೆ. ಘಮ್ಮೆನ್ನುವ ರಾತ್ರಿರಾಣಿ ಗಿಡ. ಅಬ್ಬಾ... ಎಷ್ಟು ಚಂದ, ಈ ಗಂಧ, ಸುಗಂಧ ಎಂದು ಪರಿಮಳ ಹೀರುತ್ತಾ ಧಡಧಡ ಇಳಿದು ಬಂದು, 'ಅಜ್ಜಿ... ಕಿಟಕಿಯ ಬಳಿ ಚಂದದ ಗಿಡವಿದೆ. ಹೂವಿದೆ' ಅಂದೆ. ಅಜ್ಜಿ ಹೂವಿನ ವಾಸನೆ ಹಿಡಿದು 'ರಾತ್ರಿ ರಾಣಿ' ಸರ್ಪದ ಕಾಟ ಇರಲಿಕ್ಕೂ ಸಾಕು ಅಂದರು. ಸರ್ಪದ ಹೆಸರು ಕೇಳಿ ನಾನು ನಡುಗಿದೆ. ನನ್ನ ಉತ್ಸಾಹ, ಆನಂದ ಜರ್ರೆಂದು ಅಟ್ಟದಿಂದ ಇಳಿದು ನೆಲಕ್ಕೆ ಬಿದ್ದಿತು.

ಆ ಅಟ್ಟ ಆ ಹೂವು, ಆ ಗಂಧ, ಆ ಭಯ, ಆ ನಿರಾಶೆ ಇನ್ನೂ ನನ್ನಲ್ಲಿದೆ ಯಾಕೆ?

ನನಗಾಗ ಎಂಟು ವರುಷಗಳಿರಬಹುದು. ನಾನು, ನನ್ನ ಗೆಳತಿ ಹೊಂಡದ ಮೀನುಗಳನ್ನು ಎಣಿಸುತ್ತಾ, ಕಬ್ಬು ಜಗಿಯುತ್ತಾ, ಶಿವಮೊಗ್ಗೆಯ ರೈಲ್ವೆ ಹಳಿಯ ಪಕ್ಕ ತಾಗಿದಂತೆ ಹರಿದುಹೋಗುತ್ತಿದ್ದ ಹಳ್ಳವನ್ನೇ ಅನುಸರಿಸುತ್ತಾ ಅದೆಷ್ಟೋ ದೂರ ಸಾಗಿದ್ದೆವು. ಒಂದು ಮೈಲು ಸವೆದಿರಬಹುದು. ತೋಟದ ಗುಂಡಿಯೊಂದರ ಬಳಿ ನಾಲ್ಕಾರು ಜನ ಜಾಲಾಡುತ್ತಿದ್ದರು. ಕೊನೆಗೆ ಜುಟ್ಟು ಹಿಡಿದು ನಾಲ್ಕು ವರುಷದ ಮಗುವಿನ ಹೆಣ ಹೊರತೆಗೆದರು. ತೋಟದ ತುಂಬಾ ಮಗುವಿನ ತಾಯಿಯ ರೋದನ ಅನುರಣಿಸುತ್ತಿತ್ತು.

ರೈಲು, ಹಳ್ಳ, ಮೀನು, ಕಬ್ಬಿನ ಸಿಹಿ ಎಲ್ಲವನ್ನೂ ಆ ಅಳು ನುಂಗಿಹಾಕಿತ್ತು. ಅನಿರೀಕ್ಷಿತವಾಗಿ ಸಾವಿನ ಪರಿಚಯವಾಗಿತ್ತು.

ಆ ಹಳ್ಳಿ, ಆ ಮಗುವಿನ ಹೆಣ, ಆ ರೋದನ ಎಲ್ಲವೂ ಈಗಲೂ ನನ್ನಲ್ಲಿದೆ. ಯಾಕೆ?

ನನಗಾಗ ಹತ್ತು ವರುಷವಿರಬಹುದು. ನಾನೂ, ನನ್ನ ಅಕ್ಕ ಶಿವಮೊಗ್ಗೆಯ ಸರ್ಕೀಟ್ ಹೌಸ್ ರಸ್ತೆಯಲ್ಲಿ ಸಾಲು ಮರಗಳಿಂದ ಅಂಟು ಕಿತ್ತು ಬಾಟಲು ತುಂಬಿಸುತ್ತಾ ಮುನ್ನಡೆದಿದ್ದೆವು. ಅಂಟು ಸಾಕಷ್ಟು ತೆಗೆದಾಗಿತ್ತು. ಮನೆಯ ದಾರಿ ದೂರವಿತ್ತು. ನನ್ನಕ್ಕ, 'ನಡೀ... ಹಗಲು ಕನಸು ಕಾಣುತ್ತಾ ಹೋಗುವ... ಮನೆ ತಲುಪಿದ ಮೇಲೆ ಪರಸ್ಪರ ಕನಸು ಹಂಚಿಕೊಳ್ಳುವ...' ಅಂದಳು. ಅವಳಿಗಾಗ ಹದಿನಾಲ್ಕು. ಕಂಡಾಬಟ್ಟೆ ಕಥೆ ಪುಸ್ತಕ ಓದುತ್ತಿದ್ದ ಅವಳು ಅದೇನು ಕಲ್ಪಿಸಿ ಹೇಳಿದಳೋ... ನಾನು ಬರಿದೇ ಹೂಂಗುಟ್ಟಿದೆ. ಹಗಲುಗನಸು ಎಂಬ ಪದವನ್ನು ಎದುರುಗೊಂಡಿದ್ದೇ... ಮೊದಲು. ಇಬ್ಬರೂ ಮಾತಿಲ್ಲದೆ ಮರಗಳನ್ನು ದಾಟಿಕೊಂಡು ಮನೆ ತಲುಪಿದೆವು. ಅವಳ ಕನಸಿನಲ್ಲಿ ತೋಟವಿತ್ತು. ಜೋಕಾಲಿಯಲ್ಲಿ ಜೀಕಿಕೊಂಡು ಬೂಂದಿ ತಿನ್ನುತ್ತಿದ್ದಳು. ಆನೆ, ಮೊಲ ಇತ್ಯಾದಿಗಳು ಕಾಣಿಸಿಕೊಂಡವು. ಬಗೆಬಗೆಯ ಹೂವುಗಳು. ಮೊದಲೇ ಹೇಳಿದ ಹಾಗೆ... ಹಗಲುಗನಸು ನಮಗೆ ಹೊಸದು. ಕನಸು ಕಾಣಲಾಗಲಿಲ್ಲ ಎಂದರೆ ಅಭಿಮಾನಕ್ಕೆ ಪೆಟ್ಟು ಅವಳ ಕನಸನ್ನೇ ಆಧರಿಸಿ ಬಣ್ಣ ಬಣ್ಣ ಕಟ್ಟಿ ನಾನೂ ರೀಲು ಬಿಟ್ಟೆ

ಆ ಕನಸು, ಕಲ್ಪನೆ... ನೆನೆದರೆ ನಗು ಬರುವುದಾದರೂ ಈಗಲೂ ನನ್ನಲ್ಲಿದೆ ಯಾಕೆ?

ನನಗಾಗ ಹತ್ತು ಹನ್ನೊಂದರ ಆಸುಪಾಸು. ನಾವು ನಾಲ್ವರು ಮಕ್ಕಳು. ಹೊಟ್ಟೆಗೂ ಬಟ್ಟೆಗೂ ಪರದಾಟ. ಮನೆವಾರ್ತೆ ತೂಗಿಸಲು ಅಮ್ಮ ಹೆಣಗುತ್ತಿದ್ದುದು ನನಗೆ ಅರ್ಥವಾಗುತ್ತಿತ್ತು. ತಮ್ಮಂದಿರು, ತಂಗಿ ಚಿಕ್ಕವರು ನಿರಾಳವಾಗಿರುತ್ತಿದ್ದರು. ನನಗೆ ಅರ್ಥವಾದರೂ ಏನೂ ಮಾಡಲಾಗದ ಅಸಹಾಯಕತೆ. ಕಳವಳ, ಅಭದ್ರತೆ ನಿವಾರಿಸಿಕೊಳ್ಳಲು ಪುಸ್ತಕಗಳನ್ನು ಅರಿಸಿಕೊಂಡು ಎರಡು-ಮೂರು ಮೈಲಿ ದೂರವಿದ್ದ ಗೆಳತಿಯ ಮನೆಗೆ ಹೋಗುತ್ತಿದ್ದೆ. ಆ ಗೆಳತಿ ಶ್ರೀಮಂತಳು, ವೈದ್ಯರ ಮಗಳು. ಆ ಬಂಗಲೆ, ಆ ಕಾರು, ನಾಯಿ, ತಟ್ಟೆಯಲ್ಲಿ ಜೋಡಿಸಿಟ್ಟ ಬಿಸ್ಕತ್ತುಗಳು, ಟೀ ಕೆಟಲ್, ಅವಳ ಮನೆಯ ಆಯಾ ಎಲ್ಲವೂ ನನಗೆ ಅಚ್ಚರಿಯ ಸಂಗತಿಗಳು. ಅವಳಿಗೆ ಪ್ರತ್ಯೇಕ ಕೊಠಡಿ ಬೇರೆ ಇತ್ತು. ಅಲ್ಲಿ ಕುಳಿತು ಪುಟ್ಟ ಕೆಂಚಮ್ಮ, ನಿದ್ರಾಸುಂದರಿ, ಸಿಂಡ್ರೆಲ್ಲಾ, ಪಿನೋಕಿಯೋ, ರಾಮು ಮತ್ತು ಅವರೆ ಗಿಡ ಮುಂತಾದ ಸಚಿತ್ರ ಮಾಲಿಕೆಗಳನ್ನು ಓದಿ ಮೈಮರೆಯುತ್ತಿದ್ದೆ.

ಕಷ್ಟವನ್ನು ದಾಟಬಹುದು ಎಂದು ಪುಟ್ಟಕೆಂಚಮ್ಮ, ಸಿಂಡ್ರೆಲ್ಲಾ... ಅಂದು ಭರವಸೆ ಮೂಡಿಸಿದರು.

ಅವರು ಈಗಲೂ ನನ್ನಲ್ಲಿದ್ದಾರೆ... ಯಾಕೆ?

ನನಗಾಗ ಹದಿನಾಲ್ಕರ ವಯಸ್ಸು. ಒಂದು ದಿನ ಶಾಲೆಯಿಂದ ಹಿಂದಿರುಗಿ ಬಂದಾಗ ಅಡಿಗೆ ಮನೆಯಲ್ಲಿ ಮೌನವಾಗಿ ಕೂತು ಉಣ್ಣುತ್ತಿದ್ದ ಹೆಂಗಸೊಬ್ಬಳನ್ನು ನೋಡಿದೆ. ಆಕೆ ದೂರದ ಸಂಬಂಧಿ ಎಂದು ಗೊತ್ತಾದ ಮೇಲೆ ಗೊತ್ತಾಯಿತು. ಒಂದು ಕಾಲದಲ್ಲಿ ೫೦೦ ಮುಡಿ ಅಕ್ಕಿ ಗೇಣಿ ಪಡೆಯುತ್ತಿದ್ದವಳೆಂದೂ ಈಗ ಒಂದು ಹಿಡಿ ಅನ್ನಕ್ಕೂ ಗತಿಯಿಲ್ಲವೆಂದೂ ಅಜ್ಜಿ ಅವಳ ಕರುಣಕಥೆ ಹೇಳಿದರು. ಒಂದು ವಾರ ಹೇಗೋ ಹೊಂದಿಸಿ ಒಂದು ಹೊತ್ತು ಅವಳಿಗೆ ಊಟ ಹಾಕುವುದಕ್ಕೆ ಅಜ್ಜಿ-ಅಮ್ಮನ ನಡುವೆ ಒಪ್ಪಂದವಾಯಿತು. ಅಜ್ಜಿ ಅಮ್ಮ ಅವರ ಊಟದ ಪಾಲಿನಲ್ಲಿ ಎರಡು ತುತ್ತು ತ್ಯಾಗ ಮಾಡಿರಲಿಕ್ಕೂ ಸಾಕು!

ಶ್ರೀಮಂತರಿಗೆ ಕಷ್ಟ ಬರಬಾರದು! ಹೇಗಿದ್ದವಳು ಹೇಗಾದಳು?! ಒಂದು ಹಿಡಿ ಅನ್ನಕ್ಕಾಗಿ

ನಮ್ಮ ಮನೆಯ ಬಾಗಿಲಿಗೆ ಬರುವಂತಾಯಿತೇ? ಎಂದು ಅಜ್ಜ-ಅಮ್ಮ ಆಕೆಗಾಗಿ ದುಃಖಿಸುತ್ತಿದ್ದರು.

ಆ ಹೆಂಗಸಿನ ಆ ನಿರ್ಭಾವ ಮುಖ ಇವತ್ತಿಗೂ ನನ್ನಲ್ಲಿದೆ ಯಾಕೆ?

ನನಗಾಗ ಹದಿನೆಂಟರ ವಯಸ್ಸು. ಆದೇ ತಾನೆ ಕೆಲಸಕ್ಕೆ ಸೇರಿದ್ದೆ. ಒಂದು ದಿನ ಬೆಳಿಗ್ಗೆ ಕೌಂಟರಿನಲ್ಲಿ ಕುಳಿತು ಕೆಲಸ ನಿರ್ವಹಿಸುತ್ತಿದ್ದಾಗ ಪುಟ್ಟ ಹುಡುಗನೊಬ್ಬ ಬಂದು ಕೆಂಪು ಗುಲಾಬಿ ನೀಡಿದ. ಮಾರನೆಯ ದಿನ ದಾಳಿಂಬೆ ಹಣ್ಣು ಅದರ ಮೂರನೆಯ ದಿನ 'ಈದ್'ಗೆ ಮನೆಗೆ ಬರಬೇಕೆಂಬ ಆಹ್ವಾನ. ಮರುದಿನ ಅಂಚೆಯಲ್ಲಿ ಪತ್ರ. ಆ ಪುಟ್ಟ ಹುಡುಗನ ಹಿಂದೊಬ್ಬ ದೊಡ್ಡ ಹುಡುಗನಿದ್ದ... ಆ ಮುಸ್ಲಿಂ ಹುಡುಗ ಅಚ್ಚ ಕನ್ನಡದಲ್ಲಿ ಬರೆದಿದ್ದ ಆ ಪತ್ರದಲ್ಲಿ ಬಂಗಡೆ ಮೀನು, ಗುಳ್ಳ, ಸಮುದ್ರದ ಹಿನ್ನೀರು, ಅವನ ಅಕ್ಕತಂಗಿಯರ ವಿವರ! ನಾನು ಎಚ್ಚೆತ್ತುಕೊಂಡೆ. ಎಲ್ಲಾದರೂ ಈ ಸುದ್ದಿ ಸೋರಿ ಅವನಿಗೆ ದಂಡನೆಯಾದರೇನು ಗತಿ ಎಂದು ಆಲೋಚಿಸಿ 'ನನಗೆ ಪತ್ರ ಬರೆಯಬೇಡ. ಒಳ್ಳೆಯ ಕೆಲಸ ಹಿಡಿದು ಸುಖವಾಗಿ ಬಾಳು, ನನಗೆ ಮದುವೆ ಗೊತ್ತಾಗಿದೆ' ಎಂದು ಸುಳ್ಳು ಸುಳ್ಳೇ ಬರೆದೆ. ಎರಡು ವರುಷ ಕಳೆದ ಮೇಲೆ ದುಬಾಯ್‌ನಿಂದ ಪತ್ರ ಬಂತು. ಅವನಿಗಲ್ಲಿ ಕೆಲಸ ಸಿಕ್ಕಿತ್ತು. ಒಮ್ಮೆ ಪಾರ್ಸಲ್ ಕೂಡ ಕಳಿಸಿದ್ದ. ಹೇರುಪಿನ್ನುಗಳು, ಸೆಂಟು, ನೈಲ್‌ಕಟರ್, ನೈಲ್ ಪಾಲಿಷ್ ಇದ್ದವು. ಅವನ ಪೆದ್ದು-ಮುಗ್ಧ ಪ್ರೇಮಕ್ಕೆ ನಾನು ವಿವಶಳಾಗಿದ್ದು ನಿಜ. ಅವನಲ್ಲಿ ಪ್ರೇಮಭಾವ ಹುಟ್ಟಿಸಿದ್ದಕ್ಕೆ.... ನನ್ನ ಮೇಲೆ ನನಗೆ ಸಿಟ್ಟು ಬಂದು ಅವನಲ್ಲಿ ಕ್ಷಮೆ ಯಾಚಿಸಬೇಕು ಎಂದೆನಿಸಿದ್ದೂ ಉಂಟು.

ಆ ಹುಡುಗನ ನೆನಪು ಈಗಲೂ ನನ್ನಲ್ಲಿದೆ... ಯಾಕೆ?

ನನಗಾಗ ಮೂವತ್ತರ ವಯಸ್ಸು. 'ಬೆಳ್ಳಿ' ತೀರಿಕೊಂಡಳು ಎಂದು ಸುದ್ದಿ ಬಂತು. ಹೆರಿಗೆ ಮಾಡಿಸಿ, ಮೂರು - ನಾಲ್ಕು ತಿಂಗಳು ಅಲ್ಲಿಯೇ ಇದ್ದು ಬಾಣಂತಿ-ಮಗುವನ್ನು ಉಪಚರಿಸಿ ನಂತರ ಮತ್ತೊಂದು ಹೆರಿಗೆ ಮನೆ ಹುಡುಕಿಕೊಂಡು ಹೋಗುವುದನ್ನೇ ಕಾಯಕ ಮಾಡಿಕೊಂಡು ಅದರಲ್ಲೇ ಜೀವ ತೇದ ಆ ಮುದುಕಿ, ಇಳಿಗಾಲದಲ್ಲಿ ಯಾರೂ ಇಲ್ಲದೆ ನೊಂದು-ಬೆಂದು ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಳು. ನೂರು ಮಕ್ಕಳನ್ನು ಜಗತ್ತಿಗೆ ಪರಿಚಯಿಸಿದ ಮಹಾಮಾಯಿಗೆ ಒಂದು ಹಿಡಿ ಕೂಳು, ಒಂದು ಚೂರು ಸೂರು ಸಿಗಲಿಲ್ಲವೆಂದರೆ... ಬದುಕಿನ ಈ ವೈರುಧ್ಯವನ್ನು ಹೇಗೆ ವಿಶ್ಲೇಷಿಸುವುದು?

ಅವಳು ಈಗಲೂ ನನ್ನಲ್ಲಿದ್ದಾಳೆ. ಯಾಕೆ?

ನನಗೀಗ ನಲವತ್ತು... ಬಮಿಯಾನಿನ ಬೆಟ್ಟದಲ್ಲಿ ನಿಂತಿದ್ದ ಜಗತ್ತಿನ ಅತಿ ಎತ್ತರದ ಬುದ್ಧ ನೆಲಕ್ಕುರುಳಿದ ದಿನ ಮನಸ್ಸಿಗೆ ಮಂಕು ಕವಿಯಿತು. ಕಾರುಣ್ಯಮೂರ್ತಿಗೆ ಎಂಥಾ ಕೊನೆ?

ಯಾವುದೋ ದೇಶದಲ್ಲಿ ಯಾವುದೋ ಬೆಟ್ಟದಲ್ಲಿ ... ಶಿಥಿಲವಾಗಿದ್ದ ಕಲ್ಲಿನ ಮೂರ್ತಿಯೊಂದು ಉರುಳಿದರೆ ನಾನೇಕೆ ಘಾಸಿಗೊಳ್ಳಬೇಕು?

ಈಗಲೂ ಆ ಬೆಟ್ಟ, ಆ ಬುದ್ಧ ನನ್ನಲ್ಲಿದ್ದಾನೆ ಯಾಕೆ?

ಇದೀಗ ನಲವತ್ತೈದರ ಹೊಸಿಲಲ್ಲಿ ನಿಂತು ನೋಡುತ್ತಿರುವೆ; ಇಷ್ಟು ದಿನ ಅನ್ನ ಉಣಿಸಿದ ರೈತ ಹತ್ತೋ ಇಪ್ಪತ್ತೋ ಸಾವಿರ ಸಾಲ ತೀರಿಸಲಾಗದೆ ಪ್ರತಿದಿನ ಎಂಬಂತೆ ಸಾವಿಗೆ ಶರಣಾಗುತ್ತಿರುವುದನ್ನೂ... ಅಧಿಕಾರಕ್ಕಾಗಿ ಮೋಸ, ಮೋಸದಿಂದ ಮತ್ತೆ ಅಧಿಕಾರ ಎಂಬ

ನಾಟಕದಲ್ಲಿ ನಿರಂತರವಾಗಿ ನಮ್ಮ ರಾಜಕಾರಣಿಗಳು ಪಾತ್ರಧಾರಿಗಳಾಗಿ ನಟಿಸುತ್ತಿರುವುದನ್ನೂ... ಆ ನಾಟಕವನ್ನು ಮೌನದಿಂದ ವೀಕ್ಷಿಸುತ್ತಿರುವ ಪ್ರೇಕ್ಷಕ ವೃಂದದಲ್ಲಿ... ಹೌದು ಅದು ನಾನೇ... ಒಂದು ಕ್ಷಣ ಬದುಕಿದ್ದರೂ ಸತ್ತಂತೆ ಅನಿಸುವುದು ಯಾಕೆ?

ಹಲಸಿನ ಮಿಡಿ ಕಿತ್ತುಹಾಕಿದ್ದು ನಿನ್ನೆ ಮೊನ್ನೆ ನಡೆದಂತಿದೆ... ಏನಿತ್ತೋ ಏನಿಲ್ಲವೋ... ಯಾವುದರ ಬಗ್ಗೆಯೂ ತಲೆಕೆಡಿಸಿಕೊಳ್ಳದೆ ಇದ್ದುದರಲ್ಲೇ ಕಾಲು ಚಾಚಿ ಗಾಢ ನಿದ್ರೆಗೆ ಸಂದುಹೋಗುತ್ತಿದ್ದೆವಲ್ಲಾ... ಬಣ್ಣ ಬಣ್ಣದ ಕನಸುಗಳು ಬೀಳುತ್ತಿದ್ದವಲ್ಲಾ...

ಎಲ್ಲಾ ಎಷ್ಟು ಬೇಗ ಬದಲಾಗಿದೆ... ಕ್ಷಣ ಕ್ಷಣಕ್ಕೂ ಬದಲಾಗುತ್ತಿದೆ...

ಎಲ್ಲೆಲ್ಲೂ ಗಾಜಿನ ಮನೆಗಳು ಅಣಕಿಸುತ್ತಿವೆ...

ನೋಯಿಸುವವರು, ಬೇಯಿಸುವವರು ಆಗಲೂ ಇದ್ದರು. ನಾವು ಮುಯ್ಯಿ ತೀರಿಸುವುದರಲ್ಲಿ ಕಡಿಮೆಯೇನೂ ಇರಲಿಲ್ಲ, ತಾಳು... ದೇವರು ನೋಡಿಕೊಳ್ಳುತ್ತಾನೆ ಎಂದು ತಪ್ಪು ಸರಿಗಳನ್ನು ದೇವರಿಗೆ ಒಪ್ಪಿಸಿ ಹಗುರಾಗುತ್ತಿದ್ದೆವು...

ಹೀಗೆ ಸಣ್ಣಸಣ್ಣ ಸಂಗತಿಗಳು... ಕಸ, ಕಡ್ಡಿ, ಎಲೆ, ಹೂವು, ಕೊಂಬೆ, ರೆಂಬೆಗಳಂತೆ ಜೀವನ ಪ್ರವಾಹದಲ್ಲಿ ತೇಲಿ ತೇಲಿ ಹೋಗುವುದು. ಮನಃಪಟಲದ ಮೇಲೆ ಮೂಡುವ ನೂರಾರು ಚಿತ್ರ-ವಿಚಿತ್ರಗಳಲ್ಲಿ ಯಾವುದೋ ಒಂದು ಬೇರ್ಪಡಿಸಲಾಗದಂತೆ ಭಿತ್ತಿಗೆ ಅಂಟಿಕೊಳ್ಳುವುದು. ಅದಕ್ಕೆ ಕೈಕಾಲು ಮೂಡುವುದು, ಜೀವ ಆಡುವುದು, ಯಾಕೆ? ಯಾಕೆ ಆಡುವುದೋ... ತಿಳಿಯದು.

ಎಚ್.ಐ.ಜಿ. ೩, 'ನುಡಿ' ಕಲ್ಲಳ್ಳಿ ಬಡಾವಣೆ,
ವಿನೋಬಾನಗರ, ಶಿವಮೊಗ್ಗ - ೪
ದೂರವಾಣಿ : ೯೪೪೯೨೪೨೨೮೪



ಲೋಕದಲ್ಲಿ ಪುಟ್ಟಿದ ಬಳಿಕ...

ಸೀರೆ ಸುತ್ತಿಕೊಳ್ಳುವಾಗ ದ್ರೌಪದಿ
ಉಂಗುರ ಎತ್ತಿಕೊಳ್ಳುವಾಗ ಶಕುಂತಲೆ
ಒಲೆ ಹೊತ್ತಿಕೊಳ್ಳುವಾಗ ಸೀತೆ
ಯಾಕೆ? ಯಾಕೆ ನೆನಪಾಗಬೇಕು?

ಕೆರೆಯ ಏರಿಯ ಮೇಲೆ ಭಾಗೀರಥಿ
ಎಡವಿದ ಕಲ್ಲುಗಳಲಿ ಒಬ್ಬೊಬ್ಬಳೂ ಮಹಾಸತಿ
ಯಾಕೆ? ಯಾಕೆ ಕಾಣಬೇಕು?

ಚಿತೆಯಿಂದ ಎದ್ದು ಹಾರುವ ಬೂದಿ
ಲತೆಯಿಂದ ಕಳಚುವ ಮೊಗ್ಗಿನ ಬೇಗುದಿ
ನನ್ನದೆ ನನ್ನದೆ ಎಂದು ಯಾಕೆ ಅನಿಸಬೇಕು?

'ನಡುವೆ ಸುಳಿವಾತ್ಮ ಗಂಡೂ ಅಲ್ಲ ಹೆಣ್ಣೂ ಅಲ್ಲ'
ಯಾವುದಕೂ ಪ್ರಮಾಣಿಸಿ ನೋಡಬೇಕು

ಮೊಲೆ, ಮುಡಿ, ಉಡಿ....
ಹೊತ್ತು ತಿರುಗಿದ ಮೇಲೆ ಅನಿಸಿದ್ದು :
ಕಷ್ಟ ಕಳೆಯಬೇಕು.

ಜಾತ್ರೆಯಲ್ಲಿ ಶಿವ

೧

ಅದೇ ಆ ಶಿವನ ವೇಷಧಾರಿ
ನಾನಿದ್ದ ಬಸ್ಸಿನಲ್ಲಿಯೇ ಇದ್ದ
ನನ್ನೊಂದಿಗೆ ಬಸ್ಸಿನಿಂದಿಳಿದ

ತೇಗದ ಮರದ ಹಾಗೆ
ಉದ್ದಕೆ ಸಪೂರ
ಮೋಡದ ಮೈ ಬಣ್ಣ ಮಿಂಚಿನ ನಗು
ಮುಡಿಗೆ ತಗಡಿನ ಚಂದ್ರನನು ಮುಡಿದಿದ್ದ
ತೋಳಿಗೆ ಕಣಗಿಲೆಯ ಹೂವು
ಕೊರಳಲ್ಲಿ ಪ್ಲಾಸ್ಟಿಕ್ ಹಾವು
ಹುಲಿ ಚರ್ಮದ ಚಿತ್ರವಿರುವ
ಮಾಸಿದ ಹಳದಿ ಬಣ್ಣದ ಅರ್ಧ ಲುಂಗಿ
ಹವಾಯಿ ಚಪ್ಪಲಿ ಧರಿಸಿದ್ದ

ನನ್ನ ಬೆರಗಿಗೆ ಉತ್ತರ
ನೀಡುವವನಂತೆ
ಡಮರುಗವ ನುಡಿಸಿ
ತ್ರಿಶೂಲ ಆಡಿಸಿ
ಕಾಲ್ಗೆಜ್ಜೆ ಗಲಗಲ ಕುಣಿಸಿ
ನಾ... ಶಿವ ಎಂದ

೨

ನಾ... ಮುಂದೆ ಅವ... ಹಿಂದೆ
ಜಾತ್ರೆಯ ಕೌಂಟರಿನಲ್ಲಿ
ಟಿಕೇಟು ಕೊಳ್ಳುವಾಗಲೂ
ಬೆನ್ನ ಹಿಂದೆಯೇ ಇದ್ದ
ಗಿಲೀಟು ಒಡವೆಯಂಗಡಿಯಲ್ಲಿ
ಕಣ್ಣ ಮುಂದೆಯೇ ಬಂದ
ಫಳಫಳ ಹೊಳೆಯುವ
ಮೂಗುತಿಯನು ಅಂಗೈಯೊಳಗೆ
ಹೊರಳಾಡಿಸಿ
ಈ ವಜ್ರಕ್ಕೆಷ್ಟಪ್ಪಾ ಬೆಲೆ
ಎಂದು ಅಂಗಡಿಯಾತನ ಛೇಡಿಸಿದ

ಪುಗ್ಗೆಯಂಗಡಿಯಲ್ಲಿ ಒಂದೊಂದೂ
ಪುಗ್ಗೆಯ ಮೇಲೂ ಮೃದುವಾಗಿ ಕೈಯಾಡಿಸಿ
ಪರಪರ ಶಬ್ದಕ್ಕೆ ಕಿವಿಯಾನಿಸಿ
ಬಾಗಿಲು ದಾಟುವುದರೊಳಗೆ
ಠುಸ್ಸೆನ್ನುವುದೀ ಪುಗ್ಗೆ ಜೊತೆಗೆ
ಹಿಗ್ಗಿನ ಬುಗ್ಗೆ ಎಂದು ಅಲ್ಲೇ ಪದ ಕಟ್ಟಿ ಹಾಡಿ
ಒಂದು ಪೀಪಿ ಒಂದು ವಾಚು ಪುಕ್ಕಟೆ ಪಡೆದ

ಬಣ್ಣ ಬಣ್ಣದ ಪರಕಾರಗಳ ತೆಗೆಸಿ
ಪೂರ ಅಂಗಡಿಯನೆ ಎಳೆದಾಡಿಸಿ
ಚೌಕಾಸಿ ಬೆಲೆಯಲ್ಲೇ
ಒಂದು ಗಜ ರವಿಕೆಯ ಬಟ್ಟೆ ಕೊಂಡ

ಕೆಂಪು ನೀರಿನ ಶರಬತ್ತಿನಂಗಡಿಯಲ್ಲಿ
ಗಿಣಿಶಾಸ್ತ್ರದವನೊಡನೆ ಹರಕು
ಛತ್ರಿಯ ಅಡಿಯಲ್ಲಿ...
ಕರಡಿ ಮಜಲು ಕುಣಿತದ
ಕರಡಿಯಾಸದವನೊಡನೆ
ಅಲ್ಲಿ... ಇಲ್ಲಿ... ಇಲ್ಲಿ... ಅಲ್ಲಿ
ಜಾತ್ರೆಯ ಉದ್ದಗಲ ಹಬ್ಬಿ ನಿಂತವನು
ಮೋಟು ಬೀಡಿಯ ಸೇದುತ್ತ
ಕಡಲೆಯ - ಪುರಿಯ
ಗುಡ್ಡವ ದಾಟಿ ಹೋದ

೩

ಹೋದ ಎನ್ನುವಷ್ಟರಲ್ಲಿಯೇ
ಬಸ್ಟಾಪಿನ ಅಂಗಡಿಯಲ್ಲಿ
ಪರಿಚಿತ ನಗೆಯೊಡನೆ ಪ್ರತ್ಯಕ್ಷ!

ಮೆಲ್ಲನೆ ಬಳಿ ಸಾರಿ ಗೋಣ ಬಗ್ಗಿಸಿ
ಮಗ ಹಸಿದಿದ್ದಾನೆ-
ಹೆಂಡತಿಗೆ ಕಾಯಿಲೆ ಅಂದ
ಬಾಡಿದ ಮುಖ, ಬಸಿದಿತ್ತು ದುಃಖ

ಗಣಪ ಹಸಿದಿದ್ದಾನೆ
ಗಿರಿಜೆಗೆ ಕಾಯಿಲೆ...
ಹೆಂಡತಿ-ಮಕ್ಕಳಿಗಾಗಿ
ಶಿವನಲ್ಲದೆ ಭವಿ ಅಳುವನೆ?!

ಪುಟ್ಟ ಪರ್ಸಿನ ಮೂಲೆ ಮೂಲೆಯನು ತಡವಿ
ರುದ್ರನೊಡ್ಡಿದ ಬೊಗಸೆಗೆ
ಐದರ ನೋಟಿರಿಸಿ ಇಷ್ಟೇ ಅಂದೆ!

ಮಿಂಚಂತೆ ಹೊಳೆದು
ತಳಾಂಗು ತದಿಗಿಣ ತೋಂ ಎಂದು
ನಾಟ್ಯದ ಮಟ್ಟಿನಲ್ಲಿ ಕುಣಿದು
ಅರ್ಧ ನಿಮೀಲಿತ ನೇತ್ರನಾಗಿ
ನಟರಾಜನ ಭಂಗಿಯಲ್ಲಿ ನಿಂತುಬಿಟ್ಟ!

ಬಿಟ್ಟ ಬಾಯಿ ಬಿಟ್ಟಂತೆಯೇ
ನೆಟ್ಟ ಕಣ್ಣು ನೆಟ್ಟಂತೆಯೇ
ಎರಡೂ ಕೈ ಜೋಡಿಸಿ
ಮೈದುಂಬಿ ನುಡಿದುಬಿಟ್ಟೆ...

ಸಾಕ್ಷಾತ್ ಶಿವ...
ಸಾಕ್ಷಾತ್ ಶಿವ !!



◆ ಸವಿತಾ ನಾಗಭೂಷಣ

ಪುಸ್ತಕ ಪರಿಚಯ

'ಆವರಣ'ವೂ ಇನ್ನೊಂದು ಆವರಣವೇ...

◆ ಆನಂದ ಝುಂಜರವಾಡ



ಆವರಣ

ಲೇಖಕರು : ಎಸ್.ಎಲ್. ಭೈರಪ್ಪ
ಬೆಲೆ : ರೂ. 175/- ಪುಟ : 275
ಪ್ರಕಾಶನ : ಸಾಹಿತ್ಯ ಭಂಡಾರ
ಜಂಗಮ ಮೇಸ್ತ್ರಿ ಗಲ್ಲಿ
ಬೆಂಗಳೂರು - 560 040

> "ಇದ್ದ ಜಗಳ ಸಾಲದೆಂದು ಹಡ್ಡೀ ತೆಗೆವರು"
>
> **- ಬೇಂದ್ರೆ**

ಸಾಹಿತ್ಯ ಕೃತಿ ಎಂಬ ಶೀರ್ಷಿಕೆಯಡಿ ಪುಸ್ತಕ ಒಂದು ಹೊರಬಂದು, ಕೃತಿಕಾರನಿಗೆ ನೇರ ಪರಿಚಯವಿಲ್ಲದ ಅನಂತ ಓದುಗರಿಗೆ ತಲುಪುವುದೆಂದರೆ, ಒಂದೇ ಉತ್ತರ ಪತ್ರಿಕೆಯನ್ನು ಸಹಸ್ರಾರು ಜನರಿಗೆ ಮೌಲ್ಯಮಾಪನಕ್ಕೆ ಕೊಟ್ಟಂತೆಯೇ. "ನನ್ನ ಉತ್ತರಗಳ ಮೌಲ್ಯಮಾಪನ ಶಕ್ತಿ, ನನ್ನ ಕೃತಿಯನ್ನು ನಿರಾಕರಿಸುವವರಿಗೆ ಇಲ್ಲ"ವೆಂಬ ವಾದ ಕೃತಿಕಾರನಿಗಿರುವುದು, "ನನ್ನ ದೃಷ್ಟಿಯಲ್ಲಿ ಇದು ತಪ್ಪು ಉತ್ತರ" ಎಂಬಂತೆ ಓದುಗ ಪ್ರತಿಕ್ರಿಯಿಸುವುದು, ಇದು ಸಾಹಿತ್ಯ - ಸಂವಹನದ ಜಗತ್ತಿನಲ್ಲಿ ಸಾಮಾನ್ಯವಾಗಿ ನಡೆಯುವಂತಹದೇ. ಕೃತಿಕಾರ ಮತ್ತು ಓದುಗರು ಇವರ ನಡುವೆ ನಡೆಯುವ ಅನೇಕ ಬಗೆಯ ವಿಭಿನ್ನ ಸಂಬಂಧಗಳ ಆಕೃತಿಗಳಲ್ಲಿ ವ್ಯಕ್ತವಾಗಿ, ಕೃತಿಕಾರನವರೆಗೆ ತಲುಪುವ ಮಾತುಗಳು ಯಾವ ಕಾಲಕ್ಕೂ ಅಲ್ಲವೇ. ಹೀಗಾಗಿ ಕೃತಿಯೊಂದು ಗಳಿಸುವ ಆಕಾಡೆಮಿಕ್ ಮಾನ್ಯತೆ, ಅವಜ್ಞತೆಗಳು, ಇಂದಿನ ದಿನಗಳಲ್ಲಿ ಕೃತಿಯ ಅಂತಃಸತ್ವದ ಅಸಲೀ ಸಂಕೇತಗಳಂತೂ ಆಗಲಾರವು.

ಕನ್ನಡದ ಜನಪ್ರಿಯ ಕಾದಂಬರಿಕಾರರಾದ ಡಾ. ಎಸ್.ಎಲ್. ಭೈರಪ್ಪನವರ 'ಆವರಣ'ವು ಸೃಷ್ಟಿಸಿರುವ ಅಕಾಡೆಮಿಕ್ ಖ್ಯಾತಿ, ಅಪಖ್ಯಾತಿಗಳನ್ನು ಬದಿಗಿಟ್ಟು ಒಂದು ಸೃಜನಶೀಲ ಕೃತಿಯು ಹಾಯ್ದು ಬರಬೇಕಾದ ಹಲವಾರು – ಅಂತರಂಗಿಕ ಅಗ್ನಿದಿವ್ಯಗಳಲ್ಲಿ ಈ ಕೃತಿ ಹಾಯ್ದು ಗೆದ್ದು ಬಂದಿದೆಯೆ? ಎಂಬುದನ್ನೇ ಮೂಲದಲ್ಲಿಟ್ಟುಕೊಂಡು ಗಮನಿಸಿದರೂ, 'ಆವರಣ' (ಕಾದಂಬರಿ?) ಕೃತಿಯು ಹಲವಾರು ಆಂತಕಗಳನ್ನು ಸೃಷ್ಟಿಸುತ್ತದೆ.

ಇತಿಹಾಸವನ್ನು ವಸ್ತುವನ್ನಾಗಿ ಸ್ವೀಕರಿಸುವ ಈ ಕೃತಿ ಮೊದಲು ಎದುರಿಸಬೇಕಾದ ಪ್ರಶ್ನೆ ಎಂದರೆ ಇತಿಹಾಸವೆಂದರೇನು? ಎಂಬುದೇ ಆಗಿದೆ. ಅನುಭವವೊಂದು, ದೇಶಕಾಲಗಳ ನಡುವಿನ ಘಟನೆಯ ರೂಪ ಪಡೆಯುತ್ತಿದ್ದಂತೆಯೇ ಅದಕ್ಕೊಂದು ಚಲನಶೀಲತೆ ಬರುತ್ತದೆ. ಈ ಚಲನಶೀಲತೆಗೆ ಎರಡು ದಿಕ್ಕಿನ ಯಾನದ ಸಾಧ್ಯತೆಗಳಿರುತ್ತವೆ. ಒಂದೆಂದರೆ, ಅನುಭವಿತ ಜೀವದ ಒಳಗೇ ಇಳಿದುಕೊಳ್ಳುತ್ತ, ನಿಧಿ, ಧ್ಯಾನಗಳತ್ತ ಚಲಿಸಿ, ಅಂತಿಮ ಘಟ್ಟದಲ್ಲಿ ಅಭಿವ್ಯಕ್ತಿಗೆ ನಿಲುಕದಷ್ಟು ಸೂಕ್ಷ್ಮವಾದ ಅರಿವಾಗಿ ರೂಪಾಂತರಗೊಳ್ಳುವುದು. ಇದನ್ನು "ಅನುಭವ ಕಣ"ದ ಅಂತರ್ಮುಖೀ ಯಾತ್ರೆ ಎಂದು ಕರೆಯಬಹುದು. ಆದರೆ ಈ 'ಅನುಭವ ಕಣ'ವೆನ್ನುವುದು ಒಂದು ನಿರ್ದಿಷ್ಟ ದೇಶ-ಕಾಲಗಳಲ್ಲಿ ಸೃಷ್ಟಿಯಾಗುವುದರಿಂದ, ಮತ್ತು ಅದರ ಮಧ್ಯದಲ್ಲೇ ತನ್ನ ಅಸ್ತಿತ್ವವನ್ನು ಭೌತಿಕವಾಗಿ ಉಳಿಸಿಕೊಳ್ಳಬೇಕಾಗುವುದರಿಂದ ಅದು ತನ್ನ ಜೊತೆಗೇ ಸೃಷ್ಟಿಯಾದ, ಸೃಷ್ಟಿಯಾಗುತ್ತಿರುವ ಸಹ-ಕಣಗಳೊಂದಿಗೆ, ಬೆಳೆಯಬೇಕಾಗುತ್ತದೆ. ಇದು 'ಅನುಭವ-ಕಣ'ದ ಬಹಿರ್ಮುಖೀ-ಚಲನೆ. ಘಟನೆಯು ಇತಿಹಾಸವಾಗಿ, ಚರಿತ್ರೆಯಾಗಿ ಕೊನೆಗೆ ಪುರಾಣವಾಗಿ ತಲುಪುವವರೆಗೆ ಈ ಯಾತ್ರೆ ಅಗೋಚರವಾಗಿ ನಡೆದೇ ಇರುತ್ತದೆ. ಇಂದಿನ ಘಟನೆ ನಾಳಿನ ಪುರಾಣದ ಪ್ರಾರಂಭ ಬಿಂದು. ಇಂದಿನ ಪುರಾಣ ನಿನ್ನೆಯ ಘಟನೆಯ ಇಂದಿನ ತುದಿಬಿಂದು. ಈ ಚಕ್ರಾರ ಪಕ್ತಿಯ ಚಲನೆ ನಿತ್ಯ ನಡೆದೇ ಇರುತ್ತದೆ.

ಘಟನೆಯು ಇತಿಹಾಸವಾಗಿ ಪರಿಣಮಿತವಾಗುವ ಪ್ರಕ್ರಿಯೆಯನ್ನೂ ನಾವಿಲ್ಲಿ ಗುರುತಿಸಬೇಕು. 'ಅನುಭವ-ಕಣ'ವೆಂಬ ತೀರಾ ವ್ಯಕ್ತಿನಿಷ್ಠವಾದ ಸ್ಪಂದನವು 'ಅನ್ಯ ಕಣ'ಗಳ ಸಹಯೋಗದಲ್ಲಿ ಅರ್ಥಾನುಸಂಧಾನಕ್ಕೊಳಪಟ್ಟ ತಕ್ಷಣ, 'ಅನುಭವ'ವು 'ಘಟನೆ'ಯ ಸ್ವರೂಪವನ್ನು ಪಡೆಯುತ್ತದೆ. ಹತ್ತು, ಹಲವು, ಅನ್ಯ ಸಹ-ಕಣಗಳಿಂದ, ಆರೋಪಿತ ಅರ್ಥಾನುಸಂಧಾನಕ್ಕೊಳಪಟ್ಟ 'ಅನುಭವ'ವು 'ಘಟನೆ'ಯಾಗಿ ರೂಪುಗೊಳ್ಳುತ್ತದೆ. ಒಂದು 'ಘಟನೆ' ತನ್ನ ಸಹ-ಜಗತ್ತಿನಲ್ಲಿ ಬದುಕಿರುವ ಅನ್ಯ-ಘಟನೆಗಳ ಸಾಲಿನಲ್ಲಿ ತನ್ನದೇ ಆದ ವ್ಯವಸ್ಥೆಯನ್ನು ಕಲ್ಪಿಸಿಕೊಳ್ಳುತ್ತದೆ. ಇದೇ ಇತಿಹಾಸ ನಿರ್ಮಾಣವಾಗುವ ಪ್ರಕ್ರಿಯೆ. ಒಂದು ವಿಶಿಷ್ಟ ದೇಶ ಕಾಲದಲ್ಲಿ ಹುಟ್ಟಿದ 'ಅನುಭವ-ಕಣ' ಒಂದು ಹೇಗೆ ದೇಶ-ಕಾಲಗಳ ಅವಿರತ ಪ್ರವಾಹದಲ್ಲಿ 'ಘಟನೆ'ಯ ರೂಪದ ಘಟಕಗಳ ಸಂಘಟನೆಯೂ ಆಗಿ, ಸ್ವರೂಪದಲ್ಲಿ 'ಇತಿಹಾಸ'ವಾಗಿ ರೂಪುಗೊಳ್ಳುತ್ತವೆ.

ಅನುಭವ-ಕಣ ಒಂದರ 'ಅಂತರ್ಮುಖೀ' ಮತ್ತು 'ಬಹಿರ್ಮುಖೀ' ಯಾನಗಳು, ವ್ಯಕ್ತಿಯಲ್ಲಿ, ಸಾಮೂಹಿಕ ವಲಯದಲ್ಲಿ, ಸ್ಥಾಪಿತ-ಶಕ್ತಿಕೇಂದ್ರಗಳಲ್ಲಿ ನಿರ್ಮಿಸುವ ಹಲವಾರು ದೃಶ್ಯಗಳನ್ನು ಜಿ.ಬಿ.ಯವರ 'ಸತ್ತವರ ನೆರಳು' ನಾಟಕ ತುಂಬ ಶಕ್ತಿಯುತವಾಗಿ ಹಿಡಿದಿಡುತ್ತದೆ. ಜಮದಗ್ನಿ ಕೃಷ್ಣಾಚಾರ್ಯರು, ಹಿರೇ ಆಚಾರ್ಯರು, ಈ ಎರಡು ತುದಿಬಿಂದುಗಳ ನಡುವೆ 'ಇತಿಹಾಸ'ವು ಅಲ್ಲಿ ನಿಜವಾಗಿಯೂ ಆಗುತ್ತದೆ. ಒಬ್ಬರನ್ನು ಮರೆತು ಇನ್ನೊಬ್ಬರ ಇತಿಹಾಸವನ್ನಷ್ಟೇ ಗಮನಿಸುವಂತಿಲ್ಲ.

ಒಟ್ಟಾರೆಯಾಗಿ ನಾವು ಗಮನಿಸಬೇಕಾದ ಮುಖ್ಯ ವಿಷಯವೆಂದರೆ 'ಇತಿಹಾಸ'ವೆನ್ನುವ ಕಥನವೇ

ಅರ್ಥಾರೋಪಿತ ಕಥನ. ಈ ಅರ್ಥಾರೋಪಣೆಯ ಸಾಧ್ಯತೆಗಳು ಅನಂತವಾಗಿರುತ್ತವೆ. ಈ ಅರ್ಥಾರೋಪಿತ ಕಥನವಾಗಿ ನಮಗೆ ಇತಿಹಾಸವು ಸಿಕ್ಕುವುದೂ ಎರಡು ಮುಖ್ಯ ಮಾಧ್ಯಮಗಳಲ್ಲಿ. ಒಂದು ಭಾಷೆ, ಇನ್ನೊಂದು ಜಡವಸ್ತುಗಳು. ಭಾಷೆಗಿರುವ ಅರ್ಥಸಾಧ್ಯತೆಯ ಬಗೆಗೆ – ಅದು ಶಾಸನವಾಗಿರಲಿ, ಶಿಲಾಲಿಪಿಯಾಗಿರಲಿ, ಬಿಡಿಸಿದ ಚಿತ್ರವಾಗಿರಲಿ, ತಾಡೋಲೆಯ ಪ್ರತಿಯಾಗಿರಲಿ – ಬಹಳ ವಿವರವಾಗಿ ಏನೂ ಹೇಳಬೇಕಾಗಿಲ್ಲ. ಒಂದು ಶಾಸನವನ್ನು ಓದಿ ಒಂದು ಕಾಲದ ಇತಿಹಾಸವನ್ನು ಅರ್ಥವಿಸುವಾಗ ಆ ಶಾಸನದ ಭಾಷೆಗೆ ಆ ದೇಶಕಾಲದಲ್ಲಿ ರೂಪುಗೊಂಡ ಪ್ರಜ್ಞೆಯೊಂದು ತನ್ನದೇ ಆದ ಮಿತಿಯಲ್ಲಿ ಸ್ಪಂದಿಸುತ್ತಿರುತ್ತದೆ. ಒಂದು ಇತಿಹಾಸ ಗ್ರಂಥವನ್ನು ಓದಿ, ಆ ಕಾಲದ ಸತ್ಯವನ್ನು ತಿಳಿಯುವೆನೆಂದು ಹೊರಟವರೂ, ಬೇರೊಂದು ದೇಶಕಾಲದ ದೂರದಲ್ಲಿ ರೂಪಿತವಾದ ಭಾಷೆಯನ್ನು ತಮ್ಮ ಹಲವು ಇಕ್ಕಟ್ಟುಗಳ ವಾಸ್ತವದಲ್ಲಿ ಅರ್ಥವಿಸಿಕೊಂಡೇ ಆ ಕಾಲದ ಮಿತ ಸತ್ಯವನ್ನೋ, ಅರೆ ಸತ್ಯವನ್ನೋ ಅರಿಯುತ್ತಿರುತ್ತಾರೆ. ಒಬ್ಬ ವ್ಯಕ್ತಿ, ಸಾವಿರ ಗ್ರಂಥಗಳ ನೆರವಿನಿಂದ ಒಂದು ಕಾಲದ ಐತಿಹಾಸಿಕ ಸತ್ಯವನ್ನು ಅಧಿಕೃತವಾಗಿ ನಾನು ಬಿಚ್ಚಿಡುತ್ತಿದ್ದೇನೆಂದು ಹೊರಟರೂ, ಅವನ ಓದಿಗೆ ದಕ್ಕದ, ಸಿಕ್ಕದ ಗ್ರಂಥಗಳೂ ಇರುತ್ತವೆ. ಸಿಕ್ಕ ಗ್ರಂಥಗಳಿಗೂ ಈ ವ್ಯಕ್ತಿಗೆ ದಕ್ಕದ ಅರ್ಥ ಸಾಧ್ಯತೆಗಳೂ ಇರುತ್ತವೆ.

ಎಸ್.ಎಲ್. ಭೈರಪ್ಪನವರ 'ಆವರಣ' ಕೃತಿಯ ಮೂಲ ತೊಂದರೆ ಎಂದರೆ, ಅದರಲ್ಲಿ ನಿಹಿತವಾದ ಅನುಭವರಹಿತ ಸಾಕ್ಷ್ಯಾಧಾರಗಳಿಂದ ರೂಪುಗೊಂಡ ದರ್ಶನ, ಮತ್ತು ಈ ದರ್ಶನವೇ ಅಂತಿಮವೆನ್ನುವ ರೀತಿಯ ಹಟ. ಇದರಿಂದಾಗಿ ಇಡೀ ಕಾದಂಬರಿ ಒಂದು ಪ್ರಾಯೋಜಿತ ಪ್ರಾತ್ಯಕ್ಷಿಕೆಯಾಗಿದೆಯೇ ವಿನಾ, ಇತಿಹಾಸವನ್ನು ಅನುಭವದ ನೂಲಿನಲ್ಲಿ ಕಟ್ಟಿದ ನೇಯ್ಗೆಯಾಗಿಲ್ಲ. ಇಸ್ಲಾಂ ಸಂಸ್ಕೃತಿಯ ಕುರೂಪದರ್ಶನವನ್ನು ಕೃತಿ ರಚನೆಯ ಪೂರ್ವದಲ್ಲೇ ಸಂಕಲ್ಪಬದ್ಧವಾಗಿ ಸ್ವೀಕರಿಸಿದ ಲೇಖಕರ ಅಭಿನಿವೇಶ, ನಂತರ – ಮಕ್ಕಳು ಬಿಡಿಬಿಡಿ ಹುಂಡುಗಳನ್ನು ಜೋಡಿಸಿ ಆಟದ ಮನೆ ಕಟ್ಟಿದಂತೆ – ಕಾದಂಬರಿಯಂತಹ ಆಕೃತಿಯೊಂದನ್ನು ಕಟ್ಟಲು ತೊಡಗಿದೆ. ಹೀಗಾಗಿ 'ಆವರಣ'ದಲ್ಲಿ 'ಕಟ್ಟುವ' ಕೆಲಸ ಪ್ರಖರವಾಗಿ ನಡೆದಷ್ಟು 'ಸೃಷ್ಟಿಸುವ' ಕೆಲಸ ನಡೆದಿಲ್ಲ. ಭೈರಪ್ಪನವರಿಗೆ ಅವರ ಕಾದಂಬರಿ ರಚನಾ ಪ್ರಕ್ರಿಯೆಯ ಇತಿಹಾಸದಿಂದ ದಕ್ಕಿದ ತಾಂತ್ರಿಕ ಕೌಶಲಗಳನ್ನು ಅವರು ತಮ್ಮ ಈ ಕೃತಿಯಲ್ಲಿ, ತಮ್ಮದು ಬರೀ 'ಕಟ್ಟುವಿಕೆ'ಯಲ್ಲ, ಎಂಬುದನ್ನು ಸಿದ್ಧಪಡಿಸಲು ಸಾಕಷ್ಟು ಪ್ರಮಾಣದಲ್ಲಿ ಬಳಸಿಕೊಂಡಿದ್ದರೂ, ಅವು ಅವರ ನಿಶ್ಚಲ ನಿಲುವಿನಿಂದಾಗಿಯೇ ಸಫಲವಾಗಿಲ್ಲ.

ಸುಳ್ಳಿನ ಮೂಲ ಮತ್ತು ನಾಶದ ಬಗೆಗೆ, ಭೈರಪ್ಪನವರೇ ಬರೆದ 'ಸಾಕ್ಷಿ'ಯ ಸಾಫಲ್ಯದ ಮೂಲ, ಅದು ತೂರ್ಯಾವಸ್ಥೆಯಲ್ಲಿ ಆಧರಿಸುವ ಅತೀಂದ್ರಿಯ ಲೋಕ 'ಆವರಣ'ದಲ್ಲಿದೆ ಎಂಬುದಾದರೂ ಭೈರಪ್ಪನವರನ್ನು ಕಾಡಬೇಕಾಗಿತ್ತು. ಅಂದರೆ ಲೋಕ-ಸತ್ಯಗಳಲ್ಲಿ ಹುದುಗಿದ ಸತ್ಯ-ಸುಳ್ಳುಗಳ ಪರಾಮರ್ಶೆ, 'ಲೋಕ-ಸತ್ಯ'ದ ದೃಶ್ಯಗಳನ್ನೇ ಆಧರಿಸಿ ನಡೆಯುವುದಿಲ್ಲ ಎಂಬ ಸತ್ಯವನ್ನು ಅವರ 'ಸಾಕ್ಷಿ'ಯೇ ಹೇಳುತ್ತದೆ. ಪ್ರತಿಯಾಗಿ 'ಆವರಣ'ದಲ್ಲಿ ಲೋಕಸತ್ಯದ ಒಡಲಲ್ಲಿ – ಅದೂ ದೇಶ ಕಾಲಗಳ ದೀರ್ಘ ದೂರದಲ್ಲಿ ಸಾಂಸ್ಕೃತಿಕ ಅಪರಿಚಿತತೆಯ ಅನಿವಾರ್ಯತೆಗಳ ನಡುವೆ, — ಹುದುಗಿದ ಸುಳ್ಳು -ಸತ್ಯಗಳ ಪರಾಮರ್ಶೆಯನ್ನು ಲೋಕ-ಸತ್ಯಗಳ ಬಗೆಗೆ ತಮತಮಗೆ ತಿಳಿದಂತೆ ದಾಖಲಿಸಿದ ಭಾಷಿಕ-ಪಠ್ಯಗಳನ್ನು ಆಧರಿಸಿ ಭೈರಪ್ಪನವರು ಮಾಡತೊಡಗುತ್ತಾರೆ. ಮಾತ್ರವಲ್ಲ 'ಇದು ಇರುವುದೇ ಹೀಗೆ' ಎಂಬ ವೈಚಾರಿಕ - ಶಾಠ್ಯ ಒಂದು ಕೃತಿಯ ಅಂಚಿನಲ್ಲಿ ಮಿಂಚಾಡುತ್ತದೆ. "ಈ ದೃಶ್ಯ, ಈ ಮೂಲೆಯಲ್ಲಿ ನಿಂತು ಕಂಡರೆ ಮಾತ್ರ ಹೀಗೆ ಕಾಣುತ್ತದೆ" ಎಂಬ ನಮನಶೀಲತೆಯ ಗೈರುಹಾಜರಿಯಿಂದಾಗಿ ಕೃತಿಯನ್ನು ಓದಿದ ನಂತರ, ಕೃತಿಕಾರರ ದರ್ಶನದ ಜೊತೆಗೆ ಸಂವಾದಕ್ಕಿಳಿದರೆ, 'ವಿತಂಡ', 'ಜಲ್ಪ'ಗಳನ್ನೇ ಆಧರಿಸುವುದು – ಅದು

ನಿರರ್ಥಕವಾದರೂ – ಅನಿವಾರ್ಯವಾಗಿ ಬಿಡುವಂತೆ ಕೃತಿಯೊಳಗಿನ ವೈಚಾರಿಕ ಲಯವಿದೆ.

'ಇತಿಹಾಸ'ವೆಂಬ ಘಟನಾ-ಚಕ್ರದ ನಿರಂತರ ಚಲನಶೀಲತೆ ಮತ್ತು ತನ್ಮೂಲಕ ವರ್ತಮಾನಕ್ಕೆ ದಕ್ಕುವ ಇತಿಹಾಸ, ವರ್ತಮಾನದ ಎಲ್ಲ ದೋಷ ಮತ್ತು ಮಿತಿಗಳ ಮಧ್ಯ ದಕ್ಕಿದ್ದು ಎಂಬ ಅರಿವಿನಿಂದ ಆ ಇತಿಹಾಸದ ಸಂಕಥನದಲ್ಲಿನ 'ಐತಿಹಾಸಿಕತೆ'ಯ ಸಿಪ್ಪೆಯನ್ನು ಸುಲಿದೊಗೆದು ಅದರೊಳಗಿನ ಮನುಷ್ಯರ ಬಾಳಿನ ಕತೆಯನ್ನು, ಮನುಕುಲದ ಅಜಸ್ರ ನೋವಿನ, ಉಪಶಮನದ, ಚಿತ್ರಗಳನ್ನಾಗಿ ಕಾಣುವ, ಕಾಣಿಸುವ ಎತ್ತರ ಮತ್ತು ಎಚ್ಚರ, ಎರಡರಿಂದಲೂ 'ಆವರಣ' ಕೃತಿ ದೂರವಾಗಿದೆ.

ಸೃಷ್ಟಿಕ್ರಮ ಒಂದು ಪ್ರಾಯೋಜಿತ ದೇಖಾವೆಯಾದಾಗ ಅದು ಅನೇಕ ವ್ಯವಸ್ಥೆಗಳನ್ನು ತನ್ನ ಅಸ್ತಿತ್ವೀಯ ಅಗತ್ಯಗಳನ್ನಾಗಿ ಬಳಸಿಕೊಳ್ಳುತ್ತದೆ. 'ಆವರಣ'ದಲ್ಲಿಯೂ ಅಂಥ ಅನೇಕ ರಕ್ಷಣಾತ್ಮಕ ವ್ಯವಸ್ಥೆಗಳಿವೆ. ಹಿಂದಿನವರು ಮಾಡಿದ ತಪ್ಪಿಗೆ ಇಂದಿನವರು ಜವಾಬ್ದಾರರಲ್ಲ ಎಂದು ಹೇಳುತ್ತಲೇ ಇಂದಿನವರು ಏನು ಮಾಡಿದರೂ ಹಿಂದಿನವರ 'ರಕ್ತಗತ' ಕುರೂಪಗಳಿಂದ ದೂರ ಬರುವುದು ಕಷ್ಟ ಎಂಬುದನ್ನು ಅಮೀರನ ಪಾತ್ರ ಸ್ಪಷ್ಟವಾಗಿಯೇ ಹೇಳುತ್ತದೆ. ಅಮೀರನ ಪರಂಪರೆಯ ಮುಂದುವರಿಕೆ ಅಸರ್‌ನ ರೂಪದಲ್ಲೇ ಆಗುತ್ತದೆ ಎಂಬ ಸೂಕ್ಷ್ಮ ಸಂದೇಶವೂ ಕೃತಿಯಲ್ಲಿದೆ. ಅತ್ಯಾಧುನಿಕ ಕಾಲದ ಒತ್ತಡಗಳಲ್ಲಿ ಎಲ್ಲ ಸಂಸ್ಕೃತಿಗಳೂ ಜಾಗತೀಕರಣದ ದಬ್ಬಾಳಿಕೆಗೆ ಒಳಗಾಗಿದ್ದರೂ ಆ ಪೀಳಿಗೆಯ ಮುಂದುವರಿಕೆಯಾದ ಅಸರ್‌ನಲ್ಲಿ ಅದು ಅವನ "ಧಾರ್ಮಿಕ ಮೂಢನಂಬಿಕೆ"ಯನ್ನು ನಾಶ ಮಾಡಿಲ್ಲ ಎಂಬ ಎಚ್ಚರವನ್ನೂ ಕೃತಿಯ ಒಂದು ದೃಶ್ಯ ಚಿತ್ರಿಸುತ್ತದೆ. 'ಇಸ್ಲಾಂ'ನ ಕುರೂಪ ಚಿತ್ರಣಕ್ಕೆ ಹೊರಟ ಕೃತಿಕಾರರು ಅವರ 'ಸ್ವ-ಸಂಸ್ಕೃತಿ'ಯೂ ಸಮಕಾಲೀನ ಸಂದರ್ಭದಲ್ಲಿ ಛಿದ್ರೀಕರಣಗೊಂಡಿರುವುದನ್ನು ಗಮನಿಸದಿದ್ದರೆ ಏಳಬಹುದಾದ ಪ್ರಶ್ನೆಗಳನ್ನು ಬಹಳ ಚಾಣಾಕ್ಷತನದಿಂದ ತಾವೇ ಎತ್ತಿಕೊಂಡು, "ನೋಡಿ ನಾನು ನನ್ನ ಸಂಸ್ಕೃತಿಯ ಕುರೂಪವನ್ನು ವಿಮರ್ಶೆಗೀಡುಮಾಡಿಕೊಂಡಿದ್ದೇನೆ" ಎನ್ನುವ ಒಂದು ವಾದದ ಬಗೆಯೂ ಇಲ್ಲಿದೆ.

'ಆವರಣ' ಕೃತಿಯು ಆಧರಿಸಿರುವ ತಾಂತ್ರಿಕ ಜಾಲವನ್ನೇ ಆಧರಿಸಿ, 'ಆವರಣ' ಕೃತಿಯ ದರ್ಶನ-ಮಿತಿಗಳನ್ನು ಬಿಡಿಸುವುದು ಸಾಧ್ಯವಿದೆ. ಸುಳ್ಳು-ಸತ್ಯಗಳ ಬಗೆಗೆ ವೈದಿಕ-ಅವೈದಿಕ ವ್ಯಾಖ್ಯಾನಗಳನ್ನು ಆಧರಿಸುವಾಗ, ಬೌದ್ಧ ಮತ್ತು ಶಾಂಕರ ದರ್ಶನಗಳನ್ನು ಭೈರಪ್ಪನವರು ಆ ದೃಷ್ಟಿಯ ಪ್ರಾತಿನಿಧಿಕ ದರ್ಶನಗಳೆಂದು ಸ್ವೀಕರಿಸಿ, 'ಆವರಣ'ದ ವ್ಯಾಖ್ಯಾನವನ್ನು ನಿರ್ವಚಿಸಿಕೊಳ್ಳುತ್ತಾರೆ. ಆದರೆ ಈ ಕೃತಿಯು ಆವರಿಸಿದ ಕಾಲಾವಧಿಯಲ್ಲೇ ಬಂದ ಆಚಾರ್ಯ ಮಧ್ವರ ದ್ವೈತ-ದರ್ಶನದ ಹಿನ್ನೆಲೆಯಲ್ಲಿ, ಆಗ ಮುನ್ನೆಲೆಗೆ ಬಂದ, ಸುಳ್ಳು-ಸತ್ಯಗಳ ಇನ್ನೊಂದು ಬಗೆಗಿನ ಪ್ರಬಲ ವ್ಯಾಖ್ಯೆಯನ್ನು ಭೈರಪ್ಪನವರು ಗಮನಿಸುವುದೇ ಇಲ್ಲ. ಆಶ್ಚರ್ಯವೆಂದರೆ ಆಚಾರ್ಯ ಮಧ್ವರು ಬಂದ ಕೆಲವೇ ದಶಕಗಳ ಹಿಂದೆ ಶರಣರು ಬಂದು ಹೋಗಿದ್ದರು. ಅವರದೇ ಆದ ತಾತ್ವಿಕತೆಯೂ ಒಂದು ಅನಾವರಣಗೊಂಡಿತ್ತು. ಆದರೆ ಆಚಾರ್ಯರು ತಮ್ಮ ಈ ನಿಕಟಪೂರ್ವ ತಾತ್ವಿಕ-ಸಮುಚ್ಚಯಕ್ಕೆ ಪ್ರತಿಕ್ರಿಯಿಸುವುದೇ ಇಲ್ಲ. ಅದರ ಬದಲು ಶರಣದ ಹಿಂದಿದ್ದ ಶಾಂಕರ ಹಾಗೂ ಬೌದ್ಧ ಪರಿಕಲ್ಪನೆಗಳನ್ನು ಪ್ರಚಂಡವಾಗಿ ವಿರೋಧಿಸುತ್ತಾರೆ. ಇಷ್ಟೇ ಅಲ್ಲ ಶಾಂಕರರನ್ನೂ ಅವರು ಪ್ರಛನ್ನ-ಬೌದ್ಧರೆಂದು ಕರೆದು ಅವರ ತತ್ವಗಳ ನಡುವೆ ಕಾಣುವ ಭೇದವೂ ಅರ್ಥಹೀನವೆನ್ನುತ್ತಾರೆ. ಜೊತೆಗೆ ತಮ್ಮದೇ ಆದ ಅದ್ಭುತ ರೀತಿಯಲ್ಲಿ ತಮ್ಮ ಸ್ವಪಕ್ಷವನ್ನು ಮಂಡಿಸುತ್ತಾರೆ. ಈ ಖಂಡನ-ಮಂಡನಗಳ ಇಡೀ ಚೌಕಟ್ಟಿನಲ್ಲಿ ಮತ್ತೆ ಮತ್ತೆ ಸುಳ್ಳು-ಸತ್ಯಗಳ ಅಸ್ತಿತ್ವದ ಪ್ರಶ್ನೆ ಪ್ರಸ್ತಾಪಿತವಾಗುತ್ತದೆ.

''ಸತ್ಯತ್ವ-ಮಿಥ್ಯತ್ವ'' ಇವುಗಳ ಬಗೆಗಿನ ಶಾಂಕರ, ಬೌದ್ಧ- ನಿಲುವುಗಳನ್ನು ಖಂಡಿಸಿದ ಆಚಾರ್ಯರ ತತ್ವಕ್ಕೆ, ಆ ನಂತರ ಮೂಲಭೂತವಾದ ಪ್ರತಿರೋಧವೇ ಏಳಲಿಲ್ಲ (ಅಪ್ಪಯ್ಯದೀಕ್ಷಿತ ರಂಥವರಿಂದಲೂ). ಈ ನೆಲೆಯಲ್ಲಿ 'ಆವರಣ'ದ ಬಗೆಗೆ - ದ್ವೈತದ ಪರಿಕಲ್ಪನೆಯನ್ನೂ ಲೆಕ್ಕಕ್ಕೆ ಭೈರಪ್ಪನವರು ಏಕೆ ಹಿಡಿಯಲಿಲ್ಲ? ಹಾಗೆ ಹಿಡಿಯದೆ ಇದ್ದುದರಿಂದ 'ಆವರಣ'ದ ಬಗೆಗೆ ಅವರು ಅನುಸಂಧಾನಿಸಿಕೊಂಡಿರುವ ಗ್ರಹಿಕೆಯೇ ಹೇಗೆ ಸುಳ್ಳಾಗಿದೆ ಎಂಬುದನ್ನು ಕುರಿತು- ಸೂಕ್ತ ಓದಿನ ಮೂಲಕ ಸ್ಥಾಪಿಸಬಹುದಾಗಿದೆ. ಅಲ್ಲದೆ ಘಟನಾವಳಿಗಳ ದೃಷ್ಟಿಯಿಂದಲೂ ಆಚಾರ್ಯರು ತಮ್ಮ ಬದರಿಯಾತ್ರೆಯ ಕಾಲದಲ್ಲಿ ಇಸ್ಲಾಂ ಸಂಸ್ಕೃತಿಯನ್ನು ಎದುರಿಸಿದ ದಾಖಲೆಗಳಿವೆ. ಆಚಾರ್ಯರ ನಂತರ ಯತಿಗಳು ಕಾಲಕಾಲಕ್ಕೆ ಇಸ್ಲಾಂ ಸಂಸ್ಕೃತಿಯನ್ನು ಮುಖಾಮುಖಿಯಾದ ಘಟನೆಗಳಿವೆ. ಮಂತ್ರಾಲಯದ ಇಂದಿನ ಶ್ರೀ ಮಠದ ಭೂಮಿಯೇ ಒಬ್ಬ ಇಸ್ಲಾಂ ರಾಜನಿಂದ ಬಂದದ್ದು. ಶ್ರೀಸತ್ಯಬೋಧ ತೀರ್ಥರು ಹಾಗೂ ಸವಣೂರಿನ ನವಾಬರ ಜೊತೆಗಿನ ಸಂಬಂಧದ ಸಂಕಥನವಂತೂ ಐತಿಹಾಸಿಕ ಮಾಹಿತಿ ಯುಳ್ಳದ್ದು. ವ್ಯಾಸರಾಯರು ಕೃಷ್ಣದೇವರಾಯನ ಆಸ್ಥಾನದಲ್ಲಿದ್ದಾಗ, ಕೃಷ್ಣದೇವರಾಯನಿಗೂ, ಇಸ್ಲಾಂ ಸಂಸ್ಕೃತಿಗೂ ಒದಗಿದ ಸಂಬಂಧಗಳಲ್ಲೂ, ವ್ಯಾಸರಾಯರ ಪಾತ್ರ ಮುಖ್ಯವಾಗಿತ್ತೆಂಬ ದಾಖಲೆಗಳೂ ಇವೆ. ಅಂದರೆ, ಭೈರಪ್ಪನವರು ಗ್ರಹಿಸಿರುವ 'ಸುಳ್ಳು-ಸತ್ಯ'ಗಳ ಬಗೆಗಿನ ತಾತ್ವಿಕ ಧೋರಣೆಗಳ ಬಗೆಗೆ, ಅವರ ಗಮನಕ್ಕೆ ಬಾರದ ಸಾವಿರಾರು ತಾತ್ವಿಕ ನಿಲುವುಗಳೂ ಅಸ್ತಿತ್ವದಲ್ಲಿವೆ. ಹಾಗೆಯೇ ಘಟನಾವಳಿಗಳ ಪ್ರಕ್ರಿಯೆಯಲ್ಲೂ, ಇಸ್ಲಾಂ ಸಂಸ್ಕೃತಿಯ ಜೊತೆಗೆ, ಹಿಂದೂ ಸಂಸ್ಕೃತಿಯ ಸಂಬಂಧಗಳ ಸಾವಿರಾರು ಬಗೆಯ ಸಂಬಂಧಗಳ ಪ್ರಕ್ರಿಯೆಯ ಸ್ವರೂಪಗಳು ಇತಿಹಾಸದ ಪುಟಗಳಲ್ಲಿ (ಏಕೆಂದರೆ ಈ 'ಪುಟ'ಗಳನ್ನೇ ನಂಬಿ 'ಆವರಣ' ರೂಪುಗೊಂಡಿರುವುದರಿಂದ) ದಾಖಲಿತವಾಗಿವೆ. ಇತಿಹಾಸದ ಪಂಡಿತ-ಪಠ್ಯಗಳನ್ನು ಬಿಟ್ಟುಕೊಟ್ಟರೂ ಅದರ ಜನಪ್ರಿಯ - ಆವೃತ್ತಿಗಳಲ್ಲಿ ಸಿಗುವ ಪಠ್ಯಗಳೂ, 'ಆವರಣ'ದಲ್ಲಿ ನಿರೂಪಿತ ವಾದಾಂಶಗಳನ್ನು ಆಮೂಲಾಗ್ರವಾಗಿ ನಿರಾಕರಿಸುತ್ತವೆ. ಇದನ್ನು ಇನ್ನಷ್ಟು ವಿವರವಾಗಿ ತಿಳಿಯಬೇಕೆಂದವರು, ಉತ್ತರ ಕರ್ನಾಟಕದ ಲಾವಣಿ-ಮೇಳಗಳ ಕಲಾವಿದರ ಬದುಕನ್ನು, ಲಾವಣಿಗಳ ಸ್ವರೂಪವನ್ನು ಅಧ್ಯಯನ ಮಾಡುವುದು ಸೂಕ್ತ. ಹಲಸಂಗೀ ಗ್ರಾಮದ (ಮಧುರಚೆನ್ನರ ಊರು) ದಾದೇಪೀರ ಎನ್ನುವ ಕವಿ ಇಡೀ ಕಠೋಪನಿಷತ್ತನ್ನು 'ಲಾವಣಿ'ಯನ್ನಾಗಿ ತನ್ನ ಆತ್ಮ-ಸಾಧನೆಯ ಸಾಧನವಾಗಿ ಮಾಡಿಕೊಂಡದ್ದನ್ನು ಕಾಣಬಹುದು. (ಶರೀಫರು, ಖ್ವಾಜಾ ಬಂದೇ ನವಾಬರು, ಒಬ್ಬರೇ, ಇಬ್ಬರೇ ಇಂಥ ವ್ಯಕ್ತಿಗಳು).

ಇತ್ತೀಚೆಗೆ ನಾನು ನನ್ನದೇ ಸಂಗ್ರಹದಲ್ಲಿದ್ದೂ ನಾನು ಅಷ್ಟಾಗಿ ಗಂಭೀರವಾಗಿ ಗಮನಿಸದೇ ಇದ್ದ ಕೃತಿಯೊಂದು 'ಆವರಣ' ಓದಿದ ನಂತರ ಮುಖ್ಯವಾಗಿ ಕಂಡಿತು. 'Islam: The Misunderstood Religion' ಎಂಬುದೇ ಆ ಪುಸ್ತಕ. ಬರೆದವರು ಮಹಮ್ಮದ ಖಲೀಲ ಎನ್ನುವವರು. ಮೂಲತಃ ಅರೇಬಿಕ್ ಭಾಷೆಯಲ್ಲಿ, ಕೈರೋದಲ್ಲಿ ೧೯೬೪ರಲ್ಲಿ ಪ್ರಕಟವಾದ ಕೃತಿಯ ಇಂಗ್ಲಿಷ್ ಅನುವಾದವಿದು. ಪ್ರಕಟಣೆ 'The Board of Islamic Publications DELHI - 6' ಇವರದು (ಅನುವಾದ ಪ್ರಕಟಣೆಯ ವರ್ಷ ೧೯೬೮ ಜನವರಿ, ಪುಟಗಳು ೩೪೩, ಬೆಲೆ ೭/-) ಮುಖ್ಯವಾಗಿ, ಜಾಗತಿಕವಾಗಿ ಇಸ್ಲಾಂ ಸಂಸ್ಕೃತಿಯನ್ನು ಒಂದು 'ಕ್ರೂರ ಸಂಸ್ಕೃತಿ' ಎಂದು ಬಿಂಬಿಸಿದ ಬ್ರಿಟಿಷ್ ಇಂಪೀರಿಯಲಿಝಮ್ಮಿನ, ಕ್ರೂರ-ಪ್ರಯತ್ನಗಳ ಜಾಲವನ್ನು ಈ ಕೃತಿ ಜಾಲಾಡುತ್ತದೆ. ಪೂರ್ವದ ಒಟ್ಟೂ ಸಂಸ್ಕೃತಿಯ ಸಮುಚ್ಚಯದ ಮೇಲೆ ಪಶ್ಚಿಮವು ಮಾಡಿದ ಸಾಂಸ್ಕೃತಿಕ ಆಕ್ರಮಣದ ಮೇಲೆ ಲೇಖಕರು ಸಂಪೂರ್ಣವಾಗಿ ದೃಷ್ಟಿಯನ್ನು ಕೇಂದ್ರೀಕರಿಸಿದ್ದಾರೆ. 'ಆವರಣ' ಕೃತಿಯೊಳಗಿನ ನೋಟ, ಒಂದು ಬಗೆಯಲ್ಲಿ ನನಗೆ ಈ ಕೃತಿಯು

ವೈಚಾರಿಕವಾಗಿ ವಿರೋಧಿಸುತ್ತಿರುವ ನೋಟದ ಒಂದು ಮಾದರಿಯಾಗಿಯೇ ಕಂಡಿತು. ಯಾರಾದರೂ ಈ ಕೃತಿಯನ್ನು ಕನ್ನಡೀಕರಿಸಿದರೆ ಇದು ಸ್ಪಷ್ಟವಾದೀತು. ಆದರೆ ಹತ್ತು ಭಾಷಿಕ ದಾಖಲೆಗಳ ಮೂಲಕ ಹನ್ನೊಂದನೆಯ ಭಾಷಿಕ ದಾಖಲೆಯನ್ನು ಕಟ್ಟುವುದು ಸೃಜನಶೀಲತೆಯ ಲಕ್ಷಣವಂತೂ ಅಲ್ಲ. ಏಕೆಂದರೆ ಈ ಕೃತಿಯಲ್ಲೂ ಪ್ರಕಾಶಕರ ಒಂದು ವಾಕ್ಯ, ಅಪಾಯಕಾರಿಯಾಗಿಯೇ ಇದೆ.

> "Two chapters- 'Islam & Non-muslim Communities' & 'What next?' have - with the permission of the director of Islamic affairs, Kuwait - been deleted as being irrelevent in India which is not a muslim majority country"

ಆ ಎರಡು ಬಿಟ್ಟು ಹೋದ ಭಾಗಗಳೂ ಸಿಕ್ಕರೆ ಅವು ಭೈರಪ್ಪನವರ ವಾದ-ಪತ್ರಕ್ಕೆ ಪೂರಕವೂ ಆಗಿರಬಲ್ಲವು. ಮಾರಕವೂ ಆಗಿರಬಲ್ಲವು ಎನಿಸುತ್ತದೆ. ಅದೇನಿದ್ದರೂ ಆಧುನಿಕ ಇಸ್ಲಾಂ ಇತಿಹಾಸ - ವಿರೋಧಿಗಳ ಬಗೆಗೆ ಈ ಕೃತಿಕಾರರು ಬರೆಯುವ ಈ ಕೆಳಗಿನ ಮಾತು 'ಆವರಣ'ದ ಹಿನ್ನೆಲೆಯಲ್ಲಿ ಮುಖ್ಯವೆನಿಸುತ್ತದೆ.

> "These poor people know nothing about Islam but doubts. About Islam they have no information, save what they received through their europian masters. That is why they are seen shoutry like them advocating the separation of religion from the state, & of science from Islam."

ಹೋದ ವರುಷ ಸೊಲ್ಲಾಪೂರದಲ್ಲಿ ನಾನು ಕೊಂಡ ಒಂದು ಹಳೆಯ ಪುಸ್ತಕವೂ (ಮರಾಠಿ) ನನಗೆ 'ಆವರಣ' ಓದಿದ ನಂತರ ಗಮನ ಸೆಳೆಯಿತು. ಡಾನ್ ತ್ರುವಾ ಎನ್ನುವ ಫ್ರೆಂಚ್ ಲೇಖಕನೊಬ್ಬ ಬಹಳ ಹಿಂದೆ ಬರೆದ ಮರಾಠಿ ಓವೀಬದ್ಧ ಕಾವ್ಯವಿದು. "ಫ್ರೆಂಚ ಕವಿನೇ ಲಿಹಿಲೇಲಿ ಮರಾಠೀ ಪುರಾಣ" ಎಂಬ ಶೀರ್ಷಿಕೆಯ, ಡಾ. ಪ್ರಿಯೋಳಕರ ಸಂಪಾದಿಸಿದ ಈ ಆಯ್ದ ಭಾಗದ ಕಾವ್ಯ, ಮುಖ್ಯವಾಗಿ ಪಶ್ಚಿಮದ ಶಕ್ತಿಗಳು ಪೂರ್ವದ ಪುರಾಣ, ಮತ, ಧರ್ಮಗಳ ನಂಬಿಕೆಗಳನ್ನು ನಾಶ ಮಾಡಲು ನಡೆಸಿದ ಸಾಂಸ್ಕೃತಿಕ ಸಂಚಿನ ಸಂಕೇತವಾಗಿದೆ. ಕ್ರಿಸ್ತನ ೧೨ ಶಿಷ್ಯರಲ್ಲಿ ಒಬ್ಬನಾದ 'ಪೀಟರ್' ಎನ್ನುವವನ ಕತೆಯನ್ನು 'ಮರಾಠೀ ಪುರಾಣ'ವನ್ನಾಗಿ ರೂಪಿಸುವ ಸಾಹಸದಲ್ಲಿ ಒಂದು ಅಧ್ಯಾಯ ಹಿಂದೂ ದೇವತೆಗಳ ಅವಹೇಳನಕ್ಕೆ ಮೀಸಲಾಗಿದೆ. ಶಿವನನ್ನು ಹುಚ್ಚನೆಂದು, ಪಾರ್ವತಿಯನ್ನು ಅನೈತಿಕಳೆಂದು ವರ್ಣಿಸುತ್ತ ಈ ದೇವತೆಗಳ ವಿಗ್ರಹಗಳನ್ನು ಛಿದ್ರಮಾಡಲು ಕವಿ 'ಕಾವ್ಯ-ಸಂದೇಶ' ನೀಡುತ್ತಾನೆ. ಕಾಶಿಯ ವಿಶ್ವೇಶ್ವರನ ಮಂದಿರದ ನಾಶದ ಕೃತ್ಯ ಯಾರಿಂದಲೇ ಆಗಿರಲಿ, ಭಾರತದ ಒಟ್ಟು ಸಾಂಸ್ಕೃತಿಕ ಸಮುಚ್ಚಯದಲ್ಲಿ ಆದ ವೈಚಾರಿಕ ವಿಘಟನೆಗಳಿಗೆ ಪ್ರೇರೇಪಿಸಿದ ಶಕ್ತಿಗಳು, ಒಂದೇ ಮೂಲದಿಂದ ಬಂದವುಗಳಲ್ಲ ಎಂಬುದನ್ನು 'ಆವರಣ'ವು ಲಕ್ಷ್ಯಕ್ಕೆ ತಂದುಕೊಳ್ಳುವುದಿಲ್ಲ. ಇಷ್ಟೇ ಅಲ್ಲದೆ ಅದು ಏಕಪಕ್ಷೀಯವಾಗಿ ಇಸ್ಲಾಂ ಸಂಸ್ಕೃತಿಯ ಮೇಲೆ ಹರಿಹಾಯುತ್ತದೆ.

ರಜಿಯಾಳ ತಂದೆ ತೀರಿ ಹೋದಾಗ, ಆತ ಮಾಡಿಟ್ಟುಕೊಂಡ ಐತಿಹಾಸಿಕ ಟಿಪ್ಪಣಿಗಳನ್ನು ಬಹಳ ಗಂಭೀರವಾಗಿ ಗಮನಿಸುವ ರಜಿಯಾ, ಸಾವಿನ ಸಂದರ್ಭದಲ್ಲಾದರೂ 'ಐತಿಹಾಸಿಕ ಸತ್ಯ'ವೆಂಬ 'ಊಸರವಳ್ಳಿ'ಯ ಬಗೆಗೆ ಸರಿಯಾಗಿ ಗ್ರಹಿಕೆಗಳನ್ನು ಆಕಲನ ಮಾಡಿಕೊಳ್ಳಬಹುದಿತ್ತು. ಅಂದರೆ

ಲೇಖಕರು ಸಿದ್ಧಮಾಡಲು ಹೊರಟಿರುವ ಸತ್ಯವು, ಕಣ್ಣೆದುರಿನ ಸೃಜನಶೀಲ-ಸತ್ಯಗಳನ್ನು ನಿರ್ದಾಕ್ಷಿಣ್ಯವಾಗಿ ಅಲಕ್ಷಿಸುವಷ್ಟು ಗಟ್ಟಿಯಾಗಿಬಿಟ್ಟಿದೆ.

ಎರಡು ವರ್ಷಗಳ ಹಿಂದೆ ಮೂಡಬಿದಿರೆಯ 'ನುಡಿಸಿರಿ' ಕಾರ್ಯಕ್ರಮದಲ್ಲಿ 'ಬೌದ್ಧಿಕ ಸ್ವಾತಂತ್ರ ಮತ್ತು ಕನ್ನಡ ಲೇಖಕ' ಎಂಬ ಗೋಷ್ಠಿಯಲ್ಲಿ ಭೈರಪ್ಪನವರು ತೋಡಿಕೊಂಡ ಒಂದು ಸಾಮಾನ್ಯ ಅನುಭವವೂ ಈ ಕೃತಿಯಲ್ಲಿ ಹಸಿಹಸಿಯಾಗಿ ಬಳಸಲ್ಪಟ್ಟಿದೆ. ಇಂದಿನ ಸಂಸ್ಕೃತಿ ಸಂವರ್ಧಕ, ಚಿಂತನೆಗಳು, ವ್ಯಕ್ತಿಗಳು, ಸಂಸ್ಥೆಗಳು, ಸರ್ಕಾರಗಳು ಹೇಗೆ ಅಡ್ಡದಾರಿ ಹಿಡಿದಿವೆ ಎಂಬುದನ್ನು ತೋರಿಸುವಲ್ಲಿ, ಲೇಖಕರ ವ್ಯಕ್ತಿಗತ ಪ್ರವೇಶ, ಕೃತಿಯ ಸಾಮಾನ್ಯ ರಸಾನುಭೂತಿಗೂ ಭಂಗವನ್ನು ತರುತ್ತದೆ. ಈ ಕೃತಿಯಲ್ಲಿ ಬರುವ 'ಪ್ರೊಫೆಸರ್ ಶಾಸ್ತ್ರಿಗಳ' ಹಿಂದೆ ಕನ್ನಡದ ಇಂದಿನ ಯಾವ ವ್ಯಕ್ತಿತ್ವವನ್ನು ಲೇಖಕರು ಇಟ್ಟುಕೊಂಡಿದ್ದಾರೆ ಎಂಬುದು ಸಾಮಾನ್ಯ ಓದುಗನಿಗೂ ಗಮ್ಯ ವಿಷಯವಾಗಿದ್ದು ಅದರಿಂದಾಗಿಯೇ, ಪಾತ್ರದ ವಿಮರ್ಶೆಯ ಸಂದರ್ಭಗಳು ವ್ಯಕ್ತಿಗತ ರಾಗ-ದ್ವೇಷದ ಮಟ್ಟದಲ್ಲೇ ನಿಲ್ಲುತ್ತವೆ. ಇಷ್ಟೇ ಏಕೆ, ತಮ್ಮ ಕೃತಿಯ ಬಗೆಗೆ ಮುಂದೊದಗಬಹುದೆಂದು ತಾವೇ ಊಹಿಸಿಕೊಂಡ ಕಲ್ಪನೆಗಳನ್ನೂ ಕೃತಿಯೊಳಗೇ ತರುವ ಮೂಲಕ, ಲೇಖಕರು ಇಡೀ ಕೃತಿಯಲ್ಲಿ ಎಷ್ಟು ಸೃಜನ ವಿರೋಧೀ ಎಚ್ಚರವನ್ನು ಕಾಯ್ದುಕೊಂಡಿದ್ದಾರೆ ಎಂಬುದು ಸ್ಪಷ್ಟವಾಗಿ ಅನುಭವಕ್ಕೆ ಬರುತ್ತದೆ.

ವಿನೋಬಾರಿಗೆ ಒಬ್ಬ ಬುದ್ಧಿವಂತ, ಶಿವಾಜಿ ಕಾಲದ ಇತಿಹಾಸವನ್ನು ಬರೆದು ತೋರಿಸಿದನಂತೆ. ವಿನೋಬಾ ಆ ಕೃತಿಯನ್ನು ಓದಿ, "ಎಲ್ಲಾ ಸರಿಯಾಗಿದೆ. ಒಂದೇ ಒಂದು ವಾಕ್ಯವನ್ನು ತಿದ್ದಬೇಕು" ಎಂದರಂತೆ.

ಆ ಲೇಖಕ "ಯಾವ ವಾಕ್ಯ?" ಎಂದು ಕೇಳಿದ್ದಕ್ಕೆ ವಿನೋಬಾ "ಶಿವಾಜಿ ಕಾಲದಲ್ಲಿ ರಾಮದಾಸರೆಂಬ ಸಂತರಿದ್ದರು" ಎಂದು ಬರೆದಿದ್ದೀರಿ. ಅದು ತಪ್ಪು. 'ರಾಮದಾಸರ ಕಾಲದಲ್ಲಿ ಶಿವಾಜಿ ಎಂಬ ರಾಜನಿದ್ದ' ಎಂದು ಬದಲಾಗಬೇಕು" ಎಂದು ಹೇಳಿದರಂತೆ.

'ಆವರಣ'ದ ಮೂಲ ಗ್ರಹಿಕೆ 'ಶಿವಾಜೀ ಕಾಲದಲ್ಲಿ ರಾಮದಾಸನೆಂಬ ಸಂತರಿದ್ದರು' ಎಂಬ ಧಾಟಿಯದೇ ಆಗಿದೆ. ಇದರಿಂದಾಗಿ ತಾಂತ್ರಿಕವಾಗಿಯೂ ಕೃತಿಯು ವಿಘಟಿತಗೊಂಡು, ರಜಿಯಾಳ ಬದುಕಿನ ಕತೆ, ರಜಿಯಾ ಬರೆಯುವ ಕತೆ, ಇವೆರಡೂ, ಮೊಸರು-ಭತ್ತದ ಮಿಶ್ರಣವಾಗಿಬಿಟ್ಟಿದೆ. ೫೦ ವರ್ಷಗಳ ಹಿಂದೆ ನನಗೆ ಕನ್ನಡ ಕಲಿಸುತ್ತಿದ್ದ ಬಾಳಕೃಷ್ಣ (ಬಿ.ಜಿ. ಕೆರೂರ/ಬಾಗಲಕೋಟೆ) ಎನ್ನುವವರು ಆಗ ಬರೆದ ಒಂದು ಕಾದಂಬರಿ 'ನಾನಿಯ ಕಾದಂಬರಿ' (ಮ.ಗ್ರ.ಮಾ) ಕೂಡ ಇದೇ ಬಗೆಯ ತಂತ್ರವನ್ನು ಹೊಂದಿದ ಕಾದಂಬರಿ. ಬಿ.ಜಿ.ಯವರು ಅದಕ್ಕೆ ಪೀಠಿಕೆ ಬರೆಯುತ್ತ, "ಇಲ್ಲಿರುವ ಎರಡೂ ಕತೆಗಳನ್ನು ಪ್ರತ್ಯೇಕವಾಗಿಯೇ ಓದಿಕೊಳ್ಳಬಹುದು" ಎಂದೂ ಬರೆದಿದ್ದರು. ಕಾದಂಬರಿಕಾರನ 'ಅನುಭವ'ವಾಗಿ ಇರುವ ಒಂದು ಅನುಭವದ ಸ್ವರೂಪ ಅದು ಕಾದಂಬರಿಯಾಗತೊಡಗಿದ ತಕ್ಷಣ, - ತಪ್ಪಿ ಅಲ್ಲಿ ನಾನು ಕಾದಂಬರಿ ಬರೆಯುತ್ತಿದ್ದೇನೆ ಎಂಬ ಎಚ್ಚರವೂ ಜಾಗೃತಗೊಂಡಿದ್ದರೆ ಮೂಲ ರೂಪದಿಂದ ಹೇಗೆ ದೂರ ಸರಿಯುತ್ತದೆ ಎಂಬುದನ್ನು, ಆ ಕಾಲದಲ್ಲಿ ಸೃಜನಶೀಲವಾಗಿ ಚಿತ್ರಿಸುವ ಕಾದಂಬರಿ ಅದು. ಅದರ ಪ್ರಾಥಮಿಕ ತಾಂತ್ರಿಕ-ಸಿದ್ಧಿಯೂ 'ಆವರಣ'ದಲ್ಲಿ ನನಗೆ ಅನುಭವಕ್ಕೆ ಬರದಿರುವುದಕ್ಕೆ ಲೇಖಕರ ಅತಿಯಾದ ಜಾಗೃತಿಯೇ ಕಾರಣವೆನಿಸಿತು.

ಕನ್ನಡದ ಜೇರ್ಣಾಗ್ನಿ ತುಂಬ ಪ್ರಬಲವಾಗಿರುವುದರಿಂದ 'ಆವರಣ'ದ ಬಗೆಗೆ ಯಾರೂ ಅಚ್ಚರಿ ಅಥವಾ ಗಾಬರಿ ಪಡಬೇಕಾಗಿಲ್ಲ.


ಇತ್ತೀಚಿನ ದಿನಗಳಲ್ಲಿ, ವಿಶೇಷವಾಗಿ ಪ್ರತಿ ತಿಂಗಳೂ ಲಕ್ಷ, ಲಕ್ಷಗಳಲ್ಲಿ ಸಂಬಳ ಪಡೆಯುವ ಯುವಕರಲ್ಲಿ ಹಾಗೂ ಆ ಯುವಕರು ಒದಗಿಸುವ ಸುಖಾನುಭವದ ಉಚಿತ ಫಲಾನುಭವಿಗಳಾದ ವೃದ್ಧರಲ್ಲಿ – ಒಂದು ಬಗೆಯ ವೈಚಾರಿಕ 'ಪೋರ್ನೋಗ್ರಾಫಿಕಲ್' ಪಠ್ಯಗಳನ್ನು ಓದಿ ಸುಖಿಸುವ ಅನಾರೋಗ್ಯಕರ ಚಟ ಬೆಳೆಯುತ್ತಿದೆ. ನಾನು ತ್ರಿವೇಂದ್ರಂಗೆ ಒಂದು ಕೇಂದ್ರ ಸಾಹಿತ್ಯ ಅಕಾಡೆಮಿಯ ಕಾರ್ಯಕ್ರಮಕ್ಕೆ ಹೋದಾಗ 'Pakistani Stories' ಎಂಬ ಪುಸ್ತಕ ಅದೇ ತಾನೇ ಬಂದಿತ್ತು. ಹಸಿರು ಬಣ್ಣದ ಅದರ ಮುಖಪುಟ, ಹಿಂದೂ-ಮುಸ್ಲಿಂ, ರೋಚಕ-ರುಚಿಯನ್ನು ಹುಟ್ಟಿಸಿ, ತತ್ಪರಿಣಾಮವಾಗಿ, ಒಂದೆರಡೇ ದಿನಗಳಲ್ಲಿ ಪ್ರತಿಗಳೆಲ್ಲ ಮಾರಾಟವಾಗಿ ಹೋಗಿದ್ದವು. ಆಧುನಿಕ ಕಾಲದ ಕು-ಅಭಿರುಚಿ ಪ್ರಸಾರದ ಇಂದಿನ ದಿನಗಳಲ್ಲಿ ಒಂದು ಕೃತಿ ಅತಿ ಜನಪ್ರಿಯತೆ ಪಡೆಯುವುದೂ ಕೂಡ, ಆ ಕೃತಿಯ ಆರೋಗ್ಯಪೂರ್ಣ ಅಂತಃಸತ್ವದ ಸಂಕೇತವಾಗಲಾರದು.

ಅನಂದ ನಗರ, ಮುಧೋಳ
೯೪೪೮೪೦೮೨೬೫



ಈ ನಮಸ್ಕಾರಕೆ ನಮಿಸೋ ಮಂಕುತಿಮ್ಮ

'ನಮಸ್ಕಾರ' ಪುಸ್ತಕವು ಕನ್ನಡದ ಶ್ರದ್ಧಾವಂತ ವಿಮರ್ಶಕರಾದ ಎಚ್ಚೆಸ್ಸಾರ್ ಅವರ ಹೊಸ ಕೃತಿ. ಕಳೆದ ಹದಿನಾರು ವರ್ಷಗಳಲ್ಲಿ ಈ ಲೇಖಕರು ಬರೆದಿರುವ ಇಪ್ಪತ್ತೆರಡು ಲೇಖನಗಳ ಸಂಗ್ರಹವಿದು. ಬೇರೆ ಬೇರೆ ಸಂದರ್ಭಗಳಲ್ಲಿ ಕನ್ನಡದ ಪ್ರಮುಖ ಸಾಹಿತಿಗಳನ್ನು ಕುರಿತು ಇವರು ಬರೆದಿರುವ ಅಭ್ಯಾಸಪೂರ್ಣ ಲೇಖನಗಳು ಇಲ್ಲಿವೆ. ಕುವೆಂಪು, ಬೇಂದ್ರೆ, ಮಧುರಚೆನ್ನ, ಶಿವರಾಮ ಕಾರಂತ, ಡಿವಿಜಿ... ಮೊದಲಾದ ಹಿರಿಯರ ಬಗೆಗಿನ ಲೇಖನಗಳ ಜೊತೆಗೆ ಕೆ.ಎಸ್. ನರಸಿಂಹಸ್ವಾಮಿ, ಲಂಕೇಶ್, ಚಿತ್ತಾಲ, ಗಿರಡ್ಡಿ ಗೋವಿಂದರಾಜ ಮತ್ತು ವಯಸ್ಸಿನಲ್ಲಿ ಈ ಲೇಖಕರಿಗಿಂತ ಸಾಕಷ್ಟು ಕಿರಿಯರಾದ ಪ್ರತಿಭಾ ನಂದ ಕುಮಾರ್ ಬಗೆಗಿನ ಲೇಖನಗಳೂ ಇಲ್ಲಿ ಸೇರಿವೆ. ಕೆಲವು ಲೇಖನಗಳು ಸುದೀರ್ಘವಾಗಿದ್ದರೆ ಇನ್ನು ಕೆಲವು ಟಿಪ್ಪಣಿಗಳ ರೂಪದಲ್ಲಿವೆ. ಕೊನೆಯಲ್ಲಿರುವ ಮಾಸ್ತಿಯವರ ಸಂದರ್ಶನಾಧಾರಿತ ಲೇಖನವು ಮಾಸ್ತಿಯವರ ವಿಚಾರ ಗಳನ್ನಷ್ಟೇ ಅಲ್ಲದೆ ಮಾತಿನ ಶೈಲಿಯನ್ನೂ ಹಿಡಿದಿಟ್ಟಿರು ವುದರಿಂದ ವಿಶಿಷ್ಟವಾಗಿದೆ.



ನಮಸ್ಕಾರ
ಲೇಖಕರು :
ಡಾ. ಎಚ್.ಎಸ್.ರಾಘವೇಂದ್ರರಾವ್
ಬೆಲೆ : ರೂ. 55/-
ಪುಟ : 304
ಪ್ರಕಾಶನ : ಅಭಿನವ,
17/18-2, 1ನೇ ಮುಖ್ಯರಸ್ತೆ
ಮಾರೇನಹಳ್ಳಿ,
ವಿಜಯನಗರ, ಬೆಂ - 40

ಈ ಕೃತಿಯಲ್ಲಿ ಗಿರಡ್ಡಿ ಗೋವಿಂದರಾಜ ಅವರ ಸಾಹಿತ್ಯ ವಿಮರ್ಶೆಯ ಬಗ್ಗೆ ಬರೆಯುವಾಗ ಎಚ್ಚೆಸ್ಸಾರ್ 'ಅಸೈನ್‌ಮೆಂಟ್‌ಗಳಿಗೆ ಪ್ರತಿಸ್ಪಂದನವಾಗಿಯೇ ಬರೆಯುವ ಒತ್ತಡವನ್ನು' ತಾವೂ ಸೇರಿದಂತೆ ಉಳಿದವರೆಲ್ಲರೂ ಅನುಭವಿಸುತ್ತಿರುವ ಪರಿಸ್ಥಿತಿಯನ್ನು ಪ್ರಸ್ತಾಪಿಸಿದ್ದಾರೆ. ಹೌದು. 'ನಮಸ್ಕಾರ'ದಲ್ಲಿನ ಸಾಕಷ್ಟು ಲೇಖನಗಳು ಬೇರೆ ಬೇರೆ ಅಸೈನ್‌ಮೆಂಟ್‌ಗಳಿಗೆ ಪ್ರತಿಸ್ಪಂದನವಾಗಿಯೇ ಬರೆಯಲ್ಪಟ್ಟಂತವು. ಆದರೆ ಪ್ರತಿಯೊಂದು ಲೇಖನಕ್ಕೂ ಈ

ಲೇಖಕರು ಮಾಡಿರುವ ಹೋಂವರ್ಕ್ ಮಾತ್ರ ಅಸಾಧಾರಣವಾದುದು. ಡಿ.ವಿ.ಗುಂಡಪ್ಪ, ಯಶವಂತ ಚಿತ್ತಾಲ, ಗಿರಡ್ಡಿ ಗೋವಿಂದರಾಜ ಮುಂತಾದ ಲೇಖಕರ ಬಗ್ಗೆ ಬರೆಯುವಾಗ ಆ ಲೇಖಕರು ಬರೆದಿರುವ ಎಲ್ಲ ಕೃತಿಗಳನ್ನೂ ವ್ಯವಧಾನ, ಅವಧಾನಗಳಿಂದ ಓದಿ ಅವುಗಳ ಸಾಧಕ-ಬಾಧಕಗಳನ್ನು ತುಂಬ ಆರೋಗ್ಯಕರ ನೆಲೆಯಿಂದ ಇವರು ಪರಿಶೀಲಿಸಿದ್ದಾರೆ. ಸಮಗ್ರ ಕಾವ್ಯಗಳಿಗೆ ಮುನ್ನುಡಿಗಳನ್ನು ಬರೆಯುವಾಗಲಂತೂ ಸರಿಯೇ ಸರಿ. ಆ ಕವಿಯ ಕವಿತೆಗಳ ಮೂಲಕವೇ ಅವರ ಜೀವನದರ್ಶನ, ಸಾಹಿತ್ಯ ತತ್ವಗಳನ್ನು ಕಟ್ಟಿಕೊಡುವ ಶ್ರಮಸಾಧ್ಯ ಪ್ರಯತ್ನ ಇಲ್ಲಿದೆ. 'ಸಮಗ್ರ ಕಾವ್ಯದ ಆವರಣದಲ್ಲಿ ಮುನ್ನುಡಿಗೆ ಬೇರೆಯದೇ ಪಥ್ಯಗುಣ ಒದಗುತ್ತದೆ' ಎಂಬ ಅವರ ಎಚ್ಚರ ಇಲ್ಲೆಲ್ಲ ಕೆಲಸ ಮಾಡಿದೆ. ಮಮತೆಯಿದ್ದರೂ, ನಿರ್ಮಮ, ನಿಷ್ಠುರ ವಿಮರ್ಶೆಯಿದ್ದರೂ ಒರಟಲ್ಲದ ಮೃದುದನಿ, ಹಾಗಿವೆ ಇಲ್ಲಿನ ಲೇಖನಗಳು. ಆದ್ದರಿಂದ ಎಚ್ಚೆಸ್ವಾರ್ ಈ ಲೇಖನವನ್ನು ಯಾವ ಸಂದರ್ಭದಲ್ಲಿ ಬರೆದರು ಅನ್ನುವುದು ಅಮುಖ್ಯವಾಗಿ ಬರಹದ ಹಿಂದಿನ ಅವರ ಶ್ರದ್ಧೆ ಮುಖ್ಯವೆನಿಸುತ್ತದೆ.

ನಮಸ್ಕಾರ ಪುಸ್ತಕದ ಇಪ್ಪತ್ತೆರಡು ಲೇಖನಗಳನ್ನು ನಮ್ಮ ಅಧ್ಯಯನದ ಅನುಕೂಲಕ್ಕೋಸ್ಕರ ಮೂರು ಭಾಗಗಳಾಗಿ ವಿಂಗಡಿಸಿಕೊಳ್ಳಬಹುದು.

ಭಾಗ ೧ : ಲೇಖಕನ ಸಾಹಿತ್ಯದ ಒಂದು ನಿರ್ದಿಷ್ಟ ವಿಭಾಗದ ಬಗ್ಗೆ ವಿಮರ್ಶಾ ಒಳನೋಟಗಳನ್ನು ನೀಡುವ ಲೇಖನಗಳು ಇಲ್ಲಿವೆ. ಕುವೆಂಪು, ಬೇಂದ್ರೆ, ಮಧುರಚೆನ್ನ ಪುತಿನ, ಶಿವರಾಮ ಕಾರಂತ, ಹಾಮಾನಾ, ಲಂಕೇಶ್... ಈ ಲೇಖಕರ ಬಗ್ಗೆ ಬರೆದ ಬರಹಗಳು.

ಭಾಗ ೨ : ಲೇಖಕರ ಸಮಗ್ರ ಸಾಹಿತ್ಯ ಮತ್ತು ಅವರ ಸಾಂಸ್ಕೃತಿಕ ವ್ಯಕ್ತಿತ್ವವನ್ನು ಅರ್ಥ ಮಾಡಿಕೊಳ್ಳಲೆತ್ನಿಸುವ ಲೇಖನಗಳು. ಡಿವಿಜಿ, ಚಂದ್ರಶೇಖರ ಪಾಟೀಲ, ಪ್ರತಿಭಾ ನಂದಕುಮಾರ್, ಕೆಎಸ್‌ನ, ಯಶವಂತ ಚಿತ್ತಾಲ ಮತ್ತು ಗಿರಡ್ಡಿ ಗೋವಿಂದರಾಜ ಇವರನ್ನು ಕುರಿತ ಲೇಖನಗಳು... ಈ ರೀತಿಯವು. ಜಿ.ಎಸ್.ಎಸ್. ಅವರ ಸಾಂಸ್ಕೃತಿಕ ಕೊಡುಗೆಗಳನ್ನು ಕುರಿತ ಲೇಖನವೂ ತುಸು ಈ ರೀತಿಯದೇ. ಇಲ್ಲಿ ಜಿಎಸ್ಸೆಸ್‌ರ ಸಮಗ್ರ ಸಾಹಿತ್ಯದ ಪರಿಶೀಲನೆ ಇಲ್ಲದಿದ್ದರೂ ಅವರ ಸಾಂಸ್ಕೃತಿಕ ಕೊಡುಗೆ ಬಗ್ಗೆ ವಿಸ್ತೃತವಾದ ಚಿಂತನೆ ಇದೆ.

ಭಾಗ ೩ : ಕಿರುಗಾತ್ರದ ಟಿಪ್ಪಣಿಗಳು. ತಿರುಮಲೇಶ, ಜಿ.ಬಿ. ಜೋಷಿ, ಶಂಬಾ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಡಿ.ಎಸ್. ಶಂಕರ ಭಟ್, ಬಿ.ವಿ. ಕಾರಂತ ಮತ್ತು ವ್ಯಾಸರಾಯ ಬಲ್ಲಾಳ ಈ ಲೇಖಕರನ್ನು ಕುರಿತ ಲೇಖನಗಳಿವು. ಇಲ್ಲಿ ಈ ಲೇಖಕರ ಸಾಹಿತ್ಯ ಅಥವಾ ಸಾಂಸ್ಕೃತಿಕ ಕೊಡುಗೆಯ ಬಗ್ಗೆ ಪುಟ್ಟ ಚರ್ಚೆ ಇದೆ.

ಇನ್ನು ಮೊದಲೇ ಹೇಳಿದಂತೆ ಕೃತಿಯ ಕೊನೆಯಲ್ಲಿರುವ ಮಾಸ್ತಿಯವರ ಸಂದರ್ಶನವು ಈ ಯಾವ ಗುಂಪಿಗೂ ಸೇರದ ವಿಶಿಷ್ಟ ಲೇಖನವಾಗಿದೆ. ಈ ಲೇಖನವನ್ನೋದಿದರೆ ಮಾಸ್ತಿಯವರ ಮಾತು ಕೇಳಿಸಿದಂತಾಗುತ್ತದೆ.

ಈಗ ಈ ಮೂರು ಭಾಗಗಳಲ್ಲಿ ಎಚ್ಚೆಸ್ವಾರ್ ಅವರ ವಿಚಾರಗಳು ಮೂಡಿರುವ ರೀತಿಯನ್ನು ಸಂಕ್ಷಿಪ್ತವಾಗಿ ಗಮನಿಸೋಣ.

ಭಾಗ – ೧

'ಕುವೆಂಪು ಅವರ ಸಾಹಿತ್ಯದಲ್ಲಿ ವಸಾಹತುಶಾಹಿಯ ಸ್ವರೂಪ' ಎಂಬ ಲೇಖನದಲ್ಲಿ ಎಚ್ಚೆಸ್ಸಾರ್, 'ವಸ್ತು, ಭಾಷೆ, ಶೈಲಿ, ಛಂದಸ್ಸು ಮುಂತಾದ ಎಲ್ಲ ನೆಲೆಗಳಲ್ಲಿಯೂ ಹೊಸಕಾಲದ ಬದುಕನ್ನು ಬಗೆಯಲು ಹಳೆಯ ಕಾಲದ ಸಲಕರಣೆಗಳನ್ನು ಬಳಸುವ ಮೂಲಕ ಕುವೆಂಪು ಅವರು ವಸಾಹತುಶಾಹಿ ತೊಡಿಸಿದ ಸಂಕೋಲೆಗಳಿಂದ ಬಿಡುಗಡೆ ಪಡೆದರೆಂದು ತೋರುತ್ತದೆ..... ಅವರಿಗೆ ವಸಾಹತುಶಾಹಿಯು ದಾಟಲು ಸಾಧ್ಯವಿರುವ ಅಡಚಣೆ ಮಾತ್ರವಾಗಿತ್ತು' ಎನ್ನುವ ಒಳನೋಟವನ್ನು ಕೊಡುತ್ತಾರೆ.

'ಕನ್ನಡ ಕಾವ್ಯಪರಂಪರೆ ಮತ್ತು ಬೇಂದ್ರೆ' ಎಂಬ ಲೇಖನದಲ್ಲಿ ಬೇಂದ್ರೆಯವರು ಕನ್ನಡ ಕಾವ್ಯ ಪರಂಪರೆಯಿಂದ ಪಡೆದಿದ್ದೇನು ಹಾಗೂ ಅದಕ್ಕೆ ಅವರು ಸೇರಿಸಿದ್ದೇನು ಎಂಬ ಪ್ರಶ್ನೆಯನ್ನು ಕೇಳಿಕೊಳ್ಳುವ ಎಚ್ಚೆಸ್ಸಾರ್, "ಅವರದು (ಬೇಂದ್ರೆಯವರದು) ದ್ರಾವಿಡ ದೇಹ ಮತ್ತು ಆರ್ಯ ಮನಸ್ಸುಗಳ ಸಂಯೋಜನೆಯಾಗಿತ್ತು... ಅವರು ಅನುಭವಗಳನ್ನು ಕಥಿಸುವುದಿಲ್ಲ, ಸೃಷ್ಟಿಸುತ್ತಾರೆ. ಇದು ಬೇಂದ್ರೆಯವರು ಕನ್ನಡ ಕವಿತೆಗೆ ನೀಡಿದ ವಿಶಿಷ್ಟ ಆಯಾಮವಾಗಿದೆ' ಎನ್ನುತ್ತಾರೆ.

ಮಧುರಚೆನ್ನ ಅವರ ಬಗೆಗೆ ವ್ಯಾಪಕವಾದ ಅಧ್ಯಯನ ಮಾಡಿರುವ ಈ ಲೇಖಕರು, "ಅವರ (ಮಧುರಚೆನ್ನರ) ಕಾವ್ಯದ ಶಕ್ತಿಯಿರುವುದು ಅನುಭಾವಿಕ ಹುಡುಕಾಟದ ಕೊನೆಯಲ್ಲಿ ತಲುಪಿದ ನೆಲೆಗಳ ನಿರೂಪಣೆಯಲ್ಲಿ ಅಲ್ಲ, ಬದಲಾಗಿ ಹುಡುಕಾಟದ ತಲ್ಲಣಗಳ ಆತಂಕಗಳ ಇಂದ್ರಿಯಗಮ್ಯ ನಿರೂಪಣೆಯಲ್ಲಿ. ಆದ್ದರಿಂದ ಅವರ ಕಾವ್ಯದ ಬಹುಮುಖ್ಯ ಭಾಗವು ಮಾನವಿಕ ಅನುಭವಗಳ ಲೋಕಕ್ಕೆ ಸೇರುತ್ತದೆ. ಇಲ್ಲಿ ಗುರಿ ಗೌಣ, ದಾರಿ ಮುಖ್ಯ..." ಹೀಗೆ ಮಧುರಚೆನ್ನರ ಕಾವ್ಯವು ಅನುಭಾವಾಕಾಂಕ್ಷಿಗಳಲ್ಲದವರಿಗೂ ಪ್ರಸ್ತುತವಾಗುವ ಕಾರಣವನ್ನು ಇವರು ಗುರುತಿಸಿದ್ದಾರೆ.

ಪುತಿನ ಅವರ ಶ್ರೀಹರಿಚರಿತೆಯಲ್ಲಿನ ಆಧುನಿಕ ಚಿಂತನೆಗಳನ್ನು ಗಮನಿಸುವ ಎಚ್ಚೆಸ್ಸಾರ್ "ಇಲ್ಲಿ ಕಂಡುಬರುವುದು ತನ್ನ ಕಾವ್ಯದಲ್ಲಿ ಆಧುನಿಕತೆ ಇದೆಯೆಂಬುದನ್ನು ತೋರಿಸುವ ಹಂಬಲವೇ ವಿನಾ ನಿಜವಾಗಿಯೂ ಆಧುನಿಕವಾದ ತುಡಿತಗಳಲ್ಲ. ಆರ್ಷ ಸಂಸ್ಕೃತಿಯಲ್ಲಿ ಲೀನವಾಗಿರುವ ಈ ಮನಸ್ಸು ನೈತಿಕತೆ ಮತ್ತು ವೈಚಾರಿಕತೆಗಳೆರಡಕ್ಕೂ ಅದನ್ನೇ ಮೂಲ ಚಿಲುಮೆಯಾಗಿ ಹೊಂದಿರುವುದರಿಂದ ತಮಗಿಂತ ಭಿನ್ನವಾದ ಮನಃಸ್ಥಿತಿಗಳಿಗೆ ಅನ್ಯವಾಗಿಯೇ ಉಳಿಯುತ್ತದೆ" ಎಂಬ ಖಚಿತ ನಿಷ್ಠುರ ತೀರ್ಮಾನಕ್ಕೆ ಬರುತ್ತಾರೆ.

ಹಾಮಾನಾ ಅವರ ಅಂಕಣ ಬರಹಗಳ ವಸ್ತು ನಿರ್ವಹಣೆ ಮತ್ತು ಶೈಲಿಯನ್ನು ಗಮನಿಸುವ ಎಚ್ಚೆಸ್ಸಾರ್ "ಕನ್ನಡ ಗದ್ಯವನ್ನು ಪತ್ರಿಕೋದ್ಯಮದ ತುರ್ತುಗಳಿಗೆ ಒಗ್ಗಿಸಿಕೊಳ್ಳುತ್ತಲೇ ಅದರ ಸಾಹಿತ್ಯಕ ಅನನ್ಯತೆಯನ್ನು ಉಳಿಸಿಕೊಳ್ಳುವಲ್ಲಿ ಅವರ(ಹಾಮಾನಾ) ಪಾತ್ರ ಖಂಡಿತವಾಗಿಯೂ ಇದೆ... ಮತ್ತು... ಕಟಕಿಯೇ ಮುಂದಾಗುವ ಅಪರೂಪದ ಸಂದರ್ಭಗಳನ್ನು ಬಿಟ್ಟರೆ ಸಂಯಮ ಅವರ ಶೈಲಿಯ ಹೆಗ್ಗುರುತು" ಎಂಬ ಅಭಿಪ್ರಾಯವನ್ನು ತಳೆಯುತ್ತಾರೆ.

"ಶಿವರಾಮ ಕಾರಂತರು ಮತ್ತು ಬಾಲಸಾಹಿತ್ಯ: ಪರಿಕಲ್ಪನೆಗಳ ವಿಶ್ಲೇಷಣೆ" ಲೇಖನದಲ್ಲಿ ಬಾಲಸಾಹಿತ್ಯದ ಪರಿಕಲ್ಪನೆಗಳನ್ನು ಪರಿಣಾಮಕಾರಿಯಾಗಿ ಚರ್ಚಿಸಲಾಗಿದೆ. ಲಂಕೇಶರ ಕಥೆಗಳನ್ನು ಕುರಿತ

ಲೇಖನದಲ್ಲಿ ಲಂಕೇಶರ ಕಥನಕ್ರಮದ ಬಗ್ಗೆ ಸವಿಮರ್ಶಕವಾದ ಚರ್ಚೆ ಇದೆ ಮತ್ತು ಈ ಕಥೆಗಾರರು "ಸಂಕೀರ್ಣವಾದುದನ್ನು ಹೇಳುವ ಸರಳವಾದ ಬಗೆಗಳನ್ನು ಕಂಡುಕೊಂಡದ್ದರ" ಉಲ್ಲೇಖವಿದೆ.

ಭಾಗ - ೨

ಈ ಭಾಗದಲ್ಲಿ ಕೆಲವು ಲೇಖಕರ ಸಮಗ್ರ ಸಾಹಿತ್ಯ ಹಾಗೂ ಸಾಂಸ್ಕೃತಿಕ ವ್ಯಕ್ತಿತ್ವಗಳನ್ನು ಕುರಿತ ಚರ್ಚೆ ಇದೆ. ಉದಾಹರಣೆಗೆ, ಈ ಲೇಖಿಕರು ಪ್ರತಿಭಾ ನಂದಕುಮಾರ್ ಅವರ ಸಮಗ್ರ ಕಾವ್ಯದ ಬಗ್ಗೆ ಬರೆದ ಸುದೀರ್ಘ ಮುನ್ನುಡಿಯು ಈ ಕೃತಿಯಲ್ಲಿ ಸೇರಿದೆ. ಸ್ತ್ರೀ ವಿರಚಿತ ಸಾಹಿತ್ಯನ್ನು ಕಡೆಗಣ್ಣೋಟದಿಂದ ನೋಡುವುದು ಪ್ರಧಾನ ವಾಹಿನಿಯ ಅಭ್ಯಾಸವಾಗಿರುವಾಗ, ಪ್ರತಿಭಾ ಅವರ ಕಾವ್ಯದ ಘನತೆಯನ್ನು ಅರ್ಥ ಮಾಡಿಕೊಳ್ಳುವ ಈ ಲೇಖನ ಪ್ರಧಾನ ವಾಹಿನಿಯ ಆರೋಗ್ಯವನ್ನು ಸುಧಾರಿಸುವಲ್ಲಿ ನೆರವಾಗುತ್ತದೆ. ಈ ಲೇಖನದ ಪ್ರಾರಂಭ ಆಸಕ್ತಿದಾಯಕವಾಗಿದೆ.

> "ಪ್ರತಿಭಾ ನಂದಕುಮಾರ್ ಅವರು ಕನ್ನಡದಲ್ಲಿ ಕವಿತೆ ಬರೆಯುತ್ತಿಲ್ಲ. ಅವರು ಪುರುಷರಿಗೆ ಸುಪರಿಚಿತವಾದ ಯಾವುದೇ ಭಾಷೆಯಲ್ಲಿಯೂ ಕವಿತೆ ಬರೆಯುತ್ತಿಲ್ಲ... ಹಾಗೆಂದು ಅದು ನಮಗೆ ತಲುಪದ ಕವಿತೆಯಲ್ಲ. ನಾವು ಗಂಡುಗರ್ವವನ್ನು ಉಳಿದು ನಾನು-ನೀನು ಎಂಬ ಉಭಯ ಭೇದವನ್ನು ಅಳಿದು ತೆರೆದುಕೊಂಡಾಗ ಈ ಕವಿತೆಯೂ ಮಾನವರೆಲ್ಲರ ಪಾಡಿನ ಒಂದು ಬಗೆಯಾಗಿ ನಮ್ಮನ್ನು ತಲುಪುತ್ತದೆ."

ಹೀಗೆ ಪ್ರಾರಂಭಿಸುವ ಎಚ್ಚೆಸ್ವಾರ್ "ಹೇಳಬೇಕಾದುದನ್ನು ಹೇಳದಿರುವುದರಿಂದಲೇ, ಪಡೆಯಬಯಸಿದ್ದನ್ನು ಪಡೆಯದಿರುವುದು ಹುಡುಗಿಯರ ಸಹಜಗುಣವೆಂದು ಹೊರಟ ಹುಡುಗಿ, ಹಾಗೆ ಹೇಳಿಬಿಡುವ ದಿಟ್ಟತನವನ್ನು ಗಳಿಸಿದ ಪಯಣದ ಸಮಗ್ರ ದಾಖಲೆಯಾಗಿ ಪ್ರತಿಭಾ ಅವರ ಸಮಗ್ರ ಕಾವ್ಯವನ್ನು ಗ್ರಹಿಸಬಹುದು" ಅನ್ನುತ್ತಾರೆ. ಪ್ರತಿಭಾ ಅವರ ಕಾವ್ಯವನ್ನು ಸ್ತ್ರೀ ಸಂವೇದನೆಯನ್ನು ಅರ್ಥ ಮಾಡಿಸುವ ಕೆಲವೇ ಆಕರಗಳಲ್ಲಿ ಒಂದೆಂದು ಎಚ್ಚೆಸ್ವಾರ್ ಗುರುತಿಸುವುದು ಮುಖ್ಯವೆನ್ನಿಸುತ್ತದೆ. ಜೊತೆಗೆ "ಅವರು (ಪ್ರತಿಭಾ) ಯಾವುದೇ ರಿಯಾಯಿತಿ ಅಥವಾ ವಿಶೇಷ ಮಾನದಂಡಗಳನ್ನು ಬಯಸದೆ ಕನ್ನಡದ ಪ್ರಮುಖ ಕವಿಗಳಲ್ಲಿ ಒಬ್ಬರಾಗಿದ್ದಾರೆ" ಎಂದು ಈ ವಿಮರ್ಶಕರು ನುಡಿದಿರುವುದು ಕನ್ನಡ ಕವಯಿತ್ರಿಯರು ಮಾಡುತ್ತಿರುವ ಸಾಧನೆಯನ್ನು ತೋರಿಸುತ್ತದೆ.

ಚಂದ್ರಶೇಖರ ಪಾಟೀಲರ ಸಮಗ್ರ ಕಾವ್ಯವನ್ನು ಗಮನಿಸುವಾಗ ಈ ವಿಮರ್ಶಕರು, "ಅವರು (ಚಂಪಾ) 'ಗಾಂಧೀಸ್ಮರಣೆ' ಬರೆದ ಗಳಿಗೆಯು ಸಮಾಜ, ಚರಿತ್ರೆ, ಮನುಷ್ಯ ಮತ್ತು ಕವಿತೆಗಳು ಒಂದು ಬಿಂದುವಿನಲ್ಲಿ ಸಂಧಿಸಿದ ಅದ್ಭುತ ಕ್ಷಣ. ಇಂಥ ಕಡೆ ಕಲಾವಿದನು ಮಾನದ ಮೊಗ್ಗನ್ನು ಒಡೆದು ಬಂದ ಮಾತಾಗುತ್ತಾನೆ" ಅನ್ನುತ್ತಾರೆ. ಅವರ (ಚಂಪಾ) ಕವಿತೆಯಲ್ಲಿ ನವ್ಯಕ್ಕೆ ಅಂತೆಯೇ ಬಂಡಾಯಕ್ಕೆ ಬಾಹಿರವಾದ ಕೆಲವು ಅಂಶಗಳು ಉಳಿದಿವೆ.... ಇವರದು ಅಟಾನಮಸ್ ಆದ ಕಾವ್ಯ... ಎನ್ನುತ್ತಾರೆ.

ಡಿ.ವಿ. ಗುಂಡಪ್ಪನವರ ಬಗೆಗೆ ಎಚ್ಚೆಸ್ವಾರ್ ಬರೆದಿರುವ ಲೇಖನವು ಈ ಹಿರಿಯ ಸಾಹಿತಿ ಮತ್ತು ಪತ್ರಿಕೋದ್ಯಮಿಯ ವ್ಯಕ್ತಿತ್ವ ಮತ್ತು ಸಾಹಿತ್ಯಗಳನ್ನು ಸಮಗ್ರವಾಗಿ ಅಧ್ಯಯನ ಮಾಡುವ ಯಶಸ್ವಿ ಪ್ರಯತ್ನವಾಗಿದೆ. ಡಿವಿಜಿ ಅವರ ಪ್ರಶ್ನಾತೀತವಾದ ಜೀವನ ಪ್ರೀತಿ, ಭಕ್ತಿ-ವೈರಾಗ್ಯಗಳ ಸರಿಯಾದ ಅನುಸಂಧಾನವನ್ನು ಅವರು ನಡೆಸಿದ ಕ್ರಮ, ಮತ್ತು ಅವರ ಜೀವನವನ್ನು ಮುನ್ನಡೆಸಿದ ಮೌಲ್ಯಗಳ

ಬಗ್ಗೆ ಇಲ್ಲಿ ವಿಶ್ಲೇಷಿಸಲಾಗಿದೆ. ಡಿವಿಜಿ ಅವರೊಳಗೆ ಒಬ್ಬ ವಿರಕ್ತ ಮತ್ತು ವಿದೂಷಕ ಯಾವಾಗಲೂ ನೆಲೆಸಿರುತ್ತಿದ್ದರು ಎನ್ನುವ ಎಚ್ಚೆಸ್ಸಾರ್ ಅವರ 'ಜ್ಞಾಪಕಚಿತ್ರಶಾಲೆ'ಯ ಮಹತ್ವವನ್ನು ನೆನಪಿಸುತ್ತಾರೆ.

ಜಿಎಸ್ಸೆಸ್ ಬಗೆಗಿನ ಲೇಖನದಲ್ಲಿ ಸಾಂಸ್ಕೃತಿಕ ಸಂಘಟಕರಾಗಿ ಅವರ ವೈಶಿಷ್ಟ್ಯವನ್ನು ವಿವರಿಸಲಾಗಿದೆ. ಚಿತ್ತಾಲರ ಬಗೆಗಿನ ಲೇಖನ ಅವರ ಸಾಹಿತ್ಯದ ಕಾಳಜಿಗಳನ್ನು ಉತ್ತಮವಾಗಿ ವಿವರಿಸಿದೆ. ಗಿರಡ್ಡಿ ಗೋವಿಂದರಾಜರ ಬಗೆಗಿನ ಲೇಖನವು ವಿಮರ್ಶೆಯ ಶಕ್ತಿ, ಮಿತಿಗಳನ್ನು ಖಚಿತ ಮಾತುಗಳಲ್ಲಿ ಚರ್ಚಿಸಿದೆ. ಇಲ್ಲೆಲ್ಲ ಎಚ್ಚೆಸ್ಸಾರ್ ಸಾಧಿಸಿರುವ ಸಮತೋಲನ ಮತ್ತು ಸೂಕ್ಷ್ಮನೋಟಗಳು ಗಮನೀಯವಾಗಿವೆ.

ಭಾಗ - ೩

ಸುದೀರ್ಘ ಲೇಖನಗಳಲ್ಲಿ ಈ ಲೇಖಕರು ಸಾಧಿಸಿರುವ ಏಕಾಗ್ರತೆಯನ್ನು ಗಮನಿಸಿದ್ದೇವೆ. ಈ ಪುಸ್ತಕದಲ್ಲಿನ ತುಸು ಕಡಿಮೆ ಗಾತ್ರದ ಲೇಖನಗಳೂ ಕೆಲವು ಮುಖ್ಯ ವಿಚಾರಗಳನ್ನು ಹೇಳುತ್ತವೆ. ಉದಾಹರಣೆಗೆ –

> "ಅವರಿಗೆ(ತಿರುಮಲೇಶರಿಗೆ) ಜಗತ್ತನ್ನು ತೋರಿಸುವುದರಲ್ಲಿ ಇರುವ ಆಸಕ್ತಿಯು ಅವುಗಳ ಬಗ್ಗೆ ಏನಾದರೂ ಹೇಳುವುದರಲ್ಲಿಲ್ಲ.... (ಈ) ಕವಿ ನಮಗೆ ನೋಡುವ ಕಣ್ಣುಗಳನ್ನು ಕೊಡುತ್ತಾನೆಯೇ ಹೊರತು ಖಚಿತವಾದ ನೋಟವನ್ನಲ್ಲ..."
>
> (ತಿರುಮಲೇಶರ ಲೋಕದೃಷ್ಟಿ – ಕೆಲವು ಅನಿಸಿಕೆಗಳು)
>
> "ಕನ್ನಡದಲ್ಲಿ ವ್ಯಾಕರಣ, ಭಾಷಾಶಾಸ್ತ್ರ ಛಂದಸ್ಸು ಮುಂತಾದ ಅಧ್ಯಯನ ಶಿಸ್ತುಗಳು ಬೆಳೆದು ಬಂದ ಬಗೆಗೂ ಶಂಕರಭಟ್ಟರು ಅನುಭವಿಸುತ್ತಿರುವ ಸಾಪೇಕ್ಷವಾದ ಅಜ್ಞಾತವಾಸಕ್ಕೂ ಸಂಬಂಧವಿದೆ..."
>
> (ತವರುಮನೆಯಲ್ಲಿಯೇ ಆಗಂತುಕ – ಡಿ.ಎನ್. ಶಂಕರಭಟ್)
>
> "ಕನ್ನಡ ಮೌಲ್ವಿ" ಎಂಬ ಅವರ (ಗೊರೂರರ) ಪ್ರಬಂಧವು ಇಂದಿಗೂ ಕಡ್ಡಾಯವಾದ ಓದನ್ನು ಬಯಸುತ್ತದೆ. ಸಂಸ್ಕೃತಿಯಿಂದ ಪಡೆಯಬಹುದಾದ ಎಲ್ಲವನ್ನೂ ಪಡೆದುಕೊಂಡ ಆ ಮೌಲ್ವಿಯ ಜೀವನವನ್ನು ಮಾದರಿಯೆಂದು ಗ್ರಹಿಸುವ ಗೊರೂರರೂ ನಮಗೆ ಅಷ್ಟೇ ಮುಖ್ಯವಾಗುತ್ತಾರೆ.
>
> (ಎಲ್ಲಿ ಹೋದವೋ ಗೆಳೆಯಾ... ಆ ಕಾಲ)

★

ತಮ್ಮ ವಿಸ್ತೃತ ಓದು ಮತ್ತು ವಿಮರ್ಶಾನುಭವಗಳ ಹಿನ್ನೆಲೆಯಿಂದಾಗಿ ಎಚ್ಚೆಸ್ಸಾರ್ ನಮ್ಮ ಸಮಕಾಲೀನ ಸಾಹಿತ್ಯ, ಸಂಸ್ಕೃತಿ, ವಿಮರ್ಶೆಗಳ ಬಗೆಗೆ ಈ ಕೃತಿಯ ಸಂದರ್ಭದಾಚೆಗೂ ಮುಖ್ಯವೆನ್ನಿಸುವ ಒಳನೋಟಗಳನ್ನು ನೀಡುತ್ತಾರೆ. ಉದಾಹರಣೆಗಾಗಿ ಇವುಗಳನ್ನು ನೋಡಬಹುದು.

> "... ಆಧುನಿಕೋತ್ತರ ತಾತ್ವಿಕತೆಯ ಫಲವಾಗಿ ಸುಧಾರಣೆ, ನೈತಿಕತೆ, ಶೋಷಣೆ ಮುಂತಾದ ಪದಗಳನ್ನೇ ಶಬ್ದಕೋಶದಿಂದ ತೆಗೆದುಹಾಕಬೇಕಾಗಿಲ್ಲ. ಪಶ್ಚಿಮವು

ರೂಪಿಸುವ ಪ್ರತಿಯೊಂದು ಪರಿಕಲ್ಪನೆಗೂ ಅದರದೇ ಆದ ಪಕ್ಷಿಮುಪರ ಅಜೆಂಡಾಗಳಿರುತ್ತವೆ. ಈ ಒಳಗುಟ್ಟನ್ನು ಬಲ್ಲವರು ಸತ್ಯದ ಸಾಪೇಕ್ಷತೆಯನ್ನು ಒಪ್ಪಬಹುದೇ ವಿನಾ ಅದರ ಗೈರುಹಾಜರಿಯನ್ನಲ್ಲ''

(ಧ್ಯಾನಸ್ಥ ಬುಗುರಿ ಮತ್ತು ಸತ್ಯದ ಸ್ಫೋಟ – ಚಂದ್ರಶೇಖರ ಪಾಟೀಲರ ಸಮಗ್ರ ಕಾವ್ಯದ ಮುನ್ನುಡಿ).

''...ವಿಮರ್ಶೆಯು ಸಹಪಯಣ ಮಾತ್ರವಾಗದೆ ಸ್ವತಂತ್ರವಾದ ಹುಡುಕಾಟವೂ ಆಗಿರುತ್ತದೆ. ಒಂದರ್ಥದಲ್ಲಿ ಇವೆಲ್ಲವೂ ಪಠ್ಯ ನಿರ್ಮಾಣದ ಕ್ರಿಯೆಗಳು. ಕವಿತೆ ಒಂದು ಟೆಕ್ಸ್ಟ್ ಆದರೆ ವಿಮರ್ಶೆಯು ಇನ್ನೊಂದು ಟೆಕ್ಸ್ಟ್'' (ಅದೇ).

''ಒಂದು ಭಾಷೆಯ ಸಾಹಿತ್ಯ ಪರಿಸರವು ಕೇವಲ ಮಹಾನ್ ಲೇಖಕರಿಂದ, ಮಹಾಕೃತಿಗಳಿಂದ ಪೂರ್ಣವಾಗುವುದಿಲ್ಲ. ಬದಲಾಗಿ ಬರವಣಿಗೆಯನ್ನು ಗಂಭೀರವಾದ ಶೋಧನ ಮಾಧ್ಯಮವಾಗಿ ಸ್ವೀಕರಿಸಿ, ತಮ್ಮ ಪ್ರತಿಭೆಯ ಚೌಕಟ್ಟಿನಲ್ಲಿ ಯಶಸ್ವೀ ಕೃತಿಗಳನ್ನು ರಚಿಸುವ ಹಲವು ಲೇಖಕರು ವಾಚಕ ಸಮುದಾಯಕ್ಕೆ ಅತ್ಯಗತ್ಯ.''

(ವ್ಯಾಸರಾಯ ಬಲ್ಲಾಳರ ಕಾದಂಬರಿಗಳು : ಕೆಲವು ಸಂಗತಿಗಳು – ಲೇಖನ).

ಈ ಕೃತಿಯ ಇನ್ನೊಂದು ವಿಶೇಷವೆಂದರೆ ವಿಮರ್ಶೆಯ ಸಂದರ್ಭದಲ್ಲಿ ಪ್ರಾಸಂಗಿಕವಾಗಿ ಈ ವಿಮರ್ಶಕರು ಬದುಕಿನ ಬಗ್ಗೆ ಬರೆದಿರುವ ಸಾಲುಗಳು. ಇವು ನಮ್ಮೊಳಗಿನ ಜೀವಭಾವವು ಮೆಚ್ಚಿ ಅಹುದು, ಅಹುದು ಎನ್ನುವಂತಹ ಸಾಲುಗಳು. ಇದಕ್ಕೆ ಕೆಲವು ಉದಾಹರಣೆಗಳು ಇಲ್ಲಿವೆ.

''ಕೊನೆಗೂ ಸಾರ್ಥಕ ಸಂಬಂಧಗಳೆನ್ನುವುದು ಮನುಕುಲದ ಕನಸೇ ವಿನಾ ನಿಜದ ನೆಲೆಯಲ್ಲಿ ದೊರಕಲಾರವೇನೋ! ಮನುಷ್ಯರಿಗೆ ಸಿಗುವುದು ಸಾರ್ಥಕ ಕ್ಷಣಗಳೇ ವಿನಾ ಸಾರ್ಥಕ ಸಂಬಂಧಗಳಲ್ಲ. ಎರಡನೆಯದರ ಹುಡುಕಾಟದಲ್ಲಿ ಮೊದಲನೆಯದನ್ನು ಕಳೆದುಕೊಳ್ಳುವುದು ಹಲವರ ದುರಂತ...'' (ಪ್ರತಿಭಾರ ಕಾವ್ಯದ ಬಗೆಗಿನ ಲೇಖನ).

''ನಾನು ಯಾರು' ಅನ್ನುವುದಕ್ಕಿಂತ 'ನಾನು ಏನು ಮಾಡಬೇಕು' ಅನ್ನುವುದು ಹೆಚ್ಚು ಮುಖ್ಯವಾದಾಗ ಬದುಕನ್ನು ನೋಡುವ ರೀತಿಯೇ ಬೇರೆಯಾಗಿಬಿಡುತ್ತದೆ....' (ಚಿತ್ತಾಲರ ಬಗೆಗಿನ ಲೇಖನ)

''ಮನುಷ್ಯನ ಜೀವನದಲ್ಲಿ ಕ್ರೌರ್ಯಕ್ಕೆ ಒಂದು ಸಾತತ್ಯ ಇರುವಂತೆ ಒಳ್ಳೆಯತನಕ್ಕೂ ಒಂದು ಸಾತತ್ಯ ಇದೆ...'' (ಅದೇ)

★

ತಮ್ಮ ಕೃತಿಗೆ ನಮಸ್ಕಾರ ಎಂಬ ವಿಭಿನ್ನ ಹೆಸರಿಟ್ಟಿರುವ ಎಚ್ಚೆಸ್ವಾರ್, ಪುಸ್ತಕಕ್ಕೆ ಬರೆದಿರುವ ಅರಿಕೆಯಲ್ಲಿ 'ಅಂತಿಮವಾಗಿ ಗೌರವಸಹಿತವಾದ ಅನುಸಂಧಾನವೇ ನಿಜವಾದ ನಮಸ್ಕಾರ' ಎಂದು ನುಡಿದಿದ್ದಾರೆ. ಹಾಗೂ ಇಲ್ಲಿ ತಾವು (ಮಾಡಿರುವ ವಿಮರ್ಶೆಯಲ್ಲಿ) ನುಡಿದಂತೆ ನಡೆದಿದ್ದಾರೆ. ಒಬ್ಬ ಲೇಖಕನ ಸಮಗ್ರ ಸಾಹಿತ್ಯವನ್ನು ಪ್ರೀತಿ ಸಹಿತವಾಗಿ ಓದುವುದು, ಆ ಇಡೀ ಸಾಹಿತ್ಯದ ಸತ್ವ, ಸ್ವರೂಪಗಳನ್ನು ಗ್ರಹಿಸುವುದು, ಇವು ಹೀಗಿರುವಲ್ಲಿ ಲೇಖಕನ ನಂಬಿಕೆ, ಬದ್ಧತೆಗಳನ್ನು ಅರ್ಥ ಮಾಡಿಕೊಳ್ಳುವುದು, ನಂತರ ಒಟ್ಟು ಸಾಹಿತ್ಯ ಸಂಸ್ಕೃತಿಗೆ ಈ ಲೇಖಕ ನೀಡಿರುವ ಕೊಡುಗೆಯನ್ನು ಗ್ರಹಿಸುವುದು – ಇದು ಇಲ್ಲಿನ ವಿಧಾನವಾಗಿದೆ. ತಾವು ಅಧ್ಯಯನಕ್ಕೆ ತೆಗೆದುಕೊಂಡಿರುವ ಲೇಖಕರ ಕೃತಿಗಳನ್ನು ಕೂಲಂಕಷವಾಗಿ ಓದಿ, ಅವರು ರಚಿಸಿದ ಸಾಹಿತ್ಯದ ಆಶಯ, ಆಕೃತಿಗಳೆಡೆಗೆ ಸಹೃದಯ ನೋಟ ಬೀರಿ, ಭಾವುಕ ಸ್ಪಂದನೆ, ಬೌದ್ಧಿಕ ವಿಶ್ಲೇಷಣೆ ಎರಡೂ ತೂಕ ತಪ್ಪದಂತೆ ಬರೆದಿರುವ ಲೇಖನಗಳಿವು.


ಲೇಖನಗಳ ವಸ್ತು ನಿರ್ವಹಣೆ ಬಗ್ಗೆ ನಮಗೆ ಮೂಡುವ ಮೆಚ್ಚುಗೆ ಸರಿಯೇ. ಜೊತೆಗೆ ಈ ವಿಮರ್ಶಕರ ಭಾಷೆಯ ಬಳಕೆ ಕೂಡ ವಿಶೇಷ ಪ್ರಸ್ತಾಪವನ್ನು ಬೇಡುವಂತಹದು. ಕನ್ನಡದ ನಾಣ್ಣುಡಿ, ಗಾದೆ ಮಾತು, ಲೋಕರೂಢಿಯಲ್ಲಿರುವ ಪದಪುಂಜಗಳು, ಭಾವಗೀತೆಗಳು, ದಾಸರಪದ ಇವೆಲ್ಲವೂ ಎಚ್ಚೆಸ್ಸಾರ್‌ರ ನುಡಿಗಡಣದಲ್ಲಿ ಇಡಿಕಿರಿದು, ಸಂದರ್ಭಕ್ಕೆ ಸಲ್ಲುವಂತೆ ಬಳಕೆಯಾಗಿ ಓದುಗರಿಗೆ ಚೆಲುವ ಕನ್ನಡದ ರಸದೌತಣವನ್ನು ಉಣಬಡಿಸುತ್ತವೆ. ಈ ಕೃತಿಯನ್ನೋದುವವರು ಇಲ್ಲಿನ ಭಾಷೆ ಸಂವಹನದಲ್ಲಿ ಸರಳವಾಗಿದ್ದರೂ, ಭಾಷೆಯ ಧ್ವನಿಶಕ್ತಿಯನ್ನು ರೂಪಕ ನಿರ್ಮಾಣ ಸಾಮರ್ಥ್ಯವನ್ನು ಎಷ್ಟು ಚೆನ್ನಾಗಿ ಬಳಸಿಕೊಂಡಿದೆ ಅಲ್ಲವೇ ಎಂದು ಮೂಕವಿಸ್ಮಿತರಾಗಲೇಬೇಕು. ಹಾಗಿದೆ ಇಲ್ಲಿನ ಭಾಷೆ. ಎಚ್ಚೆಸ್ಸಾರ್ ಅವರ ಹಿಂದಿನ ಕೃತಿಗಳಿಗೆ ಹೋಲಿಸಿದಲ್ಲಿ ಭಾಷೆಯ ಸಂವಹನ ಅಷ್ಟೊಂದು ಕಿರಿಕಿರಿ ಎನ್ನಿಸದೆ ಸರಳವಾಗಿರುವುದು ವಿಶೇಷ. ಕನ್ನಡದ ಚೆಲುವನ್ನು ಸವಿಯಲೆಂದೇ ಈ ಪುಸ್ತಕವನ್ನೊಮ್ಮೆ ಓದಬೇಕು.

ನಮಸ್ಕಾರ ಕೃತಿಯನ್ನು ಕೇವಲ ಸಾಹಿತ್ಯ ವಿಮರ್ಶೆಯ ಕೃತಿ ಅಂದರೆ ಅದಕ್ಕೆ ನ್ಯಾಯ ಸಲ್ಲಿಸಿದಂತಾಗುವುದಿಲ್ಲ. ಇದನ್ನು ಎಚ್ಚೆಸ್ಸಾರ್ ಅವರ ಸಾಹಿತ್ಯದೊಂದಿಗಿನ ನಿಡುಗಾಲದ ಪ್ರೇಮಪ್ರಸಂಗದ ಕಥನ ಅನ್ನಬೇಕು. ಇದು "ಕವಿತೆಯೆಂಬ ಬಹುರೂಪಿ ಗೆಳತಿಯ ಚಲನಶೀಲ ನೆಲೆಗಳನ್ನು ಅರಸಲು" ಅವರು ಮಾಡಿದ ಒಮ್ಮನಸ್ಸಿನ ಪ್ರಯತ್ನದ ಆಖ್ಯಾನ. ಎಪ್ಪತ್ತರ ದಶಕದ ಮೊದಲ ಭಾಗದಿಂದಲೂ ವಿಮರ್ಶಾ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಎಚ್ಚೆಸ್ಸಾರ್ ಅವರ ಈ ಕೃತಿಯನ್ನು ಎಚ್ಚರಿಕೆಯಿಂದ ಓದಿದರೆ ಆ ಕಾಲದಿಂದ ಈ ಕಾಲದವರೆಗೆ ಕನ್ನಡ ವಿಮರ್ಶೆಯ ನೋಟ-ನಿಲುವುಗಳಲ್ಲಿ ಆದ ಬದಲಾವಣೆ, ಬೆಳವಣಿಗೆಗಳನ್ನೂ ನಾವು ಅರ್ಥ ಮಾಡಿಕೊಳ್ಳಬಹುದು. ಇಲ್ಲಿ ಒಬ್ಬ ಲೇಖಕನ ಸಾಹಿತ್ಯದಿಂದಾಗಿ ತನಗಾಗಿರುವ ಪ್ರಯೋಜನಗಳನ್ನು ಪ್ರೀತಿ, ಗೌರವಗಳಿಂದ ನೆನೆಯುವ ಎಚ್ಚೆಸ್ಸಾರ್ ಕೇವಲ ಭಾವಲಿಪ್ತ ಪ್ರಶಂಸೆ ಮಾಡುವುದಕ್ಕೆ ಸೀಮಿತವಾಗದೆ, ಒಂದು ಸಂಸ್ಕೃತಿಯ ಸಂದರ್ಭದಲ್ಲಿ ಸಹ ಈ ಲೇಖಕನ ಪ್ರಾಮುಖ್ಯವನ್ನು ಅರ್ಥ ಮಾಡಿಕೊಳ್ಳಲು ಗಂಭೀರ ಪ್ರಯತ್ನ ಮಾಡುತ್ತಾರೆ. ಆ ದೃಷ್ಟಿಯಿಂದ ಎಚ್ಚೆಸ್ಸಾರ್ ಕನ್ನಡ ಸಾಹಿತ್ಯ - ಸಂಸ್ಕೃತಿಯ ಧೀಮಂತ ಮನಸ್ಸುಗಳಿಗೆ ಕನ್ನಡದ ಸಾಮೂಹಿಕ ಮನಸ್ಸು ಸಲ್ಲಿಸಬೇಕಾದ ನಮಸ್ಕಾರವನ್ನು ಸಲ್ಲಿಸಿದ್ದಾರೆ ಅನ್ನಬೇಕು. ಈ ಕೃತಿಯ ಹಿಂದೆ ವರ್ಷಗಟ್ಟಲೆಯ ಓದು, ಚಿಂತನೆಗಳಿವೆ. ಅಪಾರ ಶ್ರಮವಿದೆ. ಇಲ್ಲಿನ ಪ್ರಶಂಸೆ ಮುಖಸ್ತುತಿಯಲ್ಲ, ಟೀಕೆ ಅಪ್ರಸ್ತುತವಲ್ಲ. ಮೆಚ್ಚುಗೆ, ವಿಮರ್ಶೆ, ಭಾವ, ಬುದ್ಧಿ ಎಲ್ಲವೂ ಇಲ್ಲಿ ಆರೋಗ್ಯಕರವಾಗಿ, ಹದವಾಗಿ ಮೇಳೈಸಿವೆ. ಈ ಹದ ಸಾಧ್ಯವಾಗಿರುವುದು ಆಳವಾದ ಅಧ್ಯಯನ ಮತ್ತು ಪೂರ್ವಗ್ರಹರಹಿತ ನಿಲುವುಗಳು ಸರಿಬೆರೆತಿರುವುದರಿಂದ. ಹಾಗೆಂದೇ ಈ ಕೃತಿ ನಮ್ಮ ಸಾಹಿತ್ಯ ಸಂಸ್ಕೃತಿಗೆ ಮೌಲಿಕ ಕೊಡುಗೆಯಾಗಿದೆ. ಮಾಸ್ತಿ, ಡಿವಿಜಿ ಮುಂತಾದ ಹಿರಿಯರನ್ನು ಕೇವಲ ಓದಿನ ಮೂಲಕ ಮಾತ್ರ ಗ್ರಹಿಸುವ ಅನಿವಾರ್ಯ ಇರುವ ಹೊಸ ಪೀಳಿಗೆಯ ನಮ್ಮಂಥವರಿಗಂತೂ ಈ ಪುಸ್ತಕ ಎಚ್ಚೆಸ್ಸಾರ್ ಅವರ ಪರಿಭಾಷೆಯಲ್ಲೇ ಹೇಳುವುದಾದರೆ ಒಂದು 'ಮಸ್ಟ್ ರೀಡ್'.

ಕನ್ನಡದ ಇಪ್ಪತ್ತೆರಡು ಅಕ್ಷರದೀಪಗಳಿಗೆ ಅನನ್ಯವಾಗಿ ನಮಸ್ಕರಿಸಿರುವ ಎಚ್ಚೆಸ್ಸಾರ್ ಸರ್, ನಿಮಗಿದೋ ನಮ್ಮ ನಮಸ್ಕಾರ.

◆ **ಡಾ. ಎಲ್.ಜಿ. ಮೀರಾ**

೧೪೯, ೭ನೇ ಅಡ್ಡರಸ್ತೆ, ೫ನೇ ಮೇನ್, ಆರ್.ಪಿ.ಸಿ. ಲೇಔಟ್, ವಿಜಯನಗರ ೨ನೇ ಹಂತ, ಬೆಂಗಳೂರು - ೫೬೦ ೦೪೦



ಪ್ರತಿಕ್ರಿಯೆ

✦

ಸಂಚಯವನ್ನು ಪ್ರತಿ ಸಾರಿಯೂ ಶ್ರದ್ಧೆಯಿಂದ, ಸತ್ಯನಿಷ್ಠೆಯಿಂದ, ಜ್ಞಾನದ ಪ್ರೀತಿಯಿಂದ ತರುತ್ತಿದ್ದೀರಿ. ಕನ್ನಡ ಸಾಹಿತ್ಯ ಉಳಿಯುವುದು, ಬೆಳೆಯುವುದು 'ಸಂಚಯ'ದಂತಹ ಕಣ್ಣುಗಳು ಇದ್ದಾಗ. ಋಜುವಾತುವನ್ನು ಮೊದಲ ಕೆಲವು ವರ್ಷಗಳು ಪ್ರಕಟಿಸುವಾಗಿನ ನನ್ನ ಸಂತೋಷಗಳು, ಕಷ್ಟಗಳು, ಆಗ ನಾನು ಪಡೆದ ಸ್ನೇಹಗಳು ನಿಮ್ಮ ಪತ್ರಿಕೆ ನೋಡಿ ನೆನಪಾದವು.

ಡಾ. ಯು.ಆರ್. ಅನಂತಮೂರ್ತಿ, ಬೆಂಗಳೂರು - ೫೬೦ ೦೯೪

✦

ಸಂಚಯ ತಲುಪಿತು. ವಿನ್ಯಾಸದಲ್ಲೂ, ಒಳಾರ್ಥದಲ್ಲೂ 'ಸಂಚಯ'ದ ತಿರುಳು ಗಟ್ಟಿಯಾಗುತ್ತಿದೆ. ಶಿಸ್ತು ಮತ್ತು ಸೌಂದರ್ಯಗಳೆರಡನ್ನೂ ಹಿಡಿದಿಡುವ ಆಧುನಿಕ 'ಕಾಯಕ' ಸಿದ್ಧಿಸಿದೆ. ಕನ್ನಡದ ಬದುಕು ಜೊಳ್ಳಾಗುತ್ತಿರುವಾಗ, ಜೊಳ್ಳು ಬದುಕನ್ನೂ ಒಂದು ಗಟ್ಟಿ ಅನುಭವವನ್ನಾಗಿ ಹಿಡಿದಿಡುವ ಕಠಿಣ ಶ್ರಮದಲ್ಲಿ ಹೊಸ ಲೇಖಕರು ಕಷ್ಟಪಡುತ್ತಿದ್ದಾರೆ. ಇವರ ದುಡಿಮೆಯ ಫಲಗಳನ್ನು ಪಾಕಗೊಳಿಸಿಕೊಡುವ ಇನ್ನೊಂದು ಬಗೆಯ ಶ್ರಮವನ್ನು ನೀವು ಮಾಡುತ್ತಿದ್ದೀರಿ.

ನಿಮ್ಮ 'ತಪಸ್ಸಿ'ನ ಫಲ, ನಿಮ್ಮ ನಂತರವೂ ಉಳಿಯುವಂತಹದು. ಖಾಸನೀಸರ ಕತೆಗಳಂತೆ.

ಆನಂದ ಝುಂಜರವಾಡ, ಮುಧೋಳ

✦

ಈ ಸಲದ ಸಂಚಯ (೭೨) ವನ್ನು ನಿಧಾನವಾಗಿ ಓದಿ ಇಂದು ಆಸ್ವಾದಿಸಿದೆ. ನಾ. ದಿವಾಕರ ಅವರ ಲೇಖನದಲ್ಲಿ ಅನೇಕ ಸತ್ಯಗಳು ಅಡಗಿವೆ. ಸ್ವಲ್ಪ ಎಚ್ಚರಿಕೆಯಿಂದ ಗಮನಿಸಬೇಕಾದ ವಿವರಗಳಿವೆ. ಈ ಲೇಖನವನ್ನು ಎಲ್ಲ ಕನ್ನಡಿಗರೂ ಓದಲೆಂದು ನಾನು ಆಶಿಸುತ್ತೇನೆ. ಆತ ತುಂಬ ನಿಜವಾಗಿ ನಾಡುನುಡಿಗಳಲ್ಲಿ ಆಸಕ್ತರೆಂಬ ಬಗ್ಗೆ ಅನುಮಾನವಿಲ್ಲ. ಪ್ರತಿಭಾ ನಂದಕುಮಾರ್‌ರ ಕಾವ್ಯದ ಬಗ್ಗೆ ವಿಶಿಷ್ಟ ಲೇಖನಗಳಿವೆ. ನನಗೆ ಈ ಕಾರ್ಯ ಪ್ರಿಯವೆನಿಸಿತು. ನಮ್ಮ ಕವಯತ್ರಿಯರಲ್ಲಿ ಪ್ರತಿಭಾ ನಿಜವಾಗಿ ಸಾಮರ್ಥ್ಯವುಳ್ಳವಳೆಂದರೆ ಅತಿಶಯೋಕ್ತಿಯಲ್ಲ. ಉಜ್ವಲವಾದ ರೂಪದಲ್ಲಿ ರಚಿತವಾದ ಅನೇಕ ಕವನಗಳಿವೆ. ಆದರೆ ಅಂಥಕೋಪವನ್ನು ಪ್ರದರ್ಶಿಸುವುದು ಇನ್ನಾರಿಗೆ ಸಾಧ್ಯವಾಗಿದೆ. ಈ ಕವಯಿತ್ರಿಯಿಂದ ನಾನು ಬಹು ಶ್ರೇಷ್ಠ ಕವನಗಳು ರಚಿತವಾಗುತ್ತವೆ ಎಂದು ನಿರೀಕ್ಷಿಸುತ್ತೇನೆ. ಸ್ವಲ್ಪ ಪ್ರತಿಮಾತ್ಮಕವಾಗಿ ಬರೆದರೆ ಆಕೆಯ ಕವನಕ್ಕೂ ಬಿಗಿ ಬಂದು ಗಂಭೀರ

ವಾಗುತ್ತದೆ. ಹಾಗೆ ಬಲವಂತವಾಗಿ ಮೂಡಿಸಬಾರದು. ಅದು ತಾನಾಗಿ ರೂಪುಗೊಳ್ಳಬೇಕು. ಪ್ರತಿಭಾ, ಸ. ಉಷಾ, ಮತ್ತು ಡಿ.ಸಿ. ಗೀತಾ ಈ ಮೂವರಿಂದ ಮುಂದೆ ಬಹು ಪ್ರಧಾನವಾದ ಕೃತಿಗಳನ್ನು ನಿರೀಕ್ಷಿಸಬಹುದು. ಪೀಚು ಫಲವಾಗಬೇಕಾದರೆ ಕಾಯಬೇಕು.

ಪ್ರೊ|| ಜಿ. ವೆಂಕಟಸುಬ್ಬಯ್ಯ, ಬೆಂಗಳೂರು

✦

ಸಂಚಯ ಸರ್ವಾಂಗ ಸುಂದರವಾಗಿ ನಮ್ಮ ಕೈಸೇರಿದೆ. ಶುದ್ಧ ಸಾಹಿತ್ಯ ಪ್ರೀತಿ-ಅನನ್ಯ ಕಳಕಳಿಯಿಂದ ಕೂಡಿರುವ ಶುಭ್ರ ಮನಸ್ಸು ವಿಚ್ಛಿನ್ನಗೊಂಡಿರುವ ಮನಗಳನ್ನು ಸಂಚಯಗೊಳಿಸಿದೆ. ಧನ್ಯವಾದಗಳು. ಸಂಚಯ ಬಳಗಕ್ಕೆ ಈಗ ದ್ವಿದಶಮಾನೋತ್ಸವದ ಸಂಭ್ರಮ. ಅಭಿನಂದನೆಗಳು. ಪತ್ರಿಕೆ ಕೆಲವಾದರೂ ದಿಟ್ಟ ಪ್ರಾಮಾಣಿಕ(ವಸ್ತು ನಿಷ್ಠ) ವಿಮರ್ಶಕ ದನಿಗಳನ್ನು ಹುಟ್ಟುಹಾಕಿದೆಯಲ್ಲ ಎನ್ನುವ ಸಮಾಧಾನ. 'ಅನಕೃ ಕನ್ನಡ ಮತ್ತು ಸಂಸ್ಕೃತಿ' ಕೃತಿ ಪರಿಚಯ ವಿಸ್ತೃತವಾದರೂ ಚಿಂತನ ಶೀಲವಾಗಿದೆ. ಸಂಚಯದ ಸಂಕಿರಣದ ಮುಖಾಂತರ ಕವಿ-ಕಾವ್ಯ ಜಿಜ್ಞಾಸೆಗೆ ಒಳಪಡಿಸುತ್ತಿರುವುದು ಆರೋಗ್ಯಕರ ಧೋರಣೆ. ಒಬ್ಬ ಸಾಹಿತಿಯನ್ನು ಸಮಗ್ರವಾಗಿ ಓದಲು ಅನುವು ಮಾಡಿದಂತಾಗುವುದು. ಸಾಹಿತ್ಯ ಸ್ಪರ್ಧೆ ಬಹುಮಾನಿತ ಕವಿತೆಗಳು ಭರವಸೆ ಹುಟ್ಟಿಸುವಂತಿವೆ. 'ಕಳಚಿದ ಕೊಂಡಿ' ಕವಿ ವಿದ್ಯಾರ್ಥಿಯಾದರೂ ಸಾಮರ್ಥ್ಯ-ಅನುಭವ ಹದವಾಗಿ ಬೆರೆತಿದೆ.

ಪಿ. ಹೇಮಲತಾ, ಮೈಸೂರು

✦

ಸಂಚಯ ೭೨ ತಲುಪಿತು. ಸುಮಾರು ೪೦ ಪುಟಗಳು ಮೀಸಲಾಗಿದ್ದ ಪ್ರತಿಭಾ ನಂದಕುಮಾರ್ ರವರ ಕಾವ್ಯ ವಿಶ್ಲೇಷಣೆ ಸಕಾಲಿಕವಾಗಿತ್ತು. ಎನ್.ಎಸ್. ಶ್ರೀಧರಮೂರ್ತಿಯವರ ವಿಮರ್ಶೆ ಹೆಚ್ಚು ಮೌಲಿಕವೆನಿಸಿತು. ಕವಿತೆ-ಕಾವ್ಯ ಮನೋಭಾವದ ವಿಶ್ಲೇಷಣೆಯ ಜೊತೆಗೆ, ಪ್ರತಿಭಾರ 'ಮಿತಿ'ಗಳನ್ನು ಅಲ್ಲಲ್ಲಿ ಹೇಳುತ್ತ ಹೋದುದು ಅವರ ನೇರ-ನಿಷ್ಠುರ ವಿಮರ್ಶೆಗೆ ಸಾಕ್ಷಿಯಾಗಿದೆ.

ನಿಜ. ಪ್ರತಿಭಾ ನಂದಕುಮಾರ್‌ರವರ ಕಾವ್ಯದ ದಾರಿಗೆ ತನ್ನದೇ ಆದ ಐಡೆಂಟಿಟಿ ಇದೆ. ಆದರೆ ಅವರ 'ಭಿಡೆ' ಇರದ ಮನೋಭಾವ- ಅಭಿವ್ಯಕ್ತಿ ಎಷ್ಟೋ ಸೂಕ್ಷ್ಮ ಕವಿತೆಗಳಾಗಬಹುದಾದವುಗಳನ್ನು 'ವಾಚ್ಯ'ವಾಗಿಸಿಬಿಟ್ಟಿವೆ. ನೇರ ಮತ್ತು ನಿಸ್ಸಂಕೋಚದ ಶಬ್ದ ಪ್ರಯೋಗಗಳು ಕೆಲವೊಮ್ಮೆ ಕವಿತೆಯೊಂದರ ನಯ-ನಾಜೂಕನ್ನು ನಿರ್ಲಕ್ಷಿಸಿಬಿಡುತ್ತವೆ. (ಎ.ಕೆ. ರಾಮಾನುಜನ್ ಸಹ ಒಮ್ಮೊಮ್ಮೆ ಇಂತಹ ಶಬ್ದಗಳ ಮೊರೆಹೋಗುತ್ತಾರಾದರೂ ಅದು ಕಾವ್ಯದ ಗಹನತೆ ಬಿಟ್ಟು ಕೊಡುವುದಿಲ್ಲ) ಗಂಡು ಮತ್ತು ಹೆಣ್ಣಿನ ಸಂಬಂಧವನ್ನು 'ಲೈಂಗಿಕತೆ'ಯ ವಿವರದ ನೆಲೆಯಲ್ಲಿ ಪರಿಭಾವಿಸುವಾಗ ಪ್ರತಿಭಾನಂದಕುಮಾರ್ ಈ ಬಗೆಯ ಪ್ರಯೋಗಗಳನ್ನು ಮಾಡಿರುವುದು ಗಮನಾರ್ಹ.

ಪುರುಷ ಜಗತ್ತಿನೊಂದಿಗೆ ಸಂಬಂಧವನ್ನು ಕೇವಲ ಲೇವಡಿ, ಅನುಮಾನಗಳ ನೆಲೆಯಿಂದ ಗ್ರಹಿಸುವ ಇವರ ಬಹುತೇಕ ಕವಿತೆಗಳು ಅದರಾಚೆಗಿನ ಬದುಕನ್ನು ಪುನಃ ಕಟ್ಟಿಕೊಳ್ಳುವ ನಂಬಿಕೆಯನ್ನೇ ನೆಚ್ಚಿಕೊಳ್ಳುವುದಿಲ್ಲ. ಇನ್ನುಳಿದಂತೆ ಪ್ರತಿಭಾರ ಕಾವ್ಯ ಮಹಿಳಾ ಸಂವೇದನೆಯ ಹತ್ತು ಹಲವು ಅರ್ಥಸಾಧ್ಯತೆಗಳು ತೆರೆದು ತೋರಿಸುವಷ್ಟು ಮಾದರಿಯಾಗಿಯೂ ನಿಲ್ಲುತ್ತದೆ. ನಿಸ್ಸಂಕೋಚ ಮತ್ತು ಅನಿಸಿದ್ದನ್ನು ಹಾಗೇ ಹೇಳಿಕೊಳ್ಳುವ ಸಹಜ ಅಭಿವ್ಯಕ್ತಿಗೆ ಕಾವ್ಯ ಮಾಧ್ಯಮ ಬಳಸಿಕೊಂಡ ರೀತಿಯನ್ನು ಉಪೇಕ್ಷಿಸಬೇಕಾಗಿಲ್ಲ. ಎನ್.ಎಸ್. ಶ್ರೀಧರಮೂರ್ತಿಯವರು ಹೇಳಿದಂತೆ 'ವಾಸ್ತವದ ಗಮ್ಯ ವಿವರಗಳು ದಾರ್ಶನಿಕ ರೂಪಾಂತರ ಹೊಂದುವ ಕ್ರಿಯೆ'ಗೆ ಪ್ರತಿಭಾ ನಂದಕುಮಾರ್ ಹೊರಳಬೇಕಾದುದು ಅಪೇಕ್ಷಣೀಯ.

ವಾಸುದೇವ ನಾಡಿಗ್, ಏನಿಗದಲೆ, ಚಿಂತಾಮಣಿ




ಸಂಚಯದ ಪ್ರಕಟಣೆಗಳು

1) ಗಾಜು (ಕವಿತೆಗಳು)	ವಿವಿಧ ಕವಿಗಳು	ರೂ. 8-00*
2) ಎ.ಕೆ. ರಾಮಾನುಜನ್ ಹೆಜ್ಜೆ ಗುರುತು	ವಿವಿಧ ಲೇಖಕರು	ರೂ. 15-00*
3) ಶಿಕಾಡ (ಕವನ ಸಂಕಲನ)	ಜಿ. ಕೆ. ರವೀಂದ್ರಕುಮಾರ್	ರೂ. 35-00*
4) ಡ್ರೀಮರ್ (ಕವಿತೆಗಳು)	ಡಿ. ವಿ. ಪ್ರಹ್ಲಾದ್	ರೂ. 18-00
5) ಅಭಿಮುಖಿ (ಲೇಖನಗಳು)	ಎನ್.ಎಸ್. ಶ್ರೀಧರಮೂರ್ತಿ	ರೂ. 20-00*
6) ಬಗೆ ತೆರೆದ ಬಾನು (ಸಂದರ್ಶನಗಳು)	ಸಂ. ಡಿ. ವಿ. ಪ್ರಹ್ಲಾದ್	ರೂ. 60-00
7) ಚೌಕಟ್ಟು (ದೃಶ್ಯಕಲೆ ಕುರಿತು)	ಸಂ. ಎಚ್.ಎ.ಅನಿಲ್‌ಕುಮಾರ್	ರೂ. 25-00
8) ಮೌನದ ಹೊತ್ತು (ಅನುವಾದಿತ ಕವಿತೆಗಳು)	ಸು. ರಂ. ಎಕ್ಕುಂಡಿ	ರೂ. 20-00
9) ಕನಸು ಕೋಳಿಯ ಕತ್ತು (ಕವನಗಳು)	ಗೋವಿಂದ ಹೆಗಡೆ	ರೂ. 30-00
10) ನಾಟಕ ಅಂತರಂಗ	ಎ.ಆರ್. ನಾಗಭೂಷಣ	ರೂ. 40-00
11) ಮುಕ್ತಛಂದ	ಶಾಂತಿನಾಥ ದೇಸಾಯಿ ನೆನಪಿನ ಸಂಪುಟ	ರೂ. 85-00
12) ಕಂಬಾರರ ನಾಟಕಗಳು	ಸಂ. ವಿಕ್ರಮ ವಿಸಾಜಿ	ರೂ. 45-00
13) ಅವಧೂತನೊಬ್ಬನ ರೂಪಾಂತರ	ಕಥಾ ಸಂಕಲನ	ರೂ. 30-00
14) ಮರೆತ ಮಾತು (ಕವಿತೆಗಳು)	ಡಿ.ಎಸ್. ರಾಮಸ್ವಾಮಿ	ರೂ. 45-00
15) ಎರಡು ಏಕಾಂಕಗಳು (ನಾಟಕಗಳು)	ಚಿ. ಶ್ರೀನಿವಾಸರಾಜು	ರೂ. 20-00
16) ಹೊಸ್ತಿಲು ಹಿಮಾಲಯದ ಮಧ್ಯೆ (ಕವಿತೆಗಳು)	ವಾಸುದೇವ ನಾಡಿಗ್	ರೂ. 40-00*
17) ಏಕೂಪೆ ಫೆಬ್ರವರಿ	ಸಂ.: ಸುಗತ	ರೂ. 30-00
18) ಅಗಣಿತ ಚಹರೆ (ಕವಿತೆಗಳು)	ಸಂದೀಪ ನಾಯಕ	ರೂ. 30-00
19) ಬೆಳಕಿನಾಟ (ವಿಮರ್ಶೆ)	ಡಾ. ಜಿ.ಬಿ. ಹರೀಶ	ರೂ. 60-00
20) ನಾಳೆಯಿಂದ (ಕವಿತೆಗಳು)	ಡಿ.ವಿ. ಪ್ರಹ್ಲಾದ್	ರೂ. 30-00
21) ಜೀವ ಮಿಡಿತದ ಸದ್ದು (ಕವಿತೆಗಳು)	ವಿಭಾ	ರೂ. 50-00



*ಪ್ರತಿಗಳು ಮುಗಿದಿವೆ.





ಸಂಚಯ ಗ್ಯಾಲರಿ





SANCHAYA (Quarterly)
MAG (2) PRB-DECL : 309/94-95

EDITED, PRINTED & PUBLISHED BY
D.V. PRAHLAD
NO. 100, 2ND MAIN, 6TH BLOCK
3RD STAGE, 3RD PHASE,
BANASHANKARI, BANGALORE - 560 085
PH : 080-2679 1925